
ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 29 | ಜುಲೈ 12–18, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com



ಕ್ಷಮಿಸಿ ಸ್ಟ್ಯಾನ್ ಸ್ವಾಮಿ






ಕನ್ನಡಿಯೊಳಗಿನ ಗಂಟು 371ಜೆ ಕಲಂ



ರಫೇಲ್ ವಿವಾದಕ್ಕೆ ಮರು ಜೀವ





ನಾಲ್ಕು ವರ್ಷಗಳ ಪದವಿ ವ್ಯಾಸಂಗ ಬೇಡವೇ ಬೇಡ

ಇತಿಹಾಸವನ್ನು ವಿರೂಪಗೊಳಿಸುವ ಮತ್ತೊಂದು ಪ್ರಯತ್ನ

‘ಕೃಷಿ ರಕ್ಷಿಸಿ–ಪ್ರಜಾಪ್ರಭುತ್ವ ಉಳಿಸಿ–ಮೋದಿ ಸರ್ಕಾರ ತೊಲಗಿಸಿ’ ರಾಜ್ಯಾದ್ಯಂತ ಮತಪ್ರದರ್ಶನ

ಲಸಿಕೆ ಡೋಸ್ ಲಭ್ಯತೆ 216 ಕೋಟಿಯಿಂದ 135 ಕೋಟಿಗಿಳಿಯುವುದು ಗಾಬರಿ ಹುಟ್ಟಿಸುವಂತದ್ದು
ರಫೆಲ್ ವ್ಯವಹಾರದ ಬಗ್ಗೆ ಫ್ರೆಂಚ್ ತನಿಖೆ–ಈಗಲಾದರೂ ಜೆಪಿಸಿ ರಚಿಸಬೇಕು

ಜೂನ್ 3ರಂದು ಸಭೆ ಸೇರಿದ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಆಗಸ್ಟ್–ಡಿಸೆಂಬರ್ 2021ರ ಅವಧಿಯಲ್ಲಿ ದೇಶದಲ್ಲಿ 216 ಕೋಟಿ ಡೋಸುಗಳು ಲಭ್ಯವಾಗುತ್ತವೆ ಎಂದು ಮೇ 13ರಂದು ಹೇಳಿಕೊಂಡ ಮೋದಿ ಸರಕಾರ, ಜೂನ್ 26ರಂದು ಸುಪ್ರಿಂ ಕೋರ್ಟಿಗೆ ಸಲ್ಲಿಸಿದ ಅಫಿಡವಿಟ್‌ನಲ್ಲಿ ಈ ಸಂಖ್ಯೆಯನ್ನು 135 ಕೋಟಿಗೆ ಗಮನಾರ್ಹವಾಗಿ ಇಳಿಸಿರುವುದು ವರ್ಷಾಂತ್ಯದ ಗುರಿ ತಲುಪುವಲ್ಲಿ ಒಂದು ಗಾಬರಿಪಡಿಸುವ ಕೊರತೆ ಎಂದು ಹೇಳಿದೆ.

ರಫೆಲ್ ವ್ಯವಹಾರ ಮತ್ತೆ ಸುದ್ದಿಯಾಗುತ್ತಿದ್ದು, ಈ ವ್ಯವಹಾರಕ್ಕೆ ಆಳವಾದ ಭ್ರಷ್ಟಾಚಾರ ಮತ್ತು ಕಪ್ಪು ಹಣವನ್ನು ತೊಳೆಯುವ ಕೃತ್ಯದ ಕೆಸರು ಮೆತ್ತಿಕೊಂಡಿದೆ ಎಂಬ ಸಂದೇಹಗಳನ್ನು ದೃಢಪಡಿಸುತ್ತಿದೆಯಾದ್ದರಿಂದ ಈ ಇಡೀ ಪ್ರಕರಣದಲ್ಲಿ ಪ್ರಧಾನ ಮಂತ್ರಿಗಳು ಮತ್ತು ಸರಕಾರದ ಪಾತ್ರವನ್ನು ತನಿಖೆ ಮಾಡಲು ಮತ್ತು ಈ ವ್ಯವಹಾರದ ಸತ್ಯಾಂಶವನ್ನು ಸ್ಥಾಪಿಸಲು ಒಂದು ಜಂಟಿ ಸಂಸದೀಯ ಸಮಿತಿ(ಜೆಪಿಸಿ)ಯನ್ನು ರಚಿಸಬೇಕು ಎಂದು ಮತ್ತೊಮ್ಮೆ ಆಗ್ರಹಿಸಿದೆ.

ಇದಲ್ಲದೆ ಬೆಲೆಯೇರಿಕೆ ಮತ್ತು ಇತರ ವಿಷಯಗಳನ್ನೂ ಚರ್ಚಿಸಿದ ಈ ಸಭೆಯ ನಂತರ ಹೊರಡಿಸಿದ ಅದರ ಪತ್ರಿಕಾ ಹೇಳಿಕೆ ಹೀಗಿದೆ:

ಕೊವಿಡ್ ಲಸಿಕೆ

ಮಹಾಸೋಂಕನ್ನು ನಿಭಾಯಿಸುವ ಆಡಳಿತಗಾರರ ಪ್ರಕಾರ ಸೋಂಕಿನ ಎರಡನೇ ಅಲೆ ತಗ್ಗುತ್ತಿದೆ. ಆದರೆ ಸೋಂಕಿತರ ಸಂಖ್ಯೆಯಲ್ಲಿ ಗಮನಾರ್ಹ ಇಳಿಕೆ ಆಗಿಲ್ಲ. ಇದು ಗಾಬರಿ ಮತ್ತು ಆತಂಕ ಉಂಟುಮಾಡುವಂತದ್ದು.

ನಮ್ಮ ಜನಗಳ ಜೀವಗಳನ್ನು ಉಳಿಸಲು ಮತ್ತು ಈ ಮಹಾಸೋಂಕನ್ನು ತಡೆದಿಡುವ ಏಕೈಕ ದಾರಿಯೆಂದರೆ ಒಂದು ಬೃಹತ್ ಪ್ರಮಾಣದ ಉಚಿತ ಸಾರ್ವತ್ರಿಕ ಸಾಮೂಹಿಕ ಲಸಿಕೀಕರಣ ಕಾರ್ಯಕ್ರಮ. ಈ ವರ್ಷಾಂತ್ಯದೊಳಗೆ ಎಲ್ಲ ವಯಸ್ಕರಿಗೆ ಲಸಿಕೆ ಹಾಕುವ ಗುರಿ ಸಾಧಸಲು 190 ಕೋಟಿಯಷ್ಟು ಲಸಿಕೆ ಡೋಸುಗಳು ಬೇಕಾಗುತ್ತವೆ. ಆಗಸ್ಟ್–ಡಿಸೆಂಬರ್ 2021ರ ಅವಧಿಯಲ್ಲಿ ದೇಶದಲ್ಲಿ 215 ಕೋಟಿ ಡೋಸುಗಳು ಲಭ್ಯವಾಗುತ್ತವೆ ಎಂದು ಮೇ 13ರಂದು ಹೇಳಿಕೊಂಡ ಮೋದಿ ಸರಕಾರ, ಜೂನ್ 26ರಂದು ಸುಪ್ರಿಂ ಕೋರ್ಟಿಗೆ ಸಲ್ಲಿಸಿದ ಅಫಿಡವಿಟ್‌ನಲ್ಲಿ ಈ ಸಂಖ್ಯೆಯನ್ನು 135 ಕೋಟಿಗೆ ಗಮನಾರ್ಹವಾಗಿ ಇಳಿಸಿದೆ. ಇದು ವರ್ಷಾಂತ್ಯದ ಗುರಿ ತಲುಪುವಲ್ಲಿ ಒಂದು ಗಾಬರಿಪಡಿಸುವ ಕೊರತೆ.

ಮೋದಿ ಸರಕಾರ ತಕ್ಷಣವೇ ಜಗತ್ತಿನಲ್ಲಿ ಲಭ್ಯವಾಗುವ ಎಲ್ಲೆಡೆಗಳಿಂದಲೂ ಲಸಿಕೆಗಳನ್ನು ತರಿಸಬೇಕು ಮತ್ತು ಲಸಿಕೀಕರಣ ಅಭಿಯಾನವನ್ನು ತೀವ್ರಗೊಳಿಸಬೇಕು. ಭಾರತ ಮತ್ತು ನಮ್ಮ ಜನತೆ ಮೂರನೇ ಅಲೆಯನ್ನು ಎದುರಿಸಲು ಸಾಧ್ಯವಾಗದು, ಅದನ್ನು ಸಾಮೂಹಿಕ ಲಸಿಕೀಕರಣದ ಮೂಲಕ ತಡೆಯಲೇ ಬೇಕಾಗಿದೆ ಎಂದು ಪೊಲಿಟ್‌ಬುರೊ ಎಚ್ಚರಿಸಿದೆ.

ಶಕ್ತಿ ಉಡುಗಿಸುವ ಬೆಲೆಯೇರಿಕೆ

ಪ್ರತಿದಿನ ಎಂಬಂತೆ ಏರುತ್ತಿರುವ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳು ಜನಗಳ ಜೀವನಾಧಾರಗಳನ್ನು ನೇರವಾಗಿ ಕುಂಠಿತಗೊಳಿಸುತ್ತಿವೆಯಲ್ಲದೆ, ಸರ್ವತೋಮುಖ ಹಣದುಬ್ಬರದ ಸುರುಳಿ ಏರಿ ಬರುವಂತೆ ಮಾಡಿವೆ. ಎಲ್ಲ ಆಹಾರ ಪದಾರ್ಥಗಳ ಬೆಲೆಗಳು ಏರುತ್ತಿವೆ. ಅಡುಗೆ ಎಣ್ಣೆಗಳ ಬೆಲೆಗಳು ಗಗನಕ್ಕೇರಿವೆ. ಅಡುಗೆ ಅನಿಲದ ಸಬ್ಸಿಡಿ ದರಗಳ ಸಿಲಿಂಡರ್ ವೆಚ್ಚವೂ ಕಳೆದ ಏಳು ತಿಂಗಳಲ್ಲಿ ರೂ.250ರಷ್ಟು ಏರಿದೆ.

ಈ ಮೋದಿ ಸರಕಾರ ಪೆಟ್ರೋಲ್ ಮೇಲಿನ ಅಬಕಾರಿ ಸುಂಕಗಳನ್ನು 256 ಶೇ. ದಷ್ಟು ಮತ್ತು ಡೀಸೆಲ್ ಮೇಲೆ 820 ಶೇ. ದಷ್ಟು ಹೆಚ್ಚಿಸಿದೆ. ಈಗಾಗಲೆ ಮಹಾಸೋಂಕನ್ನು ಎದುರಿಸಬೇಕಾದ್ದರಿಂದ ಹೆಚ್ಚಿನ ವೆಚ್ಚಗಳ ಹೊರೆಯನ್ನು ಹೊತ್ತಿರುವ ಜನಗಳ ಬದುಕುಗಳನ್ನು ಹಾಳುಗೆಡವಿ, ಅವರ ಖರ್ಚಿನಲ್ಲಿ ಕೇಂದ್ರ ಸರಕಾರ ಆದಾಯಗಳನ್ನು ಬಾಚಿಕೊಳ್ಳುತ್ತಿದೆ.

ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಈ ಅಬಕಾರಿ ಸುಂಕಗಳನ್ನು ರದ್ದು ಮಾಡಬೇಕು ಮತ್ತು ಜೀವನಾವಶ್ಯಕ ಸರಕುಗಳ ಬೆಲೆಗಳನ್ನು ನಿಯಂತ್ರಿಸಲು ಅಗತ್ಯ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಮೋದಿ ಸರಕಾರ ತಕ್ಷಣವೇ ಆದಾಯ ತೆರಿಗೆ ವ್ಯಾಪ್ತಿಗೆ ಬರದ ಎಲ್ಲ ಕುಟುಂಬಗಳಿಗೆ ರೂ.7500 ನೇರ ನಗದು ವರ್ಗಾವಣೆಯನ್ನು ಮಾಡಬೇಕು ಮತ್ತು ದೈನಂದಿನ ಬಳಕೆಯ ಎಲ್ಲ ಅಗತ್ಯ ಪದಾರ್ಥಗಳು ಉಳ್ಳ ಉಚಿತ ಆಹಾರ ಕಿಟ್‌ಗಳನ್ನು ಹಂಚಬೇಕು ಎಂದು ಅದು ಪುನರುಚ್ಛರಿಸಿದೆ.

ರಫೆಲ್ ವ್ಯವಹಾರ

ಮೋದಿ ಸರಕಾರ ನಡೆಸಿರುವ 2016ರ ಬಹು–ಮಿಲಿಯ ಡಾಲರುಗಳ ರಫೆಲ್ ಯುದ್ಧ ವಿಮಾನಗಳ ವ್ಯವಹಾರದ ಬಗ್ಗೆ ಫ್ರೆಂಚ್ ಸಾರ್ವಜನಿಕ ನ್ಯಾಯ ವಿಚಾರಣೆ ಸೇವಾ ವ್ಯವಸ್ಥೆಯಾದ ಪಿ.ಎನ್.ಎಫ್. ಒಬ್ಬ ಫ್ರೆಂಚ್ ನ್ಯಾಯಾಧೀಶರಿಂದ ತನಿಖೆಗೆ ಆದೇಶ ನೀಡಿದೆ. ಒಂದು ಫ್ರೆಂಚ್ ತನಿಖಾ ವೆಬ್ ತಾಣ ಬಯಲಿಗೆ ತಂದಿರುವ ಈ ವ್ಯವಹಾರಕ್ಕೆ ಸಂಬಂಧಪಟ್ಟ ಅಧಿಕೃತ ಕಾಗದಪತ್ರಗಳು, ಡಸಾಲ್ ಅವಿಯೇಷನ್ ಕಂಪನಿ ಮತ್ತು ಅನಿಲ್ ಅಂಬಾನಿಯ ರಿಲಯನ್ಸ್ ಗುಂಪಿನ ನಡುವೆ ಮಾರ್ಚ್ 26, 2015ರಂದು, ಅಂದರೆ, ಈ ಹೊಸ ವ್ಯವಹಾರವನ್ನು, ಅದರಲ್ಲಿ ಹೆಚ್‌ಎಎಲ್‌ನ್ನು ಹೊರಗಿಡುವ ಪಕ್ರಟಣೆಯನ್ನು ಮಾಡುವ ಹದಿನೈದು ದಿನಗಳ ಮೊದಲಷ್ಟೇ, ಒಂದು ಒಪ್ಪಂದವನ್ನು ಮಾಡಿಕೊಂಡವು ಎಂಬುದನ್ನು ತೋರಿಸುತ್ತವೆ.

ಹಿಂದಿನ ಖರೀದಿ ಒಪ್ಪಂದವನ್ನು ಪ್ರಧಾನ ಮಂತ್ರಿ ಮೋದಿ ಬದಲಿಸಿ ಬಿಟ್ಟ ಈ ವ್ಯವಹಾರಕ್ಕೆ ಆಳವಾದ ಭ್ರಷ್ಟಾಚಾರ ಮತ್ತು ಕಪ್ಪು ಹಣವನ್ನು ತೊಳೆಯುವ ಕೃತ್ಯದ ಕೆಸರು ಮೆತ್ತಿಕೊಂಡಿದೆ ಎಂದು ಸಿಪಿಐ(ಎಂ) ಎತ್ತಿದ್ದ ಸಂದೇಹಗಳನ್ನು ಇದು ಮತ್ತೊಮ್ಮೆ ದೃಢಪಡಿಸಿದೆ.

ಸಪ್ಟಂಬರ್ 2018ರಲ್ಲಿ ಆಗ್ರಹಿಸಿದಂತೆ, ಈ ಇಡೀ ಪ್ರಕರಣದಲ್ಲಿ ಪ್ರಧಾನ ಮಂತ್ರಿಗಳು ಮತ್ತು ಸರಕಾರದ ಪಾತ್ರವನ್ನು ತನಿಖೆ ಮಾಡಲು ಮತ್ತು ಈ ವ್ಯವಹಾರದ ಸತ್ಯಾಂಶವನ್ನು ಸ್ಥಾಪಿಸಲು ಒಂದು ಜಂಟಿ ಸಂಸದೀಯ ಸಮಿತಿ(ಜೆಪಿಸಿ)ಯನ್ನು ರಚಿಸಬೇಕು ಎಂದು ಪೊಲಿಟ್‌ಬ್ಯುರೊ ಪುನರುಚ್ಛರಿಸಿದೆ.

ಕರಾಳ 'ಅಗತ್ಯ ರಕ್ಷಣಾ ಸೇವೆಗಳ ಸುಗ್ರೀವಾಜ್ಞೆ'

ಭಾರತದ ರಕ್ಷಣಾ ಆಸ್ತಿಗಳನ್ನು ತಮ್ಮ ಬಂಡವಾಳಶಾಹಿ ಬಂಟರಿಗೆ ಗರಿಷ್ಟ ಲಾಭ ದೋಚಲು ಅನುಕೂಲ ಕಲ್ಪಿಸಲೆಂದು ಮಾರಾಟ ಮಾಡುವುದರ ವಿರುದ್ಧ ನ್ಯಾಯಬದ್ಧ ಪ್ರತಿಭಟನೆಗಳನ್ನು ಕಾರ್ಮಿಕ ವರ್ಗ ಮತ್ತು ಯುದ್ಧಸಾಮಗ್ರಿಗಳ ಕಾರ್ಖಾನೆಗಳ ನೌಕರರು ಮಾಡದಂತೆ ನಿಷೇಧಿಸುವ ಗುರಿಯಿಂದ ಈ ಸುಗ್ರೀವಾಜ್ಞೆಯನ್ನು ಹೊರಡಿಸಲಾಗಿದೆ ಎಂದು ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. 41 ಯುದ್ಧೋಪಕರಣಗಳ ಕಾರ್ಖಾನೆಗಳನ್ನು ಏಳು ನಿಗಮಗಳಾಗಿ ಪರಿವರ್ತಿಸಲಾಗುತ್ತದೆ. ಈ ಸಾಮರಿಕ ವಲಯದಲ್ಲಿ ಕೇವಲ ನಾಲ್ಕು ಸಾರ್ವಜನಿಕ ವಲಯದ ಘಟಕಗಳಷ್ಟೇ ಉಳಿದುಕೊಳ್ಳುತ್ತವೆ. ಇದನ್ನು ಒಪ್ಪಲು ಸಾಧ್ಯವಿಲ್ಲ. ಇದು ರಾಷ್ಟ್ರೀಯ ಆಸ್ತಿಗಳ ನಗ್ನ ಲೂಟಿ, ಇದರ ವಿರುದ್ಧ ಪ್ರತಿಭಟನೆಗಳು ತೀವ್ರಗೊಳ್ಳುತ್ತವೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಸುಗ್ರೀವಾಜ್ಞೆಯನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದೆ.

"ಸ್ಟಾನ್ ಸ್ವಾಮಿಯವರ ಸಾವಿಗೆ ಹೊಣೆಗಾರರನ್ನು ಶಿಕ್ಷಿಸಿ"

ಫಾದರ್ ಸ್ಟಾನ್ ಸ್ವಾಮಿಯವರ ಸಾವಿನ ಬಗ್ಗೆ ಸಿಪಿಐ(ಎಂ) ತನ್ನ ತೀವ್ರ ದುಃಖವನ್ನು ವ್ಯಕ್ತಪಡಿಸಿದೆ.

ಝಾರ್ಖಂಡಿನ ದುರ್ಗಮ ಪ್ರದೇಶಗಳಲ್ಲಿ ಆದಿವಾಸಿಗಳ ಹಕ್ಕುಗಳು ಮತ್ತು ಅಗತ್ಯಗಳನ್ನು ಪ್ರತಿಪಾದಿಸುತ್ತಿದ್ದ ಈ 84 ವರ್ಷದ ಜೆಸುಯಿಟ್ ಪಾದ್ರಿ ಮತ್ತು ಸಕ್ರಿಯ ಹೋರಾಟಗಾರರನ್ನು ಕಳೆದ ಅಕ್ಟೋಬರಿನಲ್ಲಿ ಕರಾಳ ಯು.ಎ.ಪಿ.ಎ. ಅಡಿಯಲ್ಲಿ ಕಪೋಲಕಲ್ಪಿತ ಆಪಾದನೆಗಳನ್ನು ಹೊರಿಸಿ ಜೈಲಿಗೆ ಹಾಕಲಾಗಿತ್ತು, ಮತ್ತು ಅವರನ್ನು ಭೀಮ ಕೊರೆಗಾಂವ್ ಕೇಸಿನಲ್ಲಿ ತಳುಕು ಹಾಕಲು ಪ್ರಯತ್ನಿಸಲಾಗಿತ್ತು.

ನಿತ್ರಾಣಗೊಳಿಸುವ ಪಾರ್ಕಿನ್ಸನ್ ಕಾಯಿಲೆ ಸೇರಿದಂತೆ ಅವರ ವಿವಿಧ ಕಾಯಿಲೆಗಳಿಗೆ ಚಿಕಿತ್ಸೆಯನ್ನು ನಿರಾಕರಿಸಲಾಗಿತ್ತು. ದ್ರವಪದಾರ್ಥಗಳನ್ನು ಕುಡಿಯಲು ಅವರಿಗೆ ಅಗತ್ಯವಾಗಿದ್ದ ಒಂದು ಸಿಪ್ಪರ್(ಹೀರಕ)ನ್ನು ಕೂಡ ಅವರಿಗೆ ಕೊಟ್ಟದ್ದು ವಿವಿಧ ಮಾನವ ಹಕ್ಕುಗಳ ಮತ್ತು ವಿಕಲಾಂಗರ ಹಕ್ಕುಗಳ ಸಂಘಟನೆಗಳು ನಡೆಸಿದ ಅಭಿಯಾನದ ನಂತರವೇ ಎಂಬುದನ್ನು ಇಲ್ಲಿ ಒತ್ತಿ ಹೇಳಬೇಕಾಗುತ್ತದೆ.

ಅವರನ್ನು ಇಟ್ಟಿದ್ದ ತಲೋಜ ಜೈಲು ಕೈದಿಗಳಿಂದ ತುಂಬಿಹೋಗಿದ್ದಂತದ್ದು. ಅಲ್ಲಿ ಕೊವಿಡ್ ಸೋಂಕು ಅಪಾರ ಪ್ರಮಾಣದಲ್ಲಿ ಹೆಚ್ಚಿದಾಗ ಅವರನ್ನು ಅಲ್ಲಿಂದ ಬೇರೆಡೆಗೆ ಸ್ಥಳಾಂತರಿಸುವ ಮನವಿಗಳಿಗೆ ಕಿವಿಗೊಡಲೇ ಇಲ್ಲ. ಜಾಮೀನು ಕೊಡಬೇಕು, ಮನೆಗೆ ಕಳಿಸಬೇಕು ಎಂಬ ಅವರ ವಿನಂತಿಗಳನ್ನು ತಿರಸ್ಕರಿಸಲಾಯಿತು. ಕೊವಿಡ್ ಸೋಂಕು ತಗಲಿ ಅವರ ದೇಹಸ್ಥಿತಿ ಹದಗೆಡಲಾರಂಭಿಸಿದಾಗಲಷ್ಟೇ ಮುಂಬೈ ಹೈಕೋರ್ಟಿನ ಮಧ್ಯಪ್ರವೇಶದ ನಂತರ ಅವರನ್ನು ಒಂದು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತು. ಅದರೆ ಆವೇಳೆಗೆ ಕಸ್ಟಡಿಯಲ್ಲಿ ಅವರ ಸಾವನ್ನು ತಡೆಯುವಲ್ಲಿ ತುಂಬಾ ವಿಳಂಬವಾಗಿತ್ತು.

ಅವರ ಮೇಲೆ ಸುಳ್ಳು ಕೇಸುಗಳನ್ನು ಹೇರಿದವರು, ಅವರು ಜೈಲಿನಲ್ಲಿಯೇ ಇರುವಂತೆ ಮಾಡಿದವರು ಮತ್ತು ಅಮಾನವೀಯವಾಗಿ ನಡೆಸಿಕೊಂಡವರು ಈಗ 'ಉತ್ತರಕೊಡಬೇಕಾಗಿದೆ, ಇದರಿಂದ ಅವರು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ರಾಜಕೀಯ ದುರುದ್ದೇಶದ ಕೇಸುಗಳಲ್ಲಿ, ಯುಎಪಿಎ, ರಾಜದ್ರೋಹದಂತಹ ಕರಾಳ ಕಾಯ್ದೆಗಳ ದುರ್ಬಳಕೆ ಮಾಡಿ ಭೀಮ ಕೊರೆಗಾಂವ್ ಮತ್ತು ಇತರ ಕೇಸುಗಳಲ್ಲಿ ಬಂಧನದಲ್ಲಿ ಇಟ್ಟಿರುವ ಎಲ್ಲರನ್ನೂ ತಕ್ಷಣವೇ ಬಿಡುಗಡೆ ಮಾಡಲೇ ಬೇಕಾಗಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಜನರು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಬೇಕು ಮತ್ತು ಸಂವಿಧಾನದ ಅಡಿಯಲ್ಲಿ ಖಾತ್ರಿಪಡಿಸಿರುವ ಮೂಲಭೂತ ಹಕ್ಕುಗಳ ರಕ್ಷಣೆಗೆ ಎದ್ದು ನಿಲ್ಲಬೇಕು ಎಂದು ಕರೆ ನೀಡಿದೆ.



ರಾಷ್ಟ್ರಪತಿಗಳಿಗೆ 10 ವಿಪಕ್ಷಗಳ ಮುಖಂಡರ ಆಗ್ರಹ


ಫಾದರ್ ಸ್ವಾನ್ ಸ್ವಾಮಿಯವರ ಮೇಲೆ ಸುಳ್ಳು ಕೇಸುಗಳನ್ನು ಹೊರಿಸಲು, ಅವರು ಜೈಲಿನಲ್ಲೇ ಮುಂದುವರೆಯುವಂತೆ ಮಾಡಿ ಅಮಾನವೀಯವಾಗಿ ನಡೆಸಿಕೊಳ್ಳಲು ಹೊಣೆಗಾರರಾದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸರಕಾರಕ್ಕೆ ನಿರ್ದೇಶನ ಕೊಡಬೇಕು ಎಂದು ರಾಷ್ಟ್ರಪತಿಗಳನ್ನು ಆಗ್ರಹಿಸಿ ಹತ್ತು ಪ್ರಮುಖ ವಿಪಕ್ಷಗಳ ಮುಖಂಡರು ಅವರಿಗೆ ಜುಲೈ 6 ರಂದು ಪತ್ರ ಬರೆದಿದ್ದಾರೆ. ಈಗ ಭೀಮ ಕೊರೆಗಾಂವ್ ಕೇಸಿನಲ್ಲಿ ಜೈಲಿಗೆ ಹಾಕಿರುವವರನ್ನು ಹಾಗೂ ಇತರ ರಾಜಕೀಯ–ಪ್ರೇರಿತ ಯುಎಪಿಎ, ರಾಜದ್ರೋಹ ಮುಂತಾದ ಕೇಸುಗಳಲ್ಲಿ ಬಂಧಿತರಾಗಿರುವ ಎಲ್ಲರನ್ನೂ ತಕ್ಷಣವೇ ಬಿಡುಗಡೆ ಮಾಡಲೇಬೇಕಾಗಿದೆ ಎಂದೂ ಅವರು ಈ ಪತ್ರದಲ್ಲಿ ಹೇಳಿದ್ದಾರೆ.

ಸಿಪಿಐ(ಎಂ) ನ ಸೀತಾರಾಂ ಯೆಚುರಿ ಮತ್ತು ಸಿಪಿಐನ ಡಿ.ರಾಜ ಇವರಲ್ಲದೆ ಕಾಂಗ್ರೆಸಿನ ಸೋನಿಯಾ ಗಾಂಧಿ, ಜೆಡಿ–ಎಸ್ ನ ಹೆಚ್.ಡಿ.ದೇವೇಗೌಡ, ಎನ್‌ಸಿಪಿ ಯ ಶರದ್ ಪವಾರ್, ಜಮ್ಮು–ಕಾಶ್ಮೀರ ಜನತಾ ಮೈತ್ರಿಕೂಟದ ಫಾರುಕ್ ಅಬ್ದುಲ್ಲ, ಟಿಎಂಸಿ ಯ ಮಮತಾ ಬ್ಯಾನರ್ಜಿ, ಆರ್‌ಜೆಡಿ ಯ ತೇಜಸ್ವಿ ಯಾದವ್, ಡಿಎಂಕೆ ಯ ಎಂ ಕೆ ಸ್ಟಾಲಿನ್ ಹಾಗೂ ಜೆಎಂಎಂ ನ ಹೇಮಂತ್ ಸೊರೆನ್ ಸಹಿ ಮಾಡಿರುವ ಈ ಪತ್ರದ ಪೂರ್ಣ ಪಾಟವನ್ನು ಈ ಮುಂದೆ ಕೊಡಲಾಗಿದೆ:

"ನಾವು, ಪ್ರಮುಖ ವಿಪಕ್ಷಗಳ ಮುಖಂಡರು

ಪುಟ 14 ನೋಡಿ

ಕಾಂ. ಮಹೇಂದ್ರ ಸಿಂಗ್



ಮಹಾರಾಷ್ಟ್ರದ ಹಿರಿಯ ಕಮ್ಯುನಿಸ್ಟ್ ಮುಖಂಡ ಹಾಗೂ ಸಿಪಿಐ(ಎಂ) ಕೇಂದ್ರ ಸಮಿತಿಯ ಸದಸ್ಯ ಮಹೇಂದ್ರ ಸಿಂಗ್ ಅವರು ಜುಲೈ4ರಂದು ನಿಧನರಾಗಿದ್ದಾರೆ. ಅವರಿಗೆ 77 ವರ್ಷವಾಗಿತ್ತು. ಕೆಲವು ಸಮಯದ ಹಿಂದೆಯಷ್ಟೇ ಅವರು ಕೊವಿಡ್ ಸೋಂಕಿನಿಂದ ಚೇತರಿಸಿಕೊಂಡಿದ್ದರು. ಸಿಪಿಐ(ಎಂ) ಪೊಲಿಟ್‌ಬ್ಯುರೊ ಅವರ ನಿಧನಕ್ಕೆ ಆಳವಾದ ಆಘಾತ ಮತ್ತು ದುಃಖವನ್ನು ವ್ಯಕ್ತ ಪಡಿಸಿದೆ.

ಇಂಜಿನಿಯರ್ ವೃತ್ತಿಯಲ್ಲಿದ್ದ ಅವರು ಕೆಲಸದಲ್ಲಿ ಇರುವಾಗ ತನ್ನದೇ ಕಾರ್ಖಾನೆಯಲ್ಲಿ ಕಾರ್ಮಿಕ ಸಂಘವನ್ನು ಸ್ಥಾಪಿಸಿದರು. ನಂತರ ಕೆಲಸವನ್ನು ಬಿಟ್ಟ ಅವರು ಆಗಷ್ಟೇ ಸ್ಥಾಪನೆಗೊಂಡಿದ್ದ ಸಿಐಟಿಯುನಲ್ಲಿ ಕಾರ್ಮಿಕ ಆಂದೋಲನಕ್ಕೆ ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಂಡರು. 1985 ರಲ್ಲಿ ಅರಿಸ್ಟೊಕ್ರಟ್ ಕಂಪನಿಯ ಆಡಳಿತದವರು ಕಳಿಸಿದ ಗೂಂಡಾಗಳ ಮಾರಣಾಂತಿಕ ದಾಳಿಯಿಂದ ಬದುಕುಳಿದರು.

1971 ರಲ್ಲಿ ಸಿಪಿಐ(ಎಂ)ನ ಮಹಾರಾಷ್ಟ್ರ ರಾಜ್ಯಸಮಿತಿಗೆ ಚುನಾಯಿತರಾದ ಅವರು 1991 ರಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿಗೆ, ನಂತರ 2015 ರಲ್ಲಿ ಕೇಂದ್ರ ಸಮಿತಿಗೆ ಚುನಾಯಿಸಲ್ಪಟ್ಟರು. 1994 ರಿಂದ 2015 ರ ವರೆಗೆ ಮುಂಬೈ ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾಗಿ ಅವರು ಅಲ್ಲಿ ಪಕ್ಷದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದರು.

ಇವರು 1986 ರಿಂದ 1989 ರ ವರೆಗೆ ಮಹಾರಾಷ್ಟ್ರದ ಡಿವೈಎಫ್‌ಐನ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದರು.

ಅತ್ಯಂತ ಸರಳಜೀವಿಯಾಗಿದ್ದ ಅವರು ಅತ್ಯುನ್ನತ ವ್ಯಕ್ತಿತ್ವದ, ನಿಷ್ಟಾವಂತ ಸಂಗಾತಿಯಾಗಿದ್ದರು ಎಂದು ಪೊಲಿಟ್‌ಬ್ಯುರೊ ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತ ವರ ಪತ್ನಿ ಸಾವಿತ್ರಿಯವರಿಗೆ ಹಾರ್ದಿಕ ಸಂತಾಪ ವ್ಯಕ್ತಪಡಿಸಿದೆ.

ಸಂಪಾದಕೀಯ

ನಾಲ್ಕು ವರ್ಷಗಳ ಪದವಿ ವ್ಯಾಸಂಗ ಬೇಡವೆ ಬೇಡ

ಹೊಸ ಶಿಕ್ಷಣ ನೀತಿ ಅನ್ವಯ ಪದವಿ ವ್ಯಾಸಂಗವನ್ನು ನಾಲ್ಕು ವರ್ಷಗಳಿಗೆ ಹೆಚ್ಚಿಸಲಾಗಿದೆ. ಇದು ಗ್ರಾಮೀಣ ವಿಭಾಗದ ವಿದ್ಯಾರ್ಥಿಗಳ ಶಿಕ್ಷಣದ ಕನಸಿಗೆ ಕೊಡಲಿ ಏಟು ನೀಡುವ ಪ್ರಯತ್ನವಾಗಿದೆ. ಹಳ್ಳಿಗಾಡು, ಬುಡಕಟ್ಟು ಜನಾಂಗ ಹಾಗೂ ಆದಿವಾಸಿಗಳ ಮಕ್ಕಳು ಶಿಕ್ಷಣವನ್ನು ತೊರೆಯುವಂತಾಗುವುದು ಮಾತ್ರವಲ್ಲ ಒಮ್ಮೆ ವಿದ್ಯಾಭ್ಯಾಸವನ್ನು ಅವರು ತೊರೆದರೆ ಮತ್ತೆ ಅವರು ಶಿಕ್ಷಣವನ್ನು ಮುಂದುವರೆಸುವುದು ಕಷ್ಟ. ನಾಲ್ಕು ವರ್ಷಗಳ ಪದವಿ ಕಲಿಕೆಯ ಪದ್ಧತಿಯಿಂದ ಅವರು ಶಿಕ್ಷಣದಿಂದ ವಿಮುಖರಾಗುವವರ ಪ್ರಮಾಣ ಗಣನೀಯವಾಗಿ ಹೆಚ್ಚಲಿದೆ.

ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ ನಾಲ್ಕು ವರ್ಷಗಳ ಪದವಿ ಕೋರ್ಸ್ ಯಾರ ಹಿತಸಾಧನೆಗಾಗಿ? ಹೊಸ ಶಿಕ್ಷಣ ನೀತಿಯ ಬಗ್ಗೆ ಸಂಸತ್ತಿನಲ್ಲಿ ಚರ್ಚೆಯೇ ಆಗಿಲ್ಲ. ಪೋಷಕರು ಹಾಗೂ ವಿದ್ಯಾರ್ಥಿಗಳ ಅಭಿಪ್ರಾಯವನ್ನು ಆಲಿಸಿಲ್ಲ. ಈ ನೀತಿಯನ್ನು ಏಕಪಕ್ಷೀಯವಾಗಿ ಹಾಗೂ ತರಾತುರಿಯಲ್ಲಿ ಜಾರಿಗೊಳಿಸಲಾಗಿದೆ. ಇದು ಸಂವಿಧಾನ ವಿರೋಧಿ ನಡೆಯಾಗಿದೆ. ಶಿಕ್ಷಣ ನೀತಿಯನ್ನು ರೂಪಿಸುವವರು ಶಿಕ್ಷಣ ತಜ್ಞರು ಆಗಿರಬಹುದು. ಆದರೆ ಅವರು ರಾಜಕೀಯ ಪಕ್ಷಗಳ ಹಿಂಬಾಲಕರಲ್ಲ.

ಈಗಿನ ಶಿಕ್ಷಣ ನೀತಿಯು ಬಹುಶಿಸ್ತೀಯ ಪದ್ಧತಿಯಾಗಿದೆ. ವಿದ್ಯಾರ್ಥಿಗಳು ಹಲವು ವಿಷಯಗಳನ್ನು ಏಕಕಾಲಕ್ಕೆ ಕಲಿಯುತ್ತಿರುತ್ತಾರೆ. ಅಂತರ್ ಶಿಸ್ತೀಯ ಕಲಿಕೆ ಈಗಿನ ಅಗತ್ಯ ಮಾಹಿತಿ ಹೊತ್ತ ಪಶುಗಳ ಅಗತ್ಯವಿಲ್ಲ. ಅಮೇರಿಕದಲ್ಲಿ ಜಾರಿಯಲ್ಲಿರುವ ಶಿಕ್ಷಣ ವ್ಯವಸ್ಥೆಯ ನಕಲನ್ನು ಯಥಾ ರೀತಿಯಲ್ಲಿ ನಮ್ಮ ದೇಶದಲ್ಲಿ ಬೇರೂರಿಸುವ ಪ್ರಯತ್ನ ಈಗ ನಡೆಯುತ್ತಿದೆ. ನೂತನ ಶಿಕ್ಷಣ ನೀತಿಯಿಂದ ಪದವಿಯ ಅವಧಿ ಹಾಗೂ ಪಠ್ಯಕ್ರಮ ಬದಲಾಗಲಿದೆ. ಅದರ ಸಾಧಕ ಬಾಧಕಗಳನ್ನು ಅವಲೋಕಿಸದೆಯೇ ಹೊಸದೊಂದು ನೀತಿ ಜಾರಿಗೊಳಿಸುವುದು ಯಾವ ಕಾರಣಕ್ಕೂ ಸರಿಯಲ್ಲ.

ಶಿಕ್ಷಣ ತಜ್ಞರ ಪ್ರಕಾರ ಈ ಹೊಸ ಶಿಕ್ಷಣ ನೀತಿಯ ಜಾರಿಗೆ ಸುಧೀರ್ಘ ಸಮಯ ತಗಲುತ್ತದೆ. ಸರ್ಕಾರ ಮಾಡಲು ಹೊರಟಿರುವುದು ದೊಡ್ಡ ಮಟ್ಟದ ಬದಲಾವಣೆ. ಇದರ ಕುರಿತು ಎಲ್ಲ ವಲಯಗಳಲ್ಲೂ ಚರ್ಚೆಯಾಗಬೇಕು. ಸಾಧಕ ಬಾಧಕಗಳ ಬಗ್ಗೆ ವಿವರವಾದ ಪರಿಶೀಲನೆ ಆಗಬೇಕು.

ಹೊಸ ಶಿಕ್ಷಣ ನೀತಿಯಲ್ಲಿ ಮಾತೃ ಭಾಷೆಯ ಕಲಿಕೆ ಕಡೆಗಣಿಸಲ್ಪಟ್ಟಿದೆ. ಭಾಷೆಯು ಅಭಿವ್ಯಕ್ತಿಯ ಸಾಧ್ನ. ಹೀಗಾಗಿ ಪ್ರಾದೇಶಿತ ಭಾಷೆ ಕಲಿಕೆಗೆ ಒತ್ತು ನೀಡಬೇಕು. ಮೂರು ವರ್ಷಗಳ ಪದವಿಯನ್ನು ನಾಲ್ಕು ವರ್ಷಕ್ಕೆ ಹೆಚ್ಚಿಸಲು ಕಾರಣವೇನು? ಮೂರು ವರ್ಷ ಪದವಿ ಶಿಕ್ಷಣ ಪಡೆದವರು ಜಾಣರಾಗಿಲ್ಲವೆ? ಪದವಿ ಅವಧಿಯ ವಿಸ್ತರಣೆಯಿಂದ ಯಾವುದೇ ಪ್ರಯೋಜನವಿಲ್ಲ. ಇರುವ ಪದವಿ ಅವಧಿಯಲ್ಲೇ ಪರಿಣಾಮಕಾರಿ ಕಲಿಕೆ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಯೋಚಿಸಬೇಕು.

ಪ್ರಗತಿಪರ ವಿದ್ಯಾರ್ಥಿ ಸಂಘಟನೆಗಳಾದ ಎಸ್.ಎಫ್.ಐ., ಎಐಎಸ್‌ಎಫ್ ಮೊದಲಾದ ವಿದ್ಯಾರ್ಥಿ ಸಂಘಟನೆಗಳು ನಾಲ್ಕು ವರ್ಷಗಳ ಪದವಿ ವ್ಯಾಸಂಗ ಬೇಡವೇ ಬೇಡ ಎಂದು ಆಕ್ಷೇಪ ವ್ಯಕ್ತಪಡಿಸಿವೆ. ಇದರಿಂದ ವಿದ್ಯಾರ್ಥಿಗಳಿಗೆ ಹಾಗೂ ಪೋಷಕರಿಗೆ ಹೊರೆಯಾಗಲಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳ ಲೂಟಿಗೆ ಅನುವು ಮಾಡಿಕೊಟ್ಟಂತಾಗಲಿದೆ. ಆದ್ದರಿಂದ ಸರ್ಕಾರದ ಈ ತಪ್ಪು ಧೋರಣೆಯನ್ನು ಎಲ್ಲರೂ ಸೇರಿ ವಿರೋಧಿಸಬೇಕಾಗಿದೆ.

ರಾಜ್ಯಾದ್ಯಂತ ಜಿಲ್ಲಾ ತಾಲೂಕು ಕೇಂದ್ರಗಳಲ್ಲಿ ಕಾರ್ಮಿಕರ ಪ್ರತಿಭಟನೆ

ಕರೋನಾ ಎರಡನೇ ಅಲೆ ಸದ್ಯಕ್ಕೆ ಇಳಿಮುಖವಾಗಿದೆ. ಆದರೆ ಅದು ಮಾಡಿದ ಸಾವಿನ ಆರ್ಭಟದ ಕರಾಳ ಛಾಯೆಗಳು ಇನ್ನೂ ಮಾಸಿಲ್ಲ. 2020 ರ ಮೊದಲ ಅಲೆಯಲ್ಲಿ ಸುಮಾರು 12900 ಜನರು ಕರೋನಾ ದಿಂದ ಸಾವಿಗೀಡಾಗಿದ್ದರೆ 2021 ರ ಎರಡನೇ ಅಲೆಯಲ್ಲಿ ಸಾವಿಗೀಡಾದವರ ಸಂಖ್ಯೆ 35040 ಸಾವಿರ ಎನ್ನುತ್ತಿದೆ ರಾಜ್ಯ ಸರ್ಕಾರದ ವರದಿ. ಆದರೆ ಇದು ನಿಸ್ಸಂಶಯವಾಗಿ ನೈಜವಾದ ವರದಿಯಲ್ಲ. ಮೊದಲನೆ ಮತ್ತು ಎರಡನೆ ಅಲೆಗಳಿಗೆ ಸಿಕ್ಕು ಮೃತಪಟ್ಟ ಜನರ ಸಂಖ್ಯೆ ರಾಜ್ಯದಲ್ಲಿ 1 ಲಕ್ಷವನ್ನು ದಾಟಿದೆ ಎನ್ನುತ್ತವೆ ಅನಧಿಕೃತ ವರದಿಗಳು ಆದರೆ ರಾಜ್ಯದ ತಮ್ಮ ಸರ್ಕಾರ ಪರಿಹಾರ ನೀಡುವ ಮತ್ತಿತರೆ ನೆಪಗಳನ್ನು ಮುಂದೆ ಮಾಡಿ ಸಾವಿನ ವರದಿಗಳು ಹೊರ ಬರದಂತೆ ಆಡಳಿತಾತ್ಮಕ ಕ್ರಮ ಕೈಗೊಂಡಿದೆ ಎನ್ನುವುದು ಮೇಲ್ನೋಟಕ್ಕೆ ಕಂಡು ಬರುವ ಕಹಿ ಸತ್ಯವಾಗಿದೆ.

ಆಸ್ಪತ್ರೆಗಳಲ್ಲಿ ಹಾಸಿಗೆ ಸಿಗದೇ, ಆಕ್ಸಿಜನ್ ಸಿಗದೇ, ಸರಿಯಾದ ಚಿಕಿತ್ಸೆ ಸಿಗದೇ, ವೆಚ್ಚ ಭರಿಸಲಾಗದೇ ಸೋಂಕಿನಿಂದ ಸಾವಿರಾರು ಜನರು ಅಸುನೀಗಿದ್ದಾರೆ. ಹೀಗೆ ಸಾವಿಗೀಡಾದ ಸಾವಿರಾರು ಮೃತ ದೇಹಗಳಿಗೆ ಘನತೆಯ ಅಂತ್ಯಕ್ರಿಯೆ ನಡೆಸಲು ಸಾಧ್ಯವಾಗಿಲ್ಲ ಹತ್ತಾರು ಕುಟುಂಬಗಳು ದುಬಾರಿ ಆಸ್ಪತ್ರೆ ಬಿಲ್‌ಗಳನ್ನು ಪಾವತಿಸಲಾಗದೇ ಮೃತ ದೇಹಗಳನ್ನು ಕೊಂಡೊಯ್ಯಲು ಸಾಧ್ಯವಾಗಿಲ್ಲ ಸುಮಾರು 700 ಕ್ಕೂ ಅಧಿಕ ಮಕ್ಕಳು ತಂದೆ ತಾಯಿ ಇಬ್ಬರನ್ನು ಕಳೆದುಕೊಂಡು ಅನಾಥರಾಗಿದ್ದಾರೆ ಎಂದರೆ ಅದರ ಭೀಕರತೆ ಅರ್ಥವಾಗುತ್ತದೆ. ಪರಿಸ್ಥಿತಿ ಹೀಗಿರುವಾಗ ತಮ್ಮ ಸರ್ಕಾರ ಕೊವೀಡ್ ಪರಿಸ್ಥಿತಿ ನಿಭಾಯಿಸಲು ಲಾಕ್‌ಡೌನ್ ಘೋಷಿಸಿ ಕೈ ತೊಳೆದುಕೊಂಡಿತು. ಬಳಿಕ ಸಿಐಟಿಯು ಮತ್ತು ಇತರೆ ಕಾರ್ಮಿಕ ಸಂಘಗಳ ಒತ್ತಾಯಕ್ಕೆ ಮಣಿದು ಆರಂಭದಲ್ಲಿ 1100 ಕೋಟಿ ಬಳಿಕಾ 500 ಕೋಟಿ ಆರ್ಥಿಕ ಪ್ಯಾಕೇಜ್ ಘೋಷಿಸಿತು. ಆದರೆ ಹಾಗೆ ಪ್ರಕಟಿಸಲಾದ ಆರ್ಥಿಕ ಪ್ಯಾಕೇಜ್‌ನ ನೆರವು ಇನ್ನೂ ಸಂಪೂರ್ಣ ಕಟ್ಟಡ ಹಾಗೂ ಅಸಂಘಟಿತ ಕಾರ್ಮಿಕರಿಗೆ ದೊರೆತಿಲ್ಲ.

ಕಟ್ಟಡ ಕಾರ್ಮಿಕರಿಗೆ ಕೋವಿಡ್ ಪರಿಹಾರ ಹೆಚ್ಚಿಸಿ ಇತರೆ ಬೇಡಿಕೆಗಳು ಈಡೇರಿಸಬೇಕು :

ಕಟ್ಟಡ ಕಾರ್ಮಿಕ ಸಂಘಗಳು ಮಾಸಿಕ 10 ಸಾವಿರ ಕೊವೀಡ್ ಪರಿಹಾರ ಧನ ನೀಡಬೇಕೆಂಬ ಬೇಡಿಕೆ ಇಟ್ಟು ಹೋರಾಟ ನಡೆಸಿದ್ದರೂ ಮಂಡಳಿಯಲ್ಲಿ 10 ಸಾವಿರ ಕೋಟಿ ಸೆಸ್ ಸಂಗ್ರಹವಾಗಿದ್ದರೂ ಕೇವಲ 3 ಸಾವಿರ ರುಪಾಯಿಗಳ ಹಣಕಾಸಿನ ನೆರವು ಪ್ರಕಟಿಸಲಾಯಿತು. ಬಳಿಕ ನ್ಯಾಯಾಲಯದ ಮಧ್ಯ ಪ್ರವೇಶದ ಬಳಿಕ ರೇಷನ್ ಕಿಟ್‌ಗಳನ್ನು ನೀಡಲು ನಿರ್ಧರಿಸಲಾಯಿತಾದರೂ ಆರಂಭದಲ್ಲಿ ಕಳಪೆ ಕಿಟ್ಟುಗಳನ್ನು ವಿತರಿಸಿತು. ಇದನ್ನು ಸಿಐಟಿಯು ನೇತೃತ್ವದ ಕಟ್ಟಡ ಕಾರ್ಮಿಕ ಫೆಡರೇಷನ್ ಬಯಲಿಗೆಳೆದು ಇಡೀ ರಾಜ್ಯದ ಗಮನ ಸೆಳೆಯುವಂತೆ ಮಾಡಿತು. ಮತ್ತು ಕಿಟ್ ವಿತರಿಸಿದ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿ ರಾಜ್ಯದ ಜನರ ಆಕ್ರೋಶಕ್ಕೆ ತುತ್ತಾಯಿತು. ಕಲ್ಯಾಣ ಮಂಡಳಿಯಲ್ಲಿರುವ ಸೆಸ್ ಹಣದಲ್ಲಿ ಖರೀದಿಸಿದ ಕಿಟ್‌ಗಳನ್ನು ಶಾಸಕರಿಗೆ ವಿತರಿಸುವ ಯತ್ನ ಖಂಡನಾರ್ಹ ಮಾತ್ರವಲ್ಲ ನ್ಯಾಯಾಲಯದ ನಿರ್ದೇಶನದ ಸ್ಪಷ್ಟ ಉಲ್ಲಂಘನೆಯಾಗಿದೆ. ಇದಲ್ಲದೆ ಆಹಾರ ಕಿಟ್ ಖರೀದಿಯಲ್ಲಿ ಸುಮಾರು 10–15 ಕೋಟಿ ಭ್ರಷ್ಟಾಚಾರ ನಡೆದಿದೆ ಎನ್ನುವ ಗಂಭೀರ ಆರೋಪವನ್ನು ಕಟ್ಟಡ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿಯು ನಡೆಸಿದೆ. ಹಿನ್ನಲೆಯಲ್ಲಿ ಮಂಡಳಿಯಲ್ಲಿ ಇತ್ತೀಚೆಗೆ ಕೈಗೊಂಡಿರುವ, ತಂತ್ರಾಂಶ ಟೂಲ್ ಕಿಟ್, ತಂತ್ರಾಂಶ ಟೆಂಡರ್, ಆಂಬೂಲೆನ್ಸ್‌ಗಳು ಹಾಗೂ ಆಹಾರ ಕಿಟ್, ಔಷಧಿ ಕಿಟ್‌ಗಳ ಖರೀದಿ ಕುರಿತಾಗಿ ತನಿಖೆ ನಡೆಯಬೇಕಾಗಿದೆ. ಜುಲೈ 1 ರಂದು ನಡೆದ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿ ಸಭೆಯಲ್ಲಿ ಕಲ್ಯಾಣ ಸೌಲಭ್ಯಗಳನ್ನು ಹೆಚ್ಚು ಮಾಡಿ ಪರಿಷ್ಕರಿಸಲಾಗಿದ್ದು ಸ್ವಾಗತಾರ್ಹವಾದರೂ ಕೊವೀಡ್ ಪರಿಹಾರ ಹಣವನ್ನು 10 ಸಾವಿರ ನೀಡಬೇಕೆಂಬ ಬೇಡಿಕೆಯನ್ನು ಮಾನ್ಯ ಮಾಡಿಲ್ಲದಿರುವುದು ಸರಿಯಾದ ಕ್ರಮವಲ್ಲ ಎನ್ನುವುದು ಸಿಐಟಿಯು ಅಭಿಪ್ರಾಯವಾಗಿದೆ.

ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಗಾಗಿ ಹೆಚ್ಚಿನ ಹಣ ಪ್ರಕಟಿಸಬೇಕು:

ರಾಜ್ಯದ ಜನಸಂಖ್ಯೆಯಲ್ಲಿ ಸುಮಾರು 3 ಕೋಟಿಯಷ್ಟು ಜನ ಅಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಿದ್ದಾರೆ ಕೊವೀಡ್ ಅಲೆಯಲ್ಲಿ ಅತಿ ಹೆಚ್ಚು ಬದುಕನ್ನು ಕಳೆದುಕೊಂಡಿದ್ದು ಅಸಂಘಟಿತ ಮತ್ತು ವಲಸೆ ಕಾರ್ಮಿಕರು. ಆದರೆ ಮೊದಲನೆ ಅಲೆಯಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪಾಠ ಕಲಿತಿಲ್ಲ ಇದುವರೆಗೂ ಈ ಕುರಿತಾಗಿ ಯಾವುದೇ ಅಂಕಿ ಅಂಶಗಳನ್ನು ಸಂಗ್ರಹಿಸಿಲ್ಲ. ನಾವು ಕಳೆದ ವರ್ಷವೇ ಅಂಬೇಡ್ಕರ್ ಸಹಾಯ ಹಸ್ತ ಕಾರ್ಡ್ ಪಡೆದ 10 ಅಸಂಘಟಿತ ವಿಭಾಗಕ್ಕೆ ಆರ್ಥಿಕ ನೆರವು ಪ್ರಕಟಿಸಲು ಕೋರಿದ್ದೆವು. ಆದರೆ ಈ ಬಾರಿ ಸ್ಮಾರ್ಟ್ ಕಾರ್ಡ್‌ಗಳನ್ನು ಪಡೆದವರಿಗಾದರೂ ಹಣಕಾಸಿನ ನೆರವು ಪ್ರಕಟಿಸಬೇಕು ಅದಕ್ಕೆ ಅಗತ್ಯವಿರುವ ಸಂಪನ್ಮೂಲಗಳನ್ನು ಹೇಗೆ ಕ್ರೂಢೀಕರಿಸಬಹುದೆಂಬ ಸಲಹೆಗಳನ್ನು ಸಿಐಟಿಯು ನೀಡಿತ್ತು. ಇದಾದ ತಾವು ಆರ್ಥಿಕ ಪ್ಯಾಕೇಜ್ ಗಳನ್ನು ಪ್ರಕಟಿಸಿದ್ದಿರಿ ಇದು ಸ್ವಾಗತಾರ್ಹ ಕೆಲಸವಾಗಿದೆ. ನಿಮ್ಮ ಈ ಪ್ಯಾಕೇಜ್ ನಿಂದಾಗಿ ಸಣ್ಣ ಮೊತ್ತವಾದರೂ ಮೊದಲ ಬಾರಿಗೆ ಮನೆಗೆಲಸ, ಹಮಾಲಿ, ಟೈಲರ್ಸ್, ಚಿಂದಿ ಆಯುವವರಿಗೆ, ಹಣಕಾಸಿನ ನೆರವು ಪಡೆಯುತ್ತಿದ್ದಾರೆ. ಆದರೆ ಕೊಟ್ಯಾಂತರ ಅಸಂಘಟಿತರಿಗೆ ಈ ನೆರವು ‘ಆನೆಗೆ ಅರೆಕಾಸಿನ ಮಜ್ಜಿಗೆ’ಯಾಗಿದೆ. ಇದೀಗ ಸೇವಾಸಿಂಧು ತಂತ್ರಾಂಶದ ಮೂಲಕ ಸುಮಾರು 9 ಲಕ್ಷ ವಿವಿಧ ಅಸಂಘಟಿತ ವಲಯದ ಕಾರ್ಮಿಕರು ನೋಂದಣಿಯಾಗಿದ್ದಾರೆ ಎಂದು ತಿಳಿದು ಬಂದಿದ್ದು ಇವರಿಗೆ ಕನಿಷ್ಟ ಪ್ರಮಾಣದ ಹಣಕಾಸಿನ ನೆರವು ನೀಡಲು ಕನಿಷ್ಟ 100–125 ಕೋಟಿ ಅವಶ್ಯಕತೆ ಇದೆ ಎಂದು ತಿಳಿದು ಬಂದಿದೆ. ಇದಕ್ಕೆ ಬೇಕಾದ ಹಣಕಾಸಿನ ಸಂಪನ್ಮೂಲವನ್ನು ಒದಗಿಸಬೇಕು.

ಎಲ್ಲರಿಗೂ ರೇಷನ್ ಕಿಟ್ ನೀಡಬೇಕು :

ಈ ಮಧ್ಯೆ ಸರ್ವೋಚ್ಚ ನ್ಯಾಯಾಲಯ, ಕರ್ನಾಟಕ ಉಚ್ಚ ನ್ಯಾಯಾಲಯ ಹಾಗೂ ಕಾನೂನು ಸೇವಾ ಪ್ರಾಧಿಕಾರಗಳು ಮಧ್ಯ ಪ್ರವೇಶಿಸಿ ವಲಸೆ/ಅಸಂಘಟಿತ ಕಾರ್ಮಿಕರಿಗೆ ಆಹಾರ ಕಿಟ್‌ಗಳನ್ನು ನೀಡಬೇಕೆಂಬ ನಿರ್ದೇಶನ ನೀಡಿದವು. ಆದರೆ ಆಹಾರ ಕಿಟ್ ಗಳನ್ನು ಸಿದ್ದಪಡಿಸಲು ಬೇಕಾದ ಹಣಕಾಸಿನ ನೆರವು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ನೀಡದ ಪರಿಣಾಮ ರಾಜ್ಯದ ಲಕ್ಷಾಂತರ ಕುಟುಂಬಗಳು ಈ ಆಹಾರ ಕಿಟ್ ನಿಂದ ವಂಚಿತವಾಗಿವೆ. ಆದ್ದರಿಂದ ಎಲ್ಲ ವಲಸೆ ಮತ್ತು ಅಸಂಘಟಿತ ಕಾಮಿಕರಿಗೆ ಬಿಪಿಎಲ್/ಎಪಿಎಲ್ ಎನ್ನುವ ತಾರತಮ್ಯವಿಲ್ಲದೆ ಆರ್ಥಿಕ ಪ್ಯಾಕೇಜ್ ಮತ್ತು ಆಹಾರ ಕಿಟ್‌ಗಳನ್ನು ನೀಡಬೇಕು ಎನ್ನುವುದು ಸಿಐಟಿಯು ಆಗ್ರಹವಾಗಿದೆ. ಈ ಮಧ್ಯೆ ಮನೆಗೆಲಸ ಕಾರ್ಮಿಕರಿಗೆ ರಾಜ್ಯ ಸರ್ಕಾರ ಪ್ರಕಟಿಸಿದ ಹಣಕಾಸಿನ ನೆರವು ಸರಿಯಾಗಿ ದೊರೆಯಲು ಅರ್ಜಿ ಸಲ್ಲಿಸುವ ವಿಧಾನವನ್ನು ಸರಳೀಕರಣಗೊಳಿಸಬೇಕು ಎನ್ನುವ ನಿರ್ದೇಶನವನ್ನು ಹೈಕೋರ್ಟ ನೀಡಿದೆ. ಆದರೆ ಕಾರ್ಮಿಕ ಇಲಾಖೆ ಇದನ್ನು ಸರಳೀಕರಣಗೊಳಿಸುವ ಬದಲು ‘ಮಾಲಿಕರಿಂದ ಪ್ರಮಾಣ ಪತ್ರ ತರಬೇಕೆಂಬ’ ಷರತ್ತು ವಿಧಿಸಿದೆ ಇದರಿಂದ ಸಾವಿರಾರು ನೈಜ ಕಾರ್ಮಿಕ ಮಹಿಳೆಯರು ಹಣಕಾಸಿನ ನೆರವು ಮತ್ತು ಇತರೆ ಸೌಲಭ್ಯಗಳಿಂದ ವಂಚಿತರಾಗುವ ಅಪಾಯ ಬಂದಿದೆ. ಹೀಗಾಗಿ ಕಾರ್ಮಿಕ ಸಂಘಟನೆಗಳು ನೀಡುವ ಉದ್ಯೋಗ ಪ್ರಮಾಣ ಪತ್ರವನ್ನು ಮಾನ್ಯ ಮಾಡಿ ನೋಂದಾವಣೆಗೆ ಅವಕಾಶ ನೀಡಬೇಕೆಂಬುದು ನಮ್ಮ ಆಗ್ರಹವಾಗಿದೆ.

ಕೋವಿಡ್ ವಾರಿಯರ್ ಗಳಿಗೆ ಆರ್ಥಿಕ ಭದ್ರತೆ ನೀಡಬೇಕು:

ಕೊವೀಡ್ ನಿಯಂತ್ರಣಕ್ಕಾಗಿ ಜೀವ ಒತ್ತೆ ಇಟ್ಟು ಕೆಲಸ ಮಾಡುತ್ತಿರುವವರು ಕೊವೀಡ್ ವಾರಿಯರ್ಸ್‌ಗಳು. ಆರೋಗ್ಯ ಕಾರ್ಯಕರ್ತರು, ಆಶಾ, ಅಂಗನವಾಡಿ, ಗ್ರಾಮ ಪಂಚಾಯ್ತಿ, ಮುನ್ಸಿಫಲ್ ಮತ್ತು ಗ್ರಾಮ ಪಂಚಾಯ್ತಿ ನೌಕರರು ಇದರಲ್ಲಿ ಪ್ರಮುಖರು. ಆದರೆ ಕರೋನಾ ತಡೆಗಟ್ಟಲು ಕೆಲಸ ಮಾಡುವ ಇವರುಗಳಿಗೆ ಕೇವಲ ಕರೋನಾ ಪೀಡಿತರಾಗಿ ಸಾವನಪ್ಪಿಸಿದವರಿವರಿಗೆ ಮಾತ್ರವೇ 30 ಲಕ್ಷ ಪರಿಹಾರ ದೊರೆಯುತ್ತಿದೆ. ಕೋವೀಡೇತರ ಕಾಯಿಲೆಗಳಿಂದ ಮೃತಪಟ್ಟ ನೌಕರರು ಈ ಪರಿಹಾರದಿಂದ ವಂಚಿತರಾಗಿದ್ದಾರೆ. ಹೀಗಾದರೆ ಮೃತಪಟ್ಟ ನೌಕರರ ಕುಟುಂಬಗಳು ಆರ್ಥೀಕವಾಗಿ ಸಂಕಷ್ಟಕ್ಕೀಡಾಗುತ್ತಾರೆ. ಆದ್ದರಿಂದ ಎಲ್ಲ ಕೊವೀಡ್ ವಾರಿಯರ್ಸ್ ಗಳಿಗೂ ಆರ್ಥೀಕ ಭದ್ರತೆ ಸಿಗುವಂತೆ ವ್ಯವಸ್ಥೆ ಮಾಡಬೇಕು.

ಸಾರಿಗೆ ನೌಕರರ ಮೇಲೆ ಎಸ್ಮಾ ಕಾನೂನು ವಿಸ್ತರಣೆ ರದ್ದು ಮಾಡಿ :

ಇತ್ತೀಚೆಗೆ ನಾಲ್ಕು ವಿಭಾಗಗಳ ಸಾರಿಗೆ ನೌಕರರು ತಮ್ಮ ಬೇಡಿಕೆಗಳಿಗಾಗಿ ಮುಷ್ಕರ ನಡೆಸಿದರು. ಬಳಿಕ ರಾಜ್ಯ ಹೈಕೋರ್ಟ್ ಮಧ್ಯ ಪ್ರವೇಶದಿಂದಾಗಿ ಮುಷ್ಕರ ಅಂತ್ಯ ಕಂಡಿತು. ನೌಕರರು ಎತ್ತಿದ ಹಲವು ಪ್ರಶ್ನೆಗಳಿಗೆ ಈಗಲೂ ನ್ಯಾಯ ನೀಡುವಲ್ಲಿ ರಾಜ್ಯದ ಬಿಜೆಪಿ ಸರ್ಕಾರ ವಿಫಲವಾಗಿದೆ. ಸಾರಿಗೆ ನೌಕರರ ಸಂಕಟಗಳು ಮುಂದುವರೆದಂತೆ ಮತ್ತೆ ಹೋರಾಟಕ್ಕೆ ಸಾರಿಗೆ ನೌಕರರು ಮುಂದಾಗಬಹುದೆಂಬ ಸೂಚನೆ ರಾಜ್ಯ ಸರ್ಕಾರಕ್ಕೆ ಸಿಕ್ಕಿದೆ ಇಂತಹ ಸಂದರ್ಭದಲ್ಲಿ ನೌಕರರ ಸಂಘಗಳ ಮುಖಂಡರನ್ನು ಆಹ್ವಾನಿಸಿ ಇರುವ ಪರಿಸ್ಥಿತಿ ವಿವರಿಸಿ ಸಕಾರಾತ್ಮಕವಾಗಿ ಸ್ಪಂಧಿಸುವ ಬದಲು ‘ಎಸ್ಮಾ’ ಕಾನೂನನ್ನು 31–21–2021 ರ ವರೆಗೆ ವಿಸ್ತರಿಸುವ ಮೂಲಕ ನೌಕರ ವಿರೋಧಿ ನಿಲು ಕೈಗೊಂಡಿರುವುದು ಸರಿಯಾದ ಕ್ರಮವಲ್ಲ ಹೀಗಾಗಿ ಕೂಡಲೇ ‘ಎಸ್ಮಾ’ ವಿಸ್ತರಣೆ ತೀರ್ಮಾನವನ್ನು ವಾಪಸ್ಸು ಪಡೆಯಬೇಕೆಂದು ಸಿಐಟಿಯು ಆಗ್ರಹಿಸುತ್ತದೆ.

ಮೇಲ್ಕಂಡ ನಾಲ್ಕು ಪ್ರಮುಖ ಅಂಶಗಳ ಆಧಾರದಲ್ಲಿ ಸರ್ಕಾರದ ಗಮನ ಸೆಳೆಯಲು ಇದೇ ಜುಲೈ 8 ರಂದು ರಾಜ್ಯಾದ್ಯಂತ ಜಿಲ್ಲಾ ತಾಲೂಕು ಕೇಂದ್ರಗಳಲ್ಲಿ ಕೊವೀಡ್ ನಿಯಮಗಳನ್ನು ಅನುಸರಿಸಿ ಪ್ರತಿಭಟನೆಗಳನ್ನು ಆಯೋಜಿಸಿ ಈ ಮನವಿಯನ್ನು ತಮಗೆ ಸಲ್ಲಿಸಲಾಗುತ್ತಿದ್ದು ಈ ಬಗ್ಗೆ ಅಗತ್ಯ ಕ್ರಮವಹಿಸಲು ಕೋರುತ್ತೇವೆ.

ವರದಿ: ವಾಸುದೇವ ಉಚ್ಚಿಲ್

ಬೆಲೆ ಏರಿಕೆ ವಿರೋಧಿಸಿ ಕರಾವಳಿ ಜಿಲ್ಲೆಗಳಲ್ಲಿ ಪ್ರತಿಭಟನೆ

ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಹಾಗೂ ಅಗತ್ಯ ವಸ್ತುಗಳ ವಿಪರೀತ ಬೆಲೆ ಏರಿಕೆಯನ್ನು ವಿರೋಧಿಸಿ 8 ಜುಲೈ 2021 ಮಂಗಳೂರು ನಗರದ ಬೀದಿ ಬದಿ ವ್ಯಾಪಾರಸ್ಥರು ಬೀದಿಗಿಳಿದು ಪ್ರತಿಭಟನೆ ನಡೆಸಿದರು.

ನಗರದ ಸ್ಟೇಟ್‌ಬ್ಯಾಂಕ್ ಬಳಿ ಹಾಗೂ ಲೇಡಿಗೋಷನ್ ಆಸ್ಪತ್ರೆ ಸಮೀಪ ಬೀದಿಬದಿ ವ್ಯಾಪಾರಸ್ಥರು ಕೇಂದ್ರ ಹಾಗೂ ರಾಜ್ಯ ಸರಕಾರಗಳ ಜನವಿರೋಧಿ ನೀತಿಗಳ ವಿರುದ್ಧ ಘೋಷಣೆಗಳನ್ನು ಕೂಗುವ ಮೂಲಕ ಭಿತ್ತಿಚಿತ್ರ ಹಿಡಿದು ಪ್ರತಿಭಟಿಸಿದರು.

ಬೆಲೆ ಏರಿಕೆಯ ವಿರುದ್ಧ ಸಿಪಿಎಂ ಮಂಗಳೂರು ನಗರದಾದ್ಯಂತ ಹಮ್ಮಿಕೊಂಡ ವಾರಾಚರಣೆಗೆ ಬೀದಿಬದಿ ವ್ಯಾಪಾರಸ್ಥರೂ ಸಾಥ್ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಿಪಿಎಂ ಯುವ ನಾಯಕರಾದ ಬಿ.ಕೆ.ಇಮ್ತಿಯಾಜ್ ಹಾಗೂ ಸಿಪಿಎಂ ನಗರ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಾತನಾಡಿ, ಸರಕಾರ ನಿರಂತರವಾಗಿ ಜನ ವಿರೋಧಿ ನೀತಿಗಳನ್ನು ಜಾರಿಗೊಳಿಸುವ ಮೂಲಕ ಜನಸಾಮಾನ್ಯರ ಬದುಕನ್ನು ತೀರಾ ನಿರ್ಲಕ್ಷ್ಯ ವಹಿಸುತ್ತಿದೆ ಎಂದು ಸರಕಾರಗಳ ಕ್ರಮವನ್ನು ಟೀಕಿಸಿದರು.



ಪ್ರತಿಭಟನೆಯಲ್ಲಿ ಸಿಪಿಎಂ ನಾಯಕರಾದ ಮಹಮ್ಮದ್ ಮುಸ್ತಾಫಾ, ಹರೀಶ್ ಪೂಜಾರಿ, ಸಂತೋಷ್ ಆರ್.ಎಸ್, ಕಾರ್ಮಿಕ ನಾಯಕರಾದ ವಿಲ್ಲಿ ವಿಲ್ಸನ್, ನೌಶಾದ್, ಶ್ರೀಧರ್ ಮೊದಲಾದವರು ಭಾಗವಹಿಸಿದ್ದರು.

ಸಿಪಿಎಂನಿಂದ ಪ್ರತಿಭಟನಾ ಪ್ರದರ್ಶನ:

ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಸೇರಿದಂತೆ ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಯನ್ನು ಖಂಡಿಸಿ ಸಿಪಿಎಂ ನೇತೃತ್ವದಲ್ಲಿ ಮಂಗಳೂರು ನಗರದಾದ್ಯಂತ ವಾರಾಚರಣೆ ನಡೆಯುತ್ತಿದ್ದು, ತಾ.7–7–2021 ರಂದು ಹಂಪನಕಟ್ಟಾ ಪ್ರದೇಶದಲ್ಲಿ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.

ಬೆಲೆ ಏರಿಕೆಗೆ ಕೇಂದ್ರ ಹಾಗೂ ರಾಜ್ಯ ಸರಕಾರಗಳ ತಪ್ಪು ಆರ್ಥಿಕ ನೀತಿ ಕಾರಣ ಎಂದು ಆರೋಪಿಸಿ ಪ್ರತಿಭಟನಾಕಾರರು ಆಕ್ರೋಶಭರಿತರಾಗಿ ಘೋಷಣೆಗಳನ್ನು ಕೂಗುವ ಮೂಲಕ ಸರಕಾರದ ಕ್ರಮವನ್ನು ಖಂಡಿಸಿದರು.

ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಸಿಪಿಎಂ ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜೆ.ಬಾಲಕೃಷ್ಣ ಶೆಟ್ಟಿ, ಸಿಪಿಎಂನ ಯುವ ನಾಯಕ ಸಂತೋಷ್ ಬಜಾಲ್, ಮಂಗಳೂರು ನಗರ ದಕ್ಷಿಣ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಾತನಾಡಿದರು.



ಪ್ರತಿಭಟನೆಯಲ್ಲಿ ಸಿಪಿಎಂ ಮುಖಂಡರಾದ ಜಯಂತಿ ಶೆಟ್ಟಿ, ದಿನೇಶ್ ಶೆಟ್ಟಿ, ಭಾರತಿ ಬೋಳಾರ್, ಶಶಿಧರ್ ಶಕ್ತಿನಗರ, ಉಮೇಶ್ ಶಕ್ತಿನಗರ, ಮುಸ್ತಾಫ, ಹರೀಶ್ ಪೂಜಾರಿ, ನಾಗೇಶ್ ಕೋಟ್ಯಾನ್, ಸುಮತಿ ಅಡ್ಯಾರ್ ಮತ್ತಿತರರು ಭಾಗವಹಿಸಿದ್ದರು.

ಬೆಲೆ ಏರಿಕೆ ವಿರೋಧಿಸಿ ಉಡುಪಿ ಕುಂದಾಪುರದಲ್ಲಿ ಸಿಐಟಿಯು ಧರಣಿ:

ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರೋಧಿಸಿ ಹಾಗೂ ಕಾರ್ಮಿಕರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಸಿಐಟಿಯು ಉಡುಪಿ ತಾಲೂಕು ಸಮಿತಿಯ ನೇತೃತ್ವದಲ್ಲಿ 8 ಜುಲೈ 2021 ರಂದು ಉಡುಪಿ ತಾಲೂಕು ಕಚೇರಿ ಎದುರು ಧರಣಿ ಹಮ್ಮಿಕೊಳ್ಳಲಾಗಿತ್ತು.

ಸಿಐಟಿಯು ರಾಜ್ಯ ಉಪಾಧ್ಯಕ್ಷ ಬಾಲಕೃಷ್ಣ ಶೆಟ್ಟಿ ಮಾತನಾಡಿ, ಅಡುಗೆ ಅನಿಲ, ಬಸ್ ಪ್ರಯಾಣ ದರ, ತೈಲ ಬೆಲೆ ಏರಿಕೆ ಹಾಗೂ ಕಟ್ಟಡ ಕಾರ್ಮಿಕರಿಗೆ ನೀಡಲಾಗುತ್ತಿರುವ ಆಹಾರ ಕಿಟ್‌ಗಳನ್ನು ಶಾಸಕರಿಗೆ ನೀಡುತ್ತಿರುವುದು ಖಂಡನೀಯ. ಆಹಾರ ಕಿಟ್ ಖರೀದಿಯಲ್ಲಿ ನಡೆದ ಅವ್ಯವಹಾರದ ಬಗ್ಗೆ ತನಿಖೆ ನಡೆಸಬೇಕು. ಆಹಾರ ಕಿಟ್ ಬದಲು 10 ಸಾವಿರ ರೂ.ನ್ನು ಕಾರ್ಮಿಕರ ಖಾತೆಗೆ ಜಮೆ ಮಾಡಬೇಕು ಎಂದು ಒತ್ತಾಯಿಸಿದರು.

ಸಿಐಟಿಯು ಜಿಲ್ಲಾ ಖಜಾಂಚಿ ಶಶಿಧರ ಗೊಲ್ಲ, ದಸಂಸ ಅಂಬೇಡ್ಕರ್‌ವಾದ ಜಿಲ್ಲಾ ಸಂಚಾಲಕ ಸುಂದರ ಮಾಸ್ಟರ್ ಮಾತನಾಡಿದರು.

ಸಿಐಟಿಯು ಉಡುಪಿ ತಾಲೂಕು ಅಧ್ಯಕ್ಷ ರಾಮ ಕರ್ಕಡ, ಕವಿರಾಜ್ ಎಸ್, ಉಡುಪಿ ಕಟ್ಟಡ ಸಂಘದ ಮುಖಂಡರಾದ ವಾಮನ ಪೂಜಾರಿ, ಸುಭಾಷ್ ನಾಯಕ್, ಉದಯ ಪೂಜಾರಿ, ಉಡುಪಿ ಬೀಡಿ ಸಂಘದ ಮುಖಂಡರಾದ ಉಮೇಶ್ ಕುಂದರ್, ನಳಿನಿ, ಸಂಜೀವ ನಾಯಕ್, ಗಿರಿಜಾ ಉಪಸ್ಥಿತರಿದ್ದರು.

ಬೆಲೆ ಏರಿಕೆ ಹಾಗೂ ಕಾರ್ಮಿಕರ ಆಹಾರ್ ಕಿಟ್ ಅವ್ಯಬವಹಾರದ ತನಿಖೆಗೆ ಆಗ್ರಹಿಸಿ ಸಿಐಟಿಯು ಕುಂದಾಪುರ ತಾಲೂಕು ಸಮಿತಿ ವತಿಯಿಂದ 8 ಜುಲೈ 2021 ರಂದು ಕುಂದಾಪುರ ತಾಲೂಕು ಸಮಿತಿ ವತಿಯಿಂದ ಕುಂದಾಪುರದ ಮಿನಿ ವಿಧಾನಸೌಧದ ಎದುರು ಧರಣಿ ನಡೆಸಲಾಯಿತು.

ಸಿಐಟಿಯು ಜಿಲ್ಲಾಧ್ಯಕ್ಷ ಕೆ. ಶಂಕರ್, ತಾಲೂಕು ಸಂಚಾಲಕ ಎಚ್. ನರಸಿಂಹ, ಪ್ರಧಾನ ಕಾರ್ಯದರ್ಶಿ ಸುರೇಶ್ ಕಲ್ಲಾಗರ ಮಾತನಾಡಿದರು.

ಬಳಿಕ ಉಪತಹಶೀಲ್ದಾರ್ ಶಂಕರ್ ಕೆ., ಮೂಲಕ ಸಿಎಂಗೆ ಮನವಿ ಸಲ್ಲಿಸಲಾಯಿತು. ಧರಣಿಯಲ್ಲಿ ಪುರಸಭಾ ಮಾಜಿ ಅಧ್ಯಕ್ಷ ನರಸಿಂಹ, ಮುಖಂಡರಾದ ಮಹಾಬಲ ವಡೇರಹೋಬಳಿ ಮತ್ತಿತರರು ಭಾಗವಹಿಸಿದ್ದರು.

ಅಡುಗೆ ಅನಿಲ ಬೆಲೆ ಏರಿಕೆ ವಿರೋಧಿಸಿ ಕುಂದಾಪುರದಲ್ಲಿ ಪ್ರತಿಭಟನೆ:



ಅಡುಗೆ ಅನಿಲ ಬೆಲೆ ಏರಿಕೆ ವಿರೋಧಿಸಿ ಡಿವೈಎಫ್ಐ ಕುಂದಾಪುರ ತಾಲೂಕು ಸಮಿತಿ ಹಾಗೂ ಕುಂದಾಪುರ ಆಟೋರಿಕ್ಷಾ ಮತ್ತು ವಾಹನ ಚಾಲಕರ ಸಂಘ (ಸಿಐಟಿಯು) ನೇತೃತ್ವದಲ್ಲಿ 8 ಜುಲೈ 2021 ಕುಂದಾಪುರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಡಿವೈಎಫ್ಐ ತಾಲೂಕು ಅಧ್ಯಕ್ಷ ರಾಜೇಶ್ ವಡೇರಹೋಬಳಿ ಮಾತನಾಡಿ, ಕೋವಿಡ್ ಸಾಮಾನ್ಯ ಜನತೆಯ ಬದುಕನ್ನು ಕಸಿದುಕೊಂಡಿರುವ ಈ ದಿನಗಳಲ್ಲಿ ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡನೀಯ ಎಂದರು.

ರಿಕ್ಷಾ ಚಾಲಕರ ಸಂಘಟನೆಯ ಪ್ರಧಾನ ಕಾರ್ಯದರ್ಶಿ ರಾಜು ದೇವಾಡಿಗ ಮಾತನಾಡಿದರು.

ಪ್ರತಿಭಟನೆಯಲ್ಲಿ ಡಿವೈಎಫ್ಐ ಮುಖಂಡರಾದ ರಾಜ ಬಿಟಿಆರ್, ನಿತಿನ್, ಸಂತೋಷ್, ರಿಕ್ಷಾ ಚಾಲಕರ ಮುಖಂಡರಾದ ಕರುಣಾಕರ ಎಚ್, ಲಕ್ಷ್ಮಣ ಬರೇಕಟ್ಟು, ಚಂದ್ರ ವಿ. ಮೊದಲಾದವರು ಉಪಸ್ಥಿತರಿದ್ದರು.

ಖಾಸಗೀಕರಣ ದಲಿತರನ್ನು ವಿನಾಶದತ್ತ ತಳ್ಳುತ್ತಿದೆ

ದೇಶದಲ್ಲಿ 25% ದಲಿತರು ಸ್ವಾತಂತ್ರ್ಯ ನಂತರದ 60–70 ವರ್ಷದಲ್ಲಿ ಇಂದಿಗೂ ಜಾತಿ ತಾರತಮ್ಯ, ದೌರ್ಜನ್ಯ, ಶೋಷಣೆ ಅವ್ಯಾಹತವಾಗಿ ಮುಂದುವರಿದಿದೆ ಎಂದು ದಲಿತ ಶೋಷಣ್ ಮುಕ್ತಿ ಮಂಚ್‌ನ ರಾಷ್ಟ್ರೀಯ ಅಧ್ಯಕ್ಷರಾದ ಕೆ. ರಾಧಕೃಷ್ಣನ್ ರವರು ಹೇಳಿದರು. ಅವರು ದಲಿತ ಹಕ್ಕುಗಳ ಸಮಿತಿ ಕರ್ನಾಟಕ ರಾಜ್ಯ ಸಮಿತಿ ಏರ್ಪಡಿಸಿದ್ದ ರಾಜ್ಯ ಮಟ್ಟದ ದಲಿತರ ಹಕ್ಕುಗಳು ಮತ್ತು ಸಾಮಾಜಿಕ ನ್ಯಾಯ ಸಂರಕ್ಷಣಾ ಅಭಿಯಾನದ ಸಮಾರೋಪದ ಉದ್ಘಾಟನೆ ನೆರವೇರಿಸಿ ಮಾತನಾಡುತ್ತಿದ್ದರು. ಅಂಬೇಡ್ಕರ್ ರವರು ಸಂವಿಧಾನದಲ್ಲಿ ಹೇಳಿರುವ ಮಾನವ ಹಕ್ಕುಗಳ ಬಗ್ಗೆ ಎಷ್ಟೇ ಪ್ರತಿಪಾದಿಸಿದ್ದರು. ಜಾತಿಯಲ್ಲಿ ಅಸಮಾನತೆ ಕಾಣುತ್ತ, ಉದ್ಯೋಗ ಶಿಕ್ಷಣದಿಂದ ವಂಚನೆಗೊಳಗಾದ ಸಮುದಾಯ, ಜಾತಿ ವ್ಯವಸ್ಥೆಗೆ ದೊಡ್ಡ ಪೆಟ್ಟು ನೀಡುವ ಮೂಲಕ ರೈತ–ಕಾರ್ಮಿಕ ವರ್ಗದ ಜೊತೆ ಸೇರಿ ಶೋಷಣೆ ವಿರುದ್ಧ ವಿಮೋಚನೆ ಹೋರಾಟ ಮಾಡುವ ಗುರಿ ಸಾಧನೆಗಾಗಿ ಶ್ರಮಿಸಲು ಕರೆ ನೀಡಿದರು.

ಕೇರಳದಲ್ಲಿ ಎಡ ಸರ್ಕಾರಗಳು ಜಾರಿಗೆ ತಂದ ಹಲವು ದಲಿತ ಪರ ಕಾರ್ಯಕ್ರಮಗಳ ಫಲವಾಗಿ ಇಂದು ಭೂಸುಧಾರಣೆ ಎಲ್ಲರಿಗೂ ಮನೆ, ಕುಡಿಯುವ ನೀರು, ಶಿಕ್ಷಣದಲ್ಲಿ ಆದಿವಾಸಿ ಬುಡಕಟ್ಟು ದಲಿತರನ್ನು ಆನ್ ಲೈನ್ ಮೂಲಕ ಅವರ ಪ್ರದೇಶಗಳಿಗೂ ಶಿಕ್ಷಣ ಸೌಲಭ್ಯ ಒದಗಿಸಿ ಅಧಿಕಾರ ವಿಕೇಂದ್ರಿಕರಣ ಮತ್ತು ಸಂಪತ್ತಿನ ಹಂಚಿಕೆಯನ್ನು ಸಮಾನಗೊಳಿಸುವ ನೀತಿ ಅನುಸರಿಸಲಾಗುತ್ತಿದೆ ಎಂದು ಹೇಳಿದರು.

ಸರ್ಕಾರದ ಯೋಜನೆಗಳು ದಲಿತರಿಗೆ ತಲುಪುವ ವೈಫಲ್ಯಗಳ ವಿರುದ್ಧ ಜಾಗೃತಿ ಅರಿವು ಮೂಡಿಸಿ ಕಾನೂನಾತ್ಮಕ ಹೋರಾಟ ನಡೆಸುವ, ಶಿಕ್ಷಣ ಮತ್ತು ಉದ್ಯೋಗಕ್ಕೆ ಯುವಜನರಿಗೆ ಕೌಶಲ್ಯ ತರಬೇತಿ ನೀಡಿ ಅವರು ಅಭಿವೃದ್ಧಿಯಲ್ಲಿ ಪಾಲ್ಗೊಳುವಂತೆ ಮಾಡುವುದು ನಮ್ಮ ಆದ್ಯತೆಯಾಗಿದೆ. ಅಮೇರಿಕಾದ ನಿಗ್ರೋ ಜನರು ಅಲ್ಲಿನ ವರ್ಣಬೇದ ನೀತಿಯ ವಿರುದ್ಧ ಹೋರಾಟ ಮಾಡಿ ಎಲ್ಲ ಟೆಂಡರ್ ವರ್ಕ್ಸ್‌ಲ್ಲಿ 12% ಮೀಸಲಾತಿ ಜಾರಿಗೆ ಕಾನೂನಾತ್ಮಕ ಹೋರಾಟ ಮಾಡಿದ ನಿದರ್ಶನ ನೀಡಿದರು. ನಾವು ಸಹ ಸಾರ್ವಜನಿಕ ಹಿತಾಸಕ್ತಿಯ ಹಲವು ಹೋರಾಟವನ್ನು ಕೈಗೊಳ್ಳಬೇಕೆಂದು ನಿವೃತ್ತ ಉಚ್ಚನ್ಯಾಯಾದೀಶ ಹೆಚ್.ಎನ್. ನಾಗ್‌ಮೋಹನ್ ದಾಸ್‌ರವರು ಪ್ರತಿಪಾದಿಸಿದರು.

ವಿಶೇಷ ಸ್ಥಾನಮಾನ ಇದ್ದರೂ ಸಿಗದ ಉದ್ಯೋಗ – ಕನ್ನಡಿಯೊಳಗಿನ ಗಂಟಾಯ್ತೆ 371 ಜೆ ಕಲಂ



ಗುರುರಾಜ ದೇಸಾಯಿ

ಅದು, ತೀರಾ ಹಿಂದುಳಿದಿರುವ ಪ್ರದೇಶ, ಆರ್ಥಿಕ, ಶೈಕ್ಷಣಿಕ ಅಸಮಾನತೆಯಲ್ಲಿ ನರಳುತ್ತಿದೆ ಆ ಪ್ರದೇಶ. ಆ ಪ್ರದೇಶಕ್ಕೆ ವಿಶೇಷ ಸ್ಥಾನ ಮಾನ ನೀಡಿದರೆ ಅಭಿವೃದ್ಧಿಯಾಗುತ್ತದೆ ಎಂಬ ಕಾರಣಕ್ಕೆ ವಿಶೇಷ ಸ್ಥಾನ ಮಾನ ನೀಡಲಾಯಿತು. ಆದರೆ ಅದು ಕನ್ನಡಿಯೊಳಗಿನ ಗಂಟಾಗಿದೆ. ಈ ಪ್ರದೇಶ ಇಂತಹ ಸ್ಥಿತಿಗೆ ಬರಲು ಕಾರಣಯಾರು? ಅಲ್ಲಿರುವ ಅಭಿವೃದ್ಧಿ ಮಂಡಳಿ ಏನು ಮಾಡುತ್ತಿದೆ? ವಿಶೇಷ ಸ್ಥಾನಮಾನದ ಅನುಷ್ಠಾನಕ್ಕೆ ತೊಡಕಾಗಿವೆ ಅನೇಕ ಅಂಶಗಳು.

ನಾನು ಹೇಳಲು ಹೊರಟಿರುವ ಪ್ರದೇಶವೇ ಹೈದ್ರಾಬಾದ್ ಕರ್ನಾಟಕ ಪ್ರದೇಶ, ಈಗ ಅದನ್ನು ಕಲ್ಯಾಣ ಕರ್ನಾಟಕ ಎಂದು ಸರಕಾರ ಬದಲಾಯಿಸಿದೆ. ಕಲ್ಯಾಣ ಕರ್ನಾಟಕ ಭಾಗದವರಿಗೆ ನೀಡಲಾಗಿರುವ 371 ಜೆ ಸ್ಥಾನಮಾನ ಕನ್ನಡಿಯೊಳಗಿನ ಗಂಟಾಗಿದೆ. ಅದರಲ್ಲೂ ಮಾಧ್ಯಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಇದು ಪದೇ ಪದೇ ಸಾಬೀತಾಗುತ್ತಿದೆ. ಹೀಗಾಗಿ, ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಿದ್ದುಪಡಿ ಮಾಡುವಂತೆ ಕೂಗು ಕೇಳಿ ಬರುತ್ತಿದೆ.

2013ರಲ್ಲೆ 371 ಜೆ ಸ್ಥಾನಮಾನ ಜಾರಿಯಾದ ಕೆಲವೇ ವರ್ಷಗಳಲ್ಲಿ ಶಾಲಾ ಶಿಕ್ಷಕರ ನೇಮಕಾತಿಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಿದ್ದುಪಡಿ ಮಾಡಲಾಯಿತು. ಇದರಿಂದ 371 ಜೆ ಸ್ಥಾನಮಾನ ಇದ್ದರೂ ನೇಮಕಾತಿಗೆ ಅಡ್ಡಿಯಾಯಿತು. ಈ ಕಾರಣದಿಂದಾಗಿಯೇ ಇನ್ನಷ್ಟೂ ನಿರುದ್ಯೋಗ ಸೃಷ್ಟಿಯಾಗುತ್ತಿದೆ. ಸಿಇಟಿ ಬರೆದು ಬಿಇಡಿ ಪಾಸಾಗಿರುತ್ತೇವೆ, ಇದಾದ ಮೇಲೆ ನೇಮಕಾತಿ ಸಿಇಟಿ ನಡೆಯುತ್ತದೆ. ಇದರ ಮಧ್ಯೆ ಈಗ ಟಿಇಟಿ ಪರೀಕ್ಷೆಯನ್ನು ಮಾಡಲಾಗಿದೆ. ಇದಕ್ಕೆ ನೂರೆಂಟು ಷರತ್ತುಗಳನ್ನು ಮಾಡಿದ್ದರಿಂದ ಪದವಿ ಅರ್ಹತೆ ಇದ್ದರೂ ನಾವು ನೇಮಕಾತಿಗೆ ಅರ್ಹತೆ ಹೊಂದುತ್ತಿಲ್ಲ ಎಂದು ಉದ್ಯೋಗಾಕಾಂಕ್ಷಿಗಳು ಆರೋಪಿಸಿದ್ದಾರೆ.


ಪದವಿ ಅರ್ಹತೆ ಇದ್ದರೂ ನೇಮಕವಾಗದೆ ನಿರುದ್ಯೋಗ ಸಮಸ್ಯೇ ಸೃಷ್ಟಿಯಾಗುತ್ತಿದೆ. ಕಳೆದೈದು ವರ್ಷಗಳಿಂದ ನೇಮಕಾತಿ ಪ್ರಕ್ರಿಯೆ ನಡೆದರೂ ಹುದ್ದೆಗಳು ಖಾಲಿ ಬೀಳುವಂತಾಗಿವೆ ಎಂಬುದು ಉದ್ಯೋಕಾಂಕ್ಷಿಗಳ ಅಭಿಪ್ರಾಯವಾಗಿತ್ತು. ಇಷ್ಟೆಲ್ಲ ಸಮಸ್ಯೆಗಳನ್ನು ಸೃಷ್ಟಿಸಿರುವ ಆ ನಿಯಮಗಳು ಏನು ಹೇಳುತ್ತವೇ ಅನ್ನುವುದನ್ನು ನೋಡೋಣ ಬನ್ನಿ.

ನಿಯಮದಲ್ಲಿ ಏನಿದೆ? ಅನ್ನುವುದನ್ನು ನೋಡುವುದಾದರೆ,

ನಿಯಮ 1. ಪದವಿಧರರು ಕನಿಷ್ಠ ಶೇ. 50ರಷ್ಟು ಅಂಕಗಳನ್ನು ಪ್ರತಿ ವಿಷಯದಲ್ಲಿ ಪಡೆದಿರಬೇಕು.

ನಿಯಮ 2. 2021ರ ವರೆಗೆ ಬಿಇಡಿ ಮಾಡಿದ ಅಭ್ಯರ್ಥಿಗಳಿಗೆ ಪದವಿಯಲ್ಲಿ ಸರಾಸರಿ ಕನಿಷ್ಠ ಶೇ. 50 ರಷ್ಟು ಅಂಕಗಳನ್ನು ಪಡೆದಿರಬೇಕು ಎಂದಿದೆ.

ನಿಯಮ 3. ಪದವಿಯಲ್ಲಿ ಸರಾಸರಿ ಶೇ. 50 ಅಂಕಗಳನ್ನು ಪಡೆದ ಅಭ್ಯರ್ಥಿಗಳು ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಅರ್ಜಿ ಸಲ್ಲಿಸಬೇಕೆಂದಿದೆ.



ಈ ಪ್ರಕ್ರಿಯೇ ನೇಮಕಾತಿಗೆ ಅಡ್ಡಿಯಾಗುತ್ತಿದೆ. ಪದವಿಧರ ಪ್ರಾಥಮಿಕ ಶಾಲೆಗಳ ಶಿಕ್ಷಕರ ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪತ್ರಿಕೆ–2 ಹಾಗೂ ಪತ್ರಿಕೆ–3ರಲ್ಲಿ ಕ್ರಮವಾಗಿ ಶೇ. 50 ಹಾಗೂ ಶೇ. 60 ಅಂಕಗಳನ್ನು ಪಡೆಯಲೇಬೇಕು. ನೇಮಕಾತಿಯ ಸಂದರ್ಭದಲ್ಲಿ ಆಯ್ಕೆ ಪಟ್ಟಿಯನ್ನು ಅಂತಿಮಗೊಳಿಸುವಾಗ ಅಭ್ಯರ್ಥಿಯ ಪದವಿ, ಶಿಕ್ಷಕರ ಅರ್ಹತಾ ಪರೀಕ್ಷೆ, ಬಿಇಡಿ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳಲ್ಲಿ ಶೇಕಡಾವಾರು ಪ್ರಮಾಣದ ಅಂಕಗಳನ್ನು ಪರಿಗಣಿಸಿ ಪಟ್ಟಿಯನ್ನು ಅಂತಿಮಗೊಳಿಸಲಾಗುತ್ತದೆ. ಅಂದರೆ ಒಟ್ಟು ನೂರು ಅಂಕಕ್ಕೆ ಸ್ಪರ್ಧಾತ್ಮಕ ಪರೀಕ್ಷೆಯಿಂದ 35 ಅಂಕ, ಟಿಇಟಿ ಪರೀಕ್ಷೆಯಿಂದ 15 ಅಂಕ, ಪದವಿ ಪರೀಕ್ಷೆಗಳಿಂದ 25 ಅಂಕ, ಬಿಇಡಿ ಪದವಿಯಲ್ಲಿನ 25 ಅಂಕ, ಹೀಗೆ ಅಂಕಗಳನ್ನು ಪರಿಗಣಿಸಿ ಅಭ್ಯರ್ಥಿಯ ಪ್ರತಿ ಪರೀಕ್ಷೆಗಳಲ್ಲಿ ಪಡೆದ ಅಂಕಗಳಿಗೂ ಮಹತ್ವ ನೀಡಲಾಗುತ್ತಿದೆ.

ನೇಮಕಾತಿ ಪ್ರಕ್ರಿಯೆಗೆ ಈ ರೀತಿಯ ಮಾನದಂಡವನ್ನು ಬಳಸುತ್ತಿರುವುದು ಸರಿಯಾದ ವಿಧಾನ ಅಲ್ಲ. ಸಿಇಟಿ ಬರೆದ ಅವರು ಬಿಎಡ್ ಮುಗಿಸಿರುತ್ತಾರೆ, ಮತ್ತೆ ಟಿಇಟಿ ಬರೆಯುವುದು, ಸಿಇಟಿ ಬರೆಯುವುದು ಬರೀ ಪರೀಕ್ಷೆಗಳನ್ನು ಬರೆಯುವುದರಲ್ಲಿಯೇ ವಯಸ್ಸು ಕಳೆದುಹೋಗುತ್ತದೆ. ಸಾಲದ್ದಕ್ಕೆ ಪ್ರತಿ ಪರೀಕ್ಷೆಗಳಿಗೆ ಹಣ ತುಂಬಿ ಸರಕಾರದ ಬೊಕ್ಕಸ ಮಾತ್ರ ತುಂಬಿಸುತ್ತಿದ್ದೇವೆ ಹೊರತು ನಮ್ಮ ನೇಮಕಾತಿಯಾಗುತ್ತಿಲ್ಲ ಅಂತ ಕಲ್ಯಾಣ ಕರ್ನಾಟಕದ ಯುವಜನತೆ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಇದು ಶಿಕ್ಷಣ ಇಲಾಖೆಯ ನೇಮಕಾತಿಯಲ್ಲಷ್ಟೆ ಸಮಸ್ಯೆ ಅಲ್ಲ. ಬಹುತೇಕ ಹುದ್ದೆಗಳ ನೇಮಕಾತಿಯಲ್ಲೂ ಈ ಸಮಸ್ಯೆ ಎದ್ದು ಕಾಣುತ್ತಿದೆ. 371 ಜೆ ಕಲಂ ಅನುಷ್ಠಾನ ಸರಿಯಾಗಿ ಆಗದ ಕಾರಣ ಈ ರೀತಿ ಗೊಂದಲ ಉಂಟಾಗಿದೆ ಎಂದು ಹೈದ್ರಾಬಾದ್ ಕರ್ನಾಟಕ ಹೋರಾಟ ಸಮಿತಿಯ ರಾಜ್ಯ ಉಪಾಧ್ಯಕ್ಷರಾದ ರಜಾಕ್ ಉಸ್ತಾದ್ ಆರೋಪಿಸಿದ್ದಾರೆ.

ಹಿರಿಯ ಪತ್ರಕರ್ತ ಸೋಮರೆಡ್ಡಿ ಅಳವಂಡಿಯವರು ಸರಕಾರದ ಈ ನಡೆಗೆ ಪ್ರತಿಕ್ರಿಯಿಸಿದ್ದು, 2017ರಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶ ವ್ಯಾಪ್ತಿಯಲ್ಲಿ 371 ಜೆ ಅಡಿ 5,000 ಶಿಕ್ಷಕರ ನೇಮಕಾತಿಗೆ ಆದೇಶ ಮಾಡಲಾಯಿತು. ಈ ಹುದ್ದೆಗಳಿಗೆ ಲಕ್ಷಾಂತರ ಅಭ್ಯರ್ಥಿಗಳು ಅರ್ಹರಿದ್ದರೂ ಬದಲಾದ ನಿಯಮಗಳನ್ವಯ ಕೇವಲ 2,500 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದರು. ಇದರಲ್ಲಿ ನೇಮಕವಾಗಿದ್ದು 748 ಮಾತ್ರ, ಇನ್ನು 4,252 ಹುದ್ದೆಗಳು ಖಾಲಿ ಉಳಿದವು. ಇದಾದ ಮೇಲೆ 2019ರಲ್ಲಿ ಪುನಃ ಇದೇ ರೀತಿ ಹತ್ತು ಸಾವಿರ ಹುದ್ದೆಗಳ ನೇಮಕಾತಿಗೆ ರಾಜ್ಯ ಸರ್ಕಾರ ಆದೇಶ ಮಾಡಿತು. ಈ ವೇಳೆಯಲ್ಲಿ ಕಲ್ಯಾಣ ಕರ್ನಾಟಕದಲ್ಲಿ ಪುನಃ 5,000 ಹುದ್ದೆಗಳನ್ನು ಭರ್ತಿ ಮಾಡಲು ಮುಂದಾದರು. ಆದರ ಅರ್ಜಿ ಬಂದಿದ್ದು ಮಾತ್ರ ಕೇವಲ 3000! ಇದರಲ್ಲಿ ನೇಮಕವಾಗಿದ್ದು 900 ಹುದ್ದೆಗಳು ಮಾತ್ರ. ಹೀಗಾಗಿ, ಪುನಃ 4,100 ಹುದ್ದೆಗಳು ಖಾಲಿ ಉಳಿದವು. ಈಗ ಕಲ್ಯಾಣ ಕರ್ನಾಟಕದಲ್ಲಿ ಮಾಧ್ಯಮಿಕ ಶಾಲಾ ಶಿಕ್ಷಕರ 4,800 ಹುದ್ದೆಗಳು ಖಾಲಿ ಇವೆ. ಪುನಃ ನೇಮಕ ಮಾಡಿಕೊಳ್ಳಲು ಸರ್ಕಾರ ಮುಂದಾಗಿದೆ. ಮತ್ತೆ ಇದೆ ನಿಯಮಗಳನ್ನ ಜಾರಿ ಮಾಡಿದರೂ ಈ ಬಾರಿಯೂ ಹುದ್ದೆಗಳು ಖಾಲಿ ಉಳಿಯಲಿವೆ ಎಂಬುದು ಹಿರಿಯ ಪತ್ರಕರ್ತ ಸೋಮರೆಡ್ಡಿ ಅಳವಂಡಿಯವರ ಆತಂಕವಾಗಿದೆ.

ಕೆಎಎಸ್, ಐಎಎಸ್‌ಗೆ ಇಲ್ಲದ ಷರತ್ತುಗಳನ್ನು ಶಿಕ್ಷಕರ ನೇಮಕಾತಿಗಳಿಗೆ ಮಾಡಲಾಗಿದೆ. ಇದು ಈ ಭಾಗದ ವಿದ್ಯಾರ್ಥಿಗಳಿಗೆ ಉದ್ಯೋಗ ಆಸೆಯನ್ನೆ ಕಿತ್ತೆಸೆಯುತ್ತಿದೆ. 371 ಜೆ ವಿಶೇಷ ಸ್ಥಾನ ಬಂದ ತಕ್ಷಣವೇ ಈ ಭಾಗದಲ್ಲಿ ಶೆ80 ರಷ್ಟು ಶಿಕ್ಷಣ ಮತ್ತು ಉದ್ಯೋಗ ಸುಧಾರಣೆಯಅಗಲಿದೆ ಎಂದು ಭಾಷಣ ಬಿಗಿದಿದ್ದ ರಾಜಕಾರಣಿಗಳು ಈಗ ಇದರಲ್ಲಿರುವ ನ್ಯೂನ್ಯತೆಗಳನ್ನು ಸರಿಪಡಿಸಲು ಆಸಕ್ತಿ ತೋರುತ್ತಿಲ್ಲ. ಅಷ್ಟೊಂದು ಪ್ರಮಾಣದಲ್ಲಿ ಶಿಕ್ಷಕ ಹುದ್ದೆಗಳು ಖಾಲಿ ಉಳಿದರೆ ಮಕ್ಕಳಿಗೆ ಪಾಠಗಳು ನಡೆಯುವುದು ಹೇಗೆ? ಶೈಕ್ಷಣಿಕ ಅಸಮಾನತೆಯನ್ನು ನಿವಾರಿಸಬೇಕೆಂಬ ಕಾರಣಕ್ಕೆ ವಿಶೇಷ ಸ್ಥಾನಮಾನ ನೀಡಿಯೂ ನಿರ್ಲಕ್ಷದ ಕಾರಣಕ್ಕೆ ಮತ್ತೆ ಶೈಕ್ಷಣಿಕ ಅಸಮಾನತೆ ಹೆಚ್ಚಾಗುತ್ತಿರುವುದು ಆತಂಕದ ವಿಚಾರವಾಗಿದೆ.

ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯೂ, ತನ್ನ ಜವಾಬ್ದಾರಿಯನ್ನು ಮರೆಯುತ್ತಿದೆ. ರಸ್ತೆಗೆ ಡಾಂಬರ್ ಹಾಕುವುದು, ಬಿಲ್ಡಿಂಗ್ ಕಟ್ಟಿಸುವುದು, ಬಸ್‌ಗಳನ್ನು ಖರೀದಿಸುವುದು ಅಷ್ಟೆ ಮಾಡಿದರೆ ಸಾಕಾಗುವುದಿಲ್ಲ, ಶಿಕ್ಷಣ ಮತ್ತು ಉದ್ಯೋಗವನ್ನು ಬಲಪಡಿಸಲು ಅಭಿವೃದ್ಧಿ ಮಂಡಳಿ ಕಾಳಜಿ ತೋರಬೇಕಿದೆ. ಇನ್ನೂ ಕಾಲ ಮಿಂಚಿಲ್ಲ, ಮಾಧ್ಯಮಿಕ ಶಾಲಾ ಶಿಕ್ಷಕರ ನೇಮಕಾತಿ ನಿಯಮಗಳನ್ನು ತಿದ್ದುಪಡಿ ಮಾಡಬೇಕು ಎನ್ನುವ ಈ ಭಾಗದ ಜನರ ಕೂಗಿಗೆ ಸರಕಾರ ಸರಿಯಾದ ನಿರ್ಧಾರವನ್ನು ತೆಗೆದುಕೊಳ್ಳಬೇಕಿದೆ. ಈ ಭಾಗದ ಅಸಮಾನತೆಯನ್ನೂ ಹೋಗಿಸುವುದರ ಜೊತೆಗೆ ವಿಶೇಷ ಸ್ಥಾನಮಾನಕ್ಕೆ ಅರ್ಥವನ್ನು ನೀಡಲು ಮುಂದಾಗಬೇಕಿದೆ. ■

ಮೀಸಲಾತಿ ಏಕೆ: ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಎಚ್‌ಕೆಆರ್‌ಡಿಬಿ) ಗೆ ಪ್ರತಿ ವರ್ಷ 1 ಸಾವಿರ ಕೋಟಿ ಅನುದಾನ ಹಂಚಿಕೆ ಮಾಡಬೇಕು. ಅದರಲ್ಲಿ ಕೇಂದ್ರ ಶೇ.30 ರಷ್ಟು ಮತ್ತು ಶೇ.70 ರಷ್ಟು ರಾಜ್ಯ ಸರಕಾರ ಅನುದಾನ ಒದಗಿಸಬೇಕು. ಈ ಮೂಲಕ ಕೈಗಾರಿಕೆ, ರಸ್ತೆ, ಶಿಕ್ಷಣ, ಆರೋಗ್ಯ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸಬೇಕು. 371(ಜೆ) ಅಡಿಯಲ್ಲಿ ನೇಮಕ ಹಾಗೂ ಮುಂಬಡ್ತಿಗಾಗಿ ಏಕಗವಾಕ್ಷಿ ಮೂಲಕ ಪ್ರಮಾಣಪತ್ರದ ಬದಲಾಗಿ ಕಾಯಂ ಸ್ಮಾರ್ಟ್ ಕಾರ್ಡ್ ಒದಗಿಸಬೇಕು.

ಶೇ. 80 ಮೀಸಲು: ಹೈಕ ವ್ಯಾಪ್ತಿಗೆ ಒಳಪಡುವ ಆರು ಜಿಲ್ಲೆಗಳಲ್ಲಿ ಉದ್ಯೋಗ, ಶಿಕ್ಷಣ ಕ್ಷೇತ್ರಗಳಲ್ಲಿ ಶೇ.80 ರಷ್ಟು ಮೀಸಲು ಇದೆ. ಅತಿ ಹಿಂದುಳಿದ ಈ ಜಿಲ್ಲೆಗಳು ಇದರಿಂದ ಅಭಿವೃದ್ಧಿ ಪಥದತ್ತ ಸಾಗುತ್ತಿವೆ. ಇನ್ನು ಹೈಕ ಜನರಿಗೆ ರಾಜ್ಯದ ಬೇರೆ ಜಿಲ್ಲೆಗಳಲ್ಲಿ ಶೇ.8 ರಷ್ಟು ಮೀಸಲು ಇದೆ.

70% ಜನ ಸಾಮಾನ್ಯರು, 5% ಶ್ರೀಮಂತರು, 25% ಇರುವ ಮಧ್ಯಮ ಸಮುದಾಯಗಳ ಪಾರಮಿಡ್ ಸಮಾಜದಲ್ಲಿ ಬಡವರ ಪರವಾದ ಉಚಿತ ಶಿಕ್ಷಣ–ಆರೋಗ್ಯ ಸರ್ಕಾರದ ನೀತಿಗಳು ಇಲ್ಲದೆ ಎಲ್ಲವು ಖಾಸಗೀಕರಣಗೊಂಡು ಸಾರ್ವಜನಿಕ ನಾಗರೀಕ ಸೌಲಭ್ಯಗಳಿಂದ ಜನತೆ ವಂಚನೆಗೊಳಗಾಗಿದ್ದಾರೆ ಎಂದ ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್. ವರಲಕ್ಷ್ಮಿರವರು ಮೀಸಲಾತಿ ಎಂಬುದು ಮರಿಚಿಕೆಯಾಗಿದೆ. ಕಾರ್ಪೊರೇಟ್ ಸಂಸ್ಥೆಗಳ ಬೆಳವಣಿಗೆಯ ಪರಿಣಾಮ ಗುತ್ತಿಗೆ ಹೊರಗುತ್ತಿಗೆ ಅಸಂಘಟಿತ ಕಾರ್ಮಿಕ ವರ್ಗ ಅತೀಯಾದ ಶೋಷಣೆಗೆ ಒಳಗಾಗಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ದಲಿತ ಹಕ್ಕುಗಳ ಸಮಿತಿ ರಾಜ್ಯ ಸಂಚಾಲಕ ಗೋಪಾಲಕೃಷ್ಣ ಹರಳಹಳ್ಳಿ, ಈ ಉಪನ್ಯಾಸ ಕಾರ್ಯಕ್ರಮ ನಮಗೆ ಹೊಸ ದಾರಿಯನ್ನು ರೂಪಿಸಲು ಕಾರಣವಾಗಿದೆ. ಡಿಹೆಚ್‌ಎಸ್ ರಾಜ್ಯದಲ್ಲಿ ನಡೆಸಿರುವ ದೇವಾಲಯ ಪ್ರವೇಶ ಅಸ್ಪೃಶ್ಯತೆ, ಜಾತಿ ತಾರತಮ್ಯದ ವಿರುದ್ಧ ಭೂಮಿ ಚಳುವಳಿ, ಭಡ್ತಿಮೀಸಲು, ಸರ್ಕಾರದ ದಲಿತ ಬಜೆಟ್ ಜಾರಿಗೆ ಒತ್ತಾಯಿಸಿ ನಡೆಸಿದ ಹೋರಾಟದ ಅನುಭವಗಳನ್ನು ಹಂಚಿಕೊಂಡರು. ರಾಜ್ಯದಲ್ಲಿ ಮತ್ತಷ್ಟು ಬಲಿಷ್ಠ ಚಳುವಳಿ ಕಟ್ಟಲು ಎಲ್ಲರೂ ಸೇರಿ ಐಕ್ಯ ಹೋರಾಟ ನಡೆಸಲಾಗುವುದು ಎಂದು ಹೇಳಿದರು.

ಡಿಎಸ್‌ಎಂಎಂ ರಾಷ್ಟ್ರೀಯ ಸದಸ್ಯ ಹಾಗೂ ರಾಜ್ಯ ಸಹ ಸಂಚಾಲಕ ನಾಗರಾಜ ನಂಜುಂಡಯ್ಯ ಪ್ರಸ್ತಾವಿಕ ಮಾತನಾಡಿದರು, ಸಹ ಸಂಚಾಲಕ ಪೃಥ್ವಿ ಸ್ವಾಗತಿಸಿ, ಸಹ ಸಂಚಾಲಕ ಬಿ. ರಾಜಶೇಖರ ಮೂರ್ತಿ ನಿರೂಪಣೆ ಮಾಡಿದರು. ಬೆಂಗಳೂರು ಉತ್ತರ ಜಿಲ್ಲಾ ಸಂಚಾಲಕ ಹೆಚ್.ಜಿ. ನಾಗಣ್ಣ ಎಲ್ಲರಿಗೂ ವಂದಿಸಿದರು.

ಕಳೆದ ಮೂರು ನಾಲ್ಕು ದಶಕಗಳ ಸಾಂಸ್ಕೃತಿಕ ರಾಜಕಾರಣ ಮತ್ತು ಮತೀಯ ರಾಜಕಾರಣದ ಹಿನ್ನೆಲೆಯಲ್ಲಿ ಈಗಾಗಲೇ ದೇಶದ ವಿಶ್ವವಿದ್ಯಾಲಯಗಳಲ್ಲಿ ಮತೀಯವಾದದ ಛಾಯೆ ದಟ್ಟವಾಗಿ ಆವರಿಸಿದೆ. ಈ ಬೆಳವಣಿಗೆಗೆ ಪೂರಕವಾಗಿಯೇ ಇತಿಹಾಸ ಪಠ್ಯಗಳಲ್ಲಿರುವ ಜಾತ್ಯತೀತ ವಾಸ್ತವಗಳನ್ನು ತೆಗೆದುಹಾಕುವ ಮೂಲಕ ಕೇಂದ್ರ ಬಿಜೆಪಿ ಸರ್ಕಾರ ತನ್ನ ಹಿಂದುತ್ವ ರಾಜಕಾರಣಕ್ಕೆ ಒಂದು ಸ್ಪಷ್ಟ ಶೈಕ್ಷಣಿಕ–ಬೌದ್ಧಿಕ ತಳಹದಿಯನ್ನು ನಿರ್ಮಿಸುತ್ತಿರುವುದು ಸ್ಪಷ್ಟವಾಗಿದೆ. ಪಠ್ಯಕ್ರಮಗಳಲ್ಲಿನ ಚಾರಿತ್ರಿಕ ಸತ್ಯಗಳನ್ನು ವಿರೂಪಗೊಳಿಸುವ ಮೂಲಕ ಅಥವಾ ತನ್ನ ಸೈದ್ಧಾಂತಿಕ ಪರಿಕಲ್ಪನೆಗಳಿಗೆ ಅನುಸಾರವಾಗಿ ತಿರುಚುವ ಪ್ರವೃತ್ತಿಯನ್ನು ಬಿಜೆಪಿ ಆಳ್ವಿಕೆಯ ಎಲ್ಲ ರಾಜ್ಯಗಳಲ್ಲೂ ಕಾಣುತ್ತಲೇ ಬಂದಿದ್ದೇವೆ. ಕರ್ನಾಟಕದ ಸಂದರ್ಭದಲ್ಲೂ ಇತ್ತೀಚೆಗೆ ಸಚಿವರೊಬ್ಬರು ಟಿಪ್ಪೂ ಇತಿಹಾಸವನ್ನು ಪಠ್ಯಕ್ರಮದಿಂದ ಕೈಡುವಂತೆ ಆಗ್ರಹಿಸಿದ್ದುದನ್ನು ಗಮನಿಸಬಹುದು.

ಅತಿಥಿ ಅಂಕಣ



ನಾ ದಿವಾಕರ

ಇತಿಹಾಸವನ್ನು ವಿರೂಪಗೊಳಿಸುವ ಮತ್ತೊಂದು ಪ್ರಯತ್ನ


ಇತಿಹಾಸವನ್ನು ತನ್ನ ಸೈದ್ಧಾಂತಿಕ, ತಾತ್ವಿಕ ನಿಲುವುಗಳಿಗೆ ಪೂರಕವಾಗಿ ಹೇಳುವ ಒಂದು ಪರಂಪರೆ ಆಳುವ ವರ್ಗಗಳಲ್ಲಿ ಮೊದಲಿನಿಂದಲೂ ಕಾಣಬಹುದು. ಒಂದು ಭೌಗೋಳಿಕ ಪ್ರದೇಶದಲ್ಲಿ ಶತಮಾನಗಳಿಂದ ನಡೆದಿರಬಹುದಾದ ಚಾರಿತ್ರಿಕ ಘಟನೆಗಳನ್ನು ಸಮಕಾಲೀನ ಅಧಿಕಾರ ರಾಜಕಾರಣಕ್ಕೆ ಪೂರಕವಾಗುವಂತೆ ತಿರುಚಿ ಹೇಳುವುದು ಅಧಿಕಾರ ಪೀಠಗಳ ಪರಂಪರೆಯಾಗಿಯೇ ಬೆಳೆದು ಬಂದಿದೆ. ಇದಕ್ಕೆ ಭಾರತವನ್ನು 200 ವರ್ಷಗಳ ಕಾಲ ಆಳಿದ ಬ್ರಿಟೀಷ್ ವಸಾಹತು ಸರ್ಕಾರವೂ ಹೊರತಲ್ಲ, ಸ್ವತಂತ್ರ ಗಣತಂತ್ರ, 'ಆತ್ಮನಿರ್ಭರ ಭಾರತ'ವೂ ಹೊರತಲ್ಲ.

ಶಿಕ್ಷಣ ಒಂದು ಸಮಾಜವನ್ನು ಸರಿದಾರಿಯಲ್ಲಿ ಕೊಂಡೊಯ್ಯಬಹುದಾದ ಪ್ರಮುಖ ಸಾಧನ. ಒಂದು ರೀತಿಯಲ್ಲಿ ಏಕೈಕ ಸಾಧನವೂ ಹೌದು. ಏಕೆಂದರೆ ಶಿಕ್ಷಣದ ಮೂಲಕ ಒಂದು ಭೌಗೋಳಿಕ ರಾಷ್ಟ್ರದ ಪ್ರಜೆಗಳಿಗೆ ನೀಡಬಹುದಾದ ಜ್ಞಾನ ಒಂದು ಪರಂಪರೆಯನ್ನು ಸೃಷ್ಟಿಸುತ್ತದೆ. ಸಾಮಾನ್ಯ ಜನರಿಗೆ ತಮ್ಮ ಗತ ಇತಿಹಾಸದ ಆಗುಹೋಗುಗಳನ್ನು ವಸ್ತುನಿಷ್ಠವಾಗಿ ತಿಳಿಸುವುದೇ ಅಲ್ಲದೆ, ತಾವು ವಾಸಿಸುವ ಭೂ ಪ್ರದೇಶದ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಮತ್ತು ಸಮಾಜಶಾಸ್ತ್ರೀಯ ಹೆಜ್ಜೆ ಗುರುತುಗಳನ್ನು, ಪ್ರಾಮಾಣಿಕತೆಯಿಂದ ತಿಳಿಸುವುದರ ಮೂಲಕ, ಒಂದು ಪೀಳಿಗೆಯನ್ನು ಸೌಹಾರ್ದಯುತ ಮಾನವ ಸಮಾಜದ ನಿರ್ಮಾಣದತ್ತ ಕೊಂಡೊಯ್ಯಲು ಸಾಧ್ಯ. ಹಾಗಾಗಿಯೇ ವಿಶ್ವದ ಎಲ್ಲ ದಾರ್ಶನಿಕರೂ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆ, ಮಹತ್ವ ನೀಡಿರುವುದನ್ನು ಗಮನಿಸಬಹುದು.

ಪ್ರಜಾಪ್ರಭುತ್ವವನ್ನು ಗೌರವಿಸುವ ಮತ್ತು ನೈಜ ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಮಾನ್ಯತೆ ನೀಡುವ ಆಳುವ ವ್ಯವಸ್ಥೆಗಳು ಇತಿಹಾಸದಿಂದ ಕಲಿತ ಪಾಠಗಳಿಂದಲೇ ಭವಿಷ್ಯದ ಮಾರ್ಗಗಳನ್ನು ಸರಿಪಡಿಸಿಕೊಳ್ಳುತ್ತಾ ಸಾಗಬೇಕಾಗುತ್ತದೆ. ಆದರೆ ಸಮಕಾಲೀನ ರಾಜಕಾರಣದ ಹಿನ್ನೆಲೆಯಲ್ಲಿ ಹೇಳುವುದಾದರೆ, ಯಾವುದೇ ದೇಶದಲ್ಲಿ ಇದು ಸಾಧ್ಯವಾಗುತ್ತಿಲ್ಲ. ಏಕೆಂದರೆ ಜನಸಾಮಾನ್ಯರನ್ನು, ಸಮಾಜವನ್ನು ಕತ್ತಲಲ್ಲಿರಿಸುವ ಮೂಲಕವೇ ಬಂಡವಾಳ–ಮಾರುಕಟ್ಟೆ ವ್ಯವಸ್ಥೆ ತನ್ನ ಶೋಷಕ ಪರಂಪರೆಯನ್ನು ಜೀವಂತವಾಗಿರಿಸಲು ಬಯಸುತ್ತದೆ. ನೈಜ ಇತಿಹಾಸವನ್ನು ತನ್ನ ಅನುಕೂಲಕ್ಕೆ ತಕ್ಕಂತೆ ತಿರುಚಿ ಹೇಳುವ ಮೂಲಕ, ಸಮಾಜವನ್ನು ಭಾವನಾತ್ಮಕ ನೆಲೆಯಲ್ಲೇ ಬಂಧಿಸಿ, ಶೋಷಣೆಯ ಮಾರ್ಗಗಳಿಗೆ ನೆರವಾಗುತ್ತದೆ. ವಸಾಹತು ಕಾಲದ ಬ್ರಿಟೀಷ್ ಅವಧಿಯಲ್ಲೂ ಇದು ಸಂಭವಿಸಿತ್ತು, 'ಆತ್ಮನಿರ್ಭರ' ಭಾರತದ ಸಂದರ್ಭದಲ್ಲೂ ಇದು ಸಂಭವಿಸುತ್ತಿದೆ. ಕೇಂದ್ರ ಸರ್ಕಾರ ಪದವಿ ಶಿಕ್ಷಣದಲ್ಲಿ ಇತಿಹಾಸದ ಪುಸ್ತಕಗಳನ್ನು ಪರಿಷ್ಕರಿಸಲು ಮುಂದಾಗಿರುವುದನ್ನು ಈ ಹಿನ್ನೆಲೆಯಲ್ಲೇ ನೋಡಬೇಕಾಗುತ್ತದೆ.

ನೂತನ ಪಠ್ಯಕ್ರಮಕ್ಕೆ ಯುಜಿಸಿ ಚಿಂತನೆ

ವಿಶ್ವವಿದ್ಯಾಲಯಗಳ ಪದವಿ ತರಗತಿಗಳಲ್ಲಿ ಬೋಧಿಸಲಾಗುತ್ತಿರುವ ಇತಿಹಾಸ ಪಠ್ಯಗಳನ್ನು ಪರಿಷ್ಕರಿಸಲು ಯುಜಿಸಿ ನಿರ್ಧರಿಸಿದ್ದು ಈ ನಿಟ್ಟಿನಲ್ಲಿ ಒಂದು ದಸ್ತಾವೇಜು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆ. ಪದವಿ ತರಗತಿಗಳ ಇತಿಹಾಸ ಪಠ್ಯಗಳಲ್ಲಿ ಹಿಂದೂ ಮತಧಾರ್ಮಿಕ ಗ್ರಂಥಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡುವ ಮತ್ತು ಮುಘಲ್ ಆಳ್ವಿಕೆಯ ಇತಿಹಾಸವನ್ನು ಅಲಕ್ಷಿಸುವ ನಿಟ್ಟಿನಲ್ಲಿ ಹೊಸ ಪಠ್ಯಕ್ರಮವೊಂದನ್ನು ಸಿದ್ಧಪಡಿಸಲಾಗಿದ್ದು, ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯಕ್ಕೆ ಸಲ್ಲಿಸಲಾಗಿದೆ. ಮೊಟ್ಟಮೊದಲ ಬಾರಿಗೆ ಯುಜಿಸಿ ಸಂಪೂರ್ಣ ಪಠ್ಯಕ್ರಮವನ್ನು ಸಿದ್ಧಪಡಿಸಿದ್ದು, ದೇಶದ ಇತಿಹಾಸವನ್ನು ಸಮರ್ಪಕವಾಗಿ ಅರ್ಥಮಾಡಿಕೊಳ್ಳಲು



ನೆರವಾಗುವಂತೆ ಮಧ್ಯಕಾಲೀನ ಭಾರತೀಯ ಇತಿಹಾಸವನ್ನು ಬೋಧಿಸಲು ಯೋಜಿಸಲಾಗಿದೆ ಎಂದು ತನ್ನ ಕರಡುಪ್ರತಿಯ ಪೀಠಿಕೆಯಲ್ಲಿ ಯುಜಿಸಿ ಹೇಳಿದೆ.

ಈ ಹಿಂದೆಯೂ ಬಿಜೆಪಿ ಸರ್ಕಾರ ಇತಿಹಾಸದಲ್ಲಿ ಹಿಂದೂ ಮತಧಾರ್ಮಿಕ ಭಾವನೆಗಳನ್ನು ಶೋಧಿಸುವ ನಿಟ್ಟಿನಲ್ಲಿ ಇಂತಹ ಒಂದು ಪ್ರಯತ್ನವನ್ನು ಮಾಡಿತ್ತು. ಈ ಬಾರಿ ಹಿಂದೂ ಧರ್ಮವನ್ನೇ ಕೇಂದ್ರೀಕರಿಸುವಂತೆ "ಭಾರತೀಯ ಸಾಹಿತ್ಯದ ಭವ್ಯ ಪರಂಪರೆ– ವೇದ ವೇದಾಂಗ, ಉಪನಿಷತ್ತುಗಳು, ಮಹಾಕಾವ್ಯಗಳು, ಜೈನ ಬೌದ್ಧ ಸಾಹಿತ್ಯ, ಸ್ಮೃತಿ ಮತ್ತು ಪುರಾಣಗಳು" ಇವೆಲವನ್ನೂ ಒಳಗೊಂಡಂತಹ ಇತಿಹಾಸ ಪಠ್ಯಗಳನ್ನು ರಚಿಸಲು ಯುಜಿಸಿ ನಿರ್ಧರಿಸಿದೆ. ಮತಧಾರ್ಮಿಕ ನೆಲೆಯಲ್ಲಿ ತಟಸ್ಥ ಎನ್ನಬಹುದಾದ ಕೌಟಿಲ್ಯನ ಅರ್ಥಶಾಸ್ತ್ರದಂತಹ ಪಠ್ಯಗಳನ್ನು ಕೈಬಿಡಲು ಯೋಚಿಸಲಾಗಿದೆ. ಪ್ರಾಚೀನ ಮತ್ತು ಮಧ್ಯಕಾಲೀನ ಇತಿಹಾಸದ ಬಗ್ಗೆ ಬೆಳಕು ಚೆಲ್ಲುವ ಆರ್ ಎಸ್ ಶರ್ಮ, ಇರ್ಫಾನ್ ಹಬೀಬ್ ಮುಂತಾದವರ ಕೃತಿಗಳನ್ನು ಪಠ್ಯಕ್ರಮದಿಂದ ಕೈಬಿಡಲು ಯೋಚಿಸಲಾಗಿದೆ.

ಮತ್ತೊಂದೆಡೆ ಕೇವಲ ಋಗ್ವೇದದಲ್ಲಿ ಮಾತ್ರವೇ ಪ್ರಸ್ತಾಪವಾಗಿರುವ ಸರಸ್ವತಿ ನದಿ ಮತ್ತು ಅದರ ಸುತ್ತಲಿನ ಪ್ರಾಚೀನ ನಾಗರಿಕತೆ ಪಠ್ಯಕ್ರಮದಲ್ಲಿ ಸ್ಥಾನ ಪಡೆಯಲಿದೆ. ಪ್ರಾಚೀನ ಭಾರತದ ಇತಿಹಾಸದಲ್ಲಿ ಸರಸ್ವತಿ ನದಿಯನ್ನು ಕುರಿತ ಉಲ್ಲೇಖ ಇರುವುದಾದರೂ, ಇದು ಇತಿಹಾಸ ಸಂಶೋಧಕರಿಂದ ಇಂದಿಗೂ ಸಾಕ್ಷ್ಯಾಧಾರಗಳನುಸಾರವಾಗಿ ನಿಖರವಾದ ಮಾಹಿತಿ ಲಭ್ಯವಾಗಿಲ್ಲ. ಪುರಾತತ್ವಶಾಸ್ತ್ರ ಇಲಾಖೆಯಿಂದಲೂ ಸಹ ಇದು ಅಧಿಕೃತವಾದ ಮಾನ್ಯತೆ ಪಡೆದಿಲ್ಲ. ಮುಘಲರ ಆಗಮನವನ್ನು ಅತಿಕ್ರಮಣ ಎಂದು ಬಣ್ಣಿಸಿರುವ ಪಠ್ಯದಲ್ಲಿ ಬ್ರಿಟೀಷರ ವಸಾಹತು ಮತ್ತು ಆಳ್ವಿಕೆಯನ್ನು ಪ್ರಾದೇಶಿಕ ವಿಸ್ತರಣೆ ಎಂದೇ ಬಣ್ಣಿಸಲಾಗಿದೆ. ಕರಡು ಪಠ್ಯಕ್ರಮದಲ್ಲಿ 13 ರಿಂದ 18ನೆಯ ಶತಮಾನದ ಮುಸ್ಲಿಂ ಆಳ್ವಿಕೆಯ ಇತಿಹಾಸಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಲಾಗಿಲ್ಲ.

ಭಾರತದ ಭವ್ಯ ಇತಿಹಾಸ ಮತ್ತು ವ್ಯಾಪಕವಾದ ಚಾರಿತ್ರಿಕ ಹಿನ್ನೆಲೆಯನ್ನು ಸಮರ್ಪಕವಾಗಿ ಬಿಂಬಿಸುವ ಸಲುವಾಗಿ ಅತಿ ಸೂಕ್ಷ್ಮ ಚಾರಿತ್ರಿಕ ಅಂಶಗಳಿಗೂ ಪ್ರಾಮುಖ್ಯತೆ ನೀಡಲಾಗಿದ್ದು, ಇತಿಹಾಸದ ನೈಜ ಚಿತ್ರಣ ನೀಡಲು ಈ ಪ್ರಯತ್ನ ಮಾಡಲಾಗಿದೆ ಎಂದು ಯುಜಿಸಿ ತನ್ನ ಕರಡು ಸಲಹೆಯಲ್ಲಿ ಹೇಳಿದೆ. ಈ ನಿಟ್ಟಿನಲ್ಲಿ ಯುಜಿಸಿ ವಿಶ್ವವಿದ್ಯಾಲಯಗಳಿಗೆ ಸಾಮಾನ್ಯ ನಿರ್ದೇಶನವನ್ನು ಮಾತ್ರ ನೀಡುತ್ತಿತ್ತು. ಶೇ 20 ರಿಂದ 30ರಷ್ಟು ಭಿನ್ನ ಮಾರ್ಗ ಅನುಸರಿಸಲು ವಿಶ್ವವಿದ್ಯಾಲಯಗಳಿಗೆ ಅವಕಾಶ ನೀಡಲಾಗುತ್ತಿತ್ತು. ಇದೇ ಮೊದಲ ಬಾರಿಗೆ ವಿಶ್ವವಿದ್ಯಾಲಯಗಳ ವ್ಯಾಪ್ತಿಯನ್ನೂ ಮೀರಿ ಯುಜಿಸಿ ಸಂಪೂರ್ಣ ಪಠ್ಯಕ್ರಮವನ್ನು ತಾನೇ ಸಿದ್ಧಪಡಿಸಿರುವುದು ಸಾಕಷ್ಟು ಚರ್ಚೆಗೀಡಾಗಿದೆ.

'ಭಾರತದ ಪರಿಕಲ್ಪನೆ' ಎಂದಿದ್ದ ಅಧ್ಯಾಯವನ್ನು ಈಗ 'ಭರತವರ್ಷದ ಪರಿಕಲ್ಪನೆ' ಎಂದು ಮಾರ್ಪಾಡು ಮಾಡಲಾಗಿದ್ದು ಇದರಲ್ಲಿ "ಭಾರತೀಯ ಸಾಹಿತ್ಯದ ಭವ್ಯ ಪರಂಪರೆ– ವೇದ ವೇದಾಂಗ, ಉಪನಿಷತ್ತುಗಳು, ಮಹಾಕಾವ್ಯಗಳು, ಜೈನ ಬೌದ್ಧ ಸಾಹಿತ್ಯ, ಸ್ಮೃತಿ ಮತ್ತು ಪುರಾಣಗಳು" ಒಂದು ಅಧ್ಯಾಯವಾಗಿರುತ್ತದೆ. ಭಾರತೀಯ ಜ್ಞಾನಪರಂಪರೆ, ಕಲೆ ಮತ್ತು ಸಂಸ್ಕೃತಿ ವಿಭಾಗದಲ್ಲಿ ಭಾರತೀಯ ಕಲೆ ಮತ್ತು ಸಂಸ್ಕೃತಿಯ ಮೂಲ ಲಕ್ಷಣಗಳು, ಭಾರತೀಯ ಶಿಕ್ಷಣ ಪದ್ಧತಿ, ಭಾರತೀಯ ಶೌರ್ಯ ಮತ್ತು ಪರಾಕ್ರಮದ ನೀತಿ ಸೂತ್ರಗಳು ಮತ್ತು ಸಂಸ್ಕೃತ, ಪಾಲಿ, ಪ್ರಾಕೃತ್ ಭಾಷೆಗಳನ್ನು ಕುರಿತ ಅಧ್ಯಾಯಗಳನ್ನು ಸೇರ್ಪಡಿಸಲಾಗಿದೆ. ಧರ್ಮ ಮತ್ತು ತತ್ವಶಾಸ್ತ್ರಗಳನ್ನು ಕುರಿತ ಅಧ್ಯಾಯದಲ್ಲಿ, ಧರ್ಮ ಮತ್ತು ದರ್ಶನದ ಭಾರತೀಯ ಪರಿಕಲ್ಪನೆ, ವಸುದೈವ ಕುಟುಂಬಕಂ ಪರಿಕಲ್ಪನೆ, ಕುಟುಂಬ ಮತ್ತು ಸಮಾಜ, ರಾಜಕಾರಣ ಮತ್ತು ಆಡಳಿತ ವ್ಯವಸ್ಥೆ ಹಾಗೂ, ಜಾನಪದ ಮತ್ತು ಗ್ರಾಮ ಸ್ವರಾಜ್ಯವನ್ನು ಕುರಿತ ಅಧ್ಯಾಯಗಳಿವೆ. ವಿಜ್ಞಾನ ಪರಿಸರ ಮತ್ತು ವೈದ್ಯಕೀಯ ವಿಜ್ಞಾನದ ಅಧ್ಯಾಯದಲ್ಲಿ, ಪ್ರಾಚೀನ ಭಾರತದಲ್ಲಿ ವಿಜ್ಞಾನ ಹಾಗೂ ತಂತ್ರಜ್ಞಾನ, ಭಾರತದ ದೃಷ್ಟಿಯಲ್ಲಿ ಪರಿಸರ ರಕ್ಷಣೆ, ಜೀವ ವಿಜ್ಞಾನವನ್ನು ಕುರಿತಂತೆ ಆಯುರ್ವೇದ, ಯೋಗ ಮತ್ತು ನ್ಯಾಚುರೋಪತಿ ಕುರಿತ ಅಧ್ಯಾಯಗಳಿವೆ. ಗಣಿತ ಶಾಸ್ತ್ರ ಮತ್ತು ಭಾರತೀಯ ಸಂಖ್ಯಾ ಪದ್ಧತಿ ಈ ಅಧ್ಯಾಯದಲ್ಲಿ ಒಳಗೊಳ್ಳಲಾಗಿದೆ.

ಋಗ್ವೇದದಲ್ಲಿ ಉಲ್ಲೇಖ ಮಾತ್ರವಾಗಿ ಬರುವ ಸರಸ್ವತಿ ನದಿ ಮತ್ತು ಅದರ ಸುತ್ತಲಿನ ನಾಗರಿಕತೆಯನ್ನು ಕುರಿತು ಪುರಾತತ್ವ ಶಾಸ್ತ್ರದ ವಿದ್ವಾಂಸರು ಮತ್ತು ಇತಿಹಾಸ ಸಂಶೋಧಕರು ತಮ್ಮದೇ ಆದ ಅನುಮಾನಗಳನ್ನು ವ್ಯಕ್ತಪಡಿಸುತ್ತಲೇ ಬಂದಿದ್ದಾರೆ. ಕಳೆದ ಒಂದು ಶತಮಾನದಿಂದಲೂ ಈ ಕುರಿತ ವಾದ ವಿವಾದಗಳು ನಡೆಯುತ್ತಿದ್ದು, ಭಾರತೀಯ ಮತ್ತು ಪಾಶ್ಚಿಮಾತ್ಯ ಇತಿಹಾಸ ತಜ್ಞರು, ವಿದ್ವಾಂಸರು ಸರಸ್ವತಿ ನದಿ ಮತ್ತು ಸರಸ್ವತಿ ನಾಗರಿಕತೆಯ ಅಸ್ತಿತ್ವವನ್ನೇ ಪ್ರಶ್ನಿಸಿದ್ದಾರೆ. ಆದರೂ ಯುಜಿಸಿ ಸಿದ್ಧಪಡಿಸಿರುವ ಪಠ್ಯಕ್ರಮದಲ್ಲಿ ಸಿಂಧೂ–ಸರಸ್ವತಿ, ಸರಸ್ವತಿ ನದಿಯ ನಾಗರಿಕತೆ ಮತ್ತು ವೇದ ಕಾಲದ ನಾಗರಿಕತೆಯ ಬಗ್ಗೆ ಒಂದು ಅಧ್ಯಾಯವನ್ನು ಸೇರಿಸಲಾಗಿದೆ. ಪೌರಾಣಿಕ ಪರಿಕಲ್ಪನೆಯ ಸರಸ್ವತಿ ನದಿಯ ಉಗಮ, ಹರಿವು, ವ್ಯಾಪ್ತಿ ಮತ್ತು ವಿಸ್ತಾರವನ್ನು ಅಧ್ಯಯನ ಮಾಡಲು ಈಗಾಗಲೇ ಕೇಂದ್ರ ಸರ್ಕಾರ ಕೋಟ್ಯಂತರ ರೂಗಳನ್ನು ಖರ್ಚು ಮಾಡಲು ಮುಂದಾಗಿದ್ದು, ಇದು ಹಲವಾರು ಅನುಮಾನಗಳಿಗೆ ಆಸ್ಪದ ನೀಡಿದೆ.

"ಸಮಾಜ ಮತ್ತು ಅರ್ಥವ್ಯವಸ್ಥೆ" ವಿಭಾಗದಲ್ಲಿ ಹಿಂದೂ ಮತ್ತು ಮುಸ್ಲಿಂ ಸಮಾಜಗಳು ಎಂದು ಎರಡು ಪ್ರತ್ಯೇಕ ಅಧ್ಯಾಯಗಳಿರುವುದು, ಮಧ್ಯಕಾಲೀನ ಭಾರತದಲ್ಲಿ ಎರಡೂ ಸಮಾಜಗಳನ್ನು ಭಿನ್ನ ನೆಲೆಯಲ್ಲಿ ನೋಡುವ ಪ್ರಯತ್ನವೇ ಆಗಿದೆ ಎಂದು ಇತಿಹಾಸ ತಜ್ಞರು ಆಕ್ಷೇಪ ವ್ಯಕ್ತಪಡಿಸುತ್ತಾರೆ. ಈ ಎರಡೂ ಸಮುದಾಯಗಳು ಎಲ್ಲ ಇತಿಹಾಸದ ಕಾಲಘಟ್ಟಗಳಲ್ಲೂ ಸಹಬಾಳ್ವೆಯೊಂದಿಗೇ ಇದ್ದುದನ್ನು, ಈವರೆಗಿನ ಇತಿಹಾಸ ಸಂಶೋಧನೆ ಮತ್ತು ಅಧ್ಯಯನಗಳು ಸ್ಪಷ್ಟಪಡಿಸುತ್ತವೆ. ಹೊಸ ಪಠ್ಯಕ್ರಮದಲ್ಲಿ 13ನೆಯ ಶತಮಾನದಿಂದ 18ನೆಯ ಶತಮಾನದ ಇತಿಹಾಸವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ.

ಹೊಸ ಕರಡು ಪಠ್ಯಕ್ರಮದಲ್ಲಿ ಮಹಾತ್ಮ ಗಾಂಧಿ, ಜವಹರಲಾಲ್ ನೆಹರೂ, ಸರದಾರ್ ಪಟೇಲ್ ಮತ್ತು ಭೀಮರಾವ್ ಅಂಬೇಡ್ಕರ್ ಅವರಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿಲ್ಲದೆ. 20ನೆಯ ಶತಮಾನದ ಆರಂಭಿಕ ಕಾಲಘಟ್ಟದ ಕೋಮುವಾದದ ಬೆಳವಣಿಗೆಗಳು ಮತ್ತು 1857 ರಿಂದ 1950ರ ನಡುವಿನ ದಲಿತ ರಾಜಕಾರಣ ಬಗ್ಗೆಯೂ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿಲ್ಲ ಎಂಬ ಆಕ್ಷೇಪಗಳು ಕೇಳಿಬಂದಿವೆ. 1857ರ ಸಿಪಾಯಿ ದಂಗೆಯನ್ನು ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂದು ವ್ಯಾಖ್ಯಾನಿಸಲಾಗಿದೆ. ಆದರೆ 1857ಕ್ಕೂ ಮುನ್ನ ನಡೆದ ಬಂಗಾಲದ ಸನ್ಯಾಸಿ ದಂಗೆ, ಒಡಿಷಾದ ಪೈಕಾ ದಂಗೆ, ತಮಿಳುನಾಡಿನ ಪಾಲಿಗಾರ್ ದಂಗೆಗಳ ಪ್ರಸ್ತಾಪವನ್ನೇ ಕೈಬಿಡಲಾಗಿದೆ. 1905ರ ಬಂಗಾಲ ವಿಭಜನೆ ಮತ್ತು ಅದರ ವಿರುದ್ಧ ನಡೆದ ಪ್ರತಿರೋಧದ ಹೋರಾಟಗಳ ಉಲ್ಲೇಖವನ್ನೂ ಸಹ ಕೈಬಿಡಲಾಗಿದೆ.

ಪರ ವಿರೋಧದ ನಡುವೆ

ಕಳೆದ ಮೂರು ನಾಲ್ಕು ದಶಕಗಳ ಸಾಂಸ್ಕೃತಿಕ ರಾಜಕಾರಣ ಮತ್ತು ಮತೀಯ ರಾಜಕಾರಣದ ಹಿನ್ನೆಲೆಯಲ್ಲಿ ಈಗಾಗಲೇ ದೇಶದ ವಿಶ್ವವಿದ್ಯಾಲಯಗಳಲ್ಲಿ ಮತೀಯವಾದದ ಛಾಯೆ ದಟ್ಟವಾಗಿ ಆವರಿಸಿದೆ. ಈ ಬೆಳವಣಿಗೆಗೆ ಪೂರಕವಾಗಿಯೇ ಇತಿಹಾಸ ಪಠ್ಯಗಳಲ್ಲಿರುವ ಜಾತ್ಯತೀತ ವಾಸ್ತವಗಳನ್ನು ತೆಗೆದುಹಾಕುವ ಮೂಲಕ ಕೇಂದ್ರ ಬಿಜೆಪಿ ಸರ್ಕಾರ ತನ್ನ ಹಿಂದುತ್ವ ರಾಜಕಾರಣಕ್ಕೆ ಒಂದು ಸ್ಪಷ್ಟ ಶೈಕ್ಷಣಿಕ–ಬೌದ್ಧಿಕ ತಳಹದಿಯನ್ನು ನಿರ್ಮಿಸುತ್ತಿರುವುದು ಸ್ಪಷ್ಟವಾಗಿದೆ. ಪಠ್ಯಕ್ರಮಗಳಲ್ಲಿನ ಚಾರಿತ್ರಿಕ ಸತ್ಯಗಳನ್ನು ವಿರೂಪಗೊಳಿಸುವ ಮೂಲಕ ಅಥವಾ ತನ್ನ ಸೈದ್ಧಾಂತಿಕ ಪರಿಕಲ್ಪನೆಗಳಿಗೆ ಅನುಸಾರವಾಗಿ ತಿರುಚುವ ಪ್ರವೃತ್ತಿಯನ್ನು ಬಿಜೆಪಿ ಆಳ್ವಿಕೆಯ ಎಲ್ಲ ರಾಜ್ಯಗಳಲ್ಲೂ ಕಾಣುತ್ತಲೇ ಬಂದಿದ್ದೇವೆ. ಕರ್ನಾಟಕದ ಸಂದರ್ಭದಲ್ಲೂ ಇತ್ತೀಚೆಗೆ ಸಚಿವರೊಬ್ಬರು ಟಿಪ್ಪೂ ಇತಿಹಾಸವನ್ನು ಪಠ್ಯಕ್ರಮದಿಂದ ಕೈಡುವಂತೆ ಆಗ್ರಹಿಸಿದ್ದುದನ್ನು ಗಮನಿಸಬಹುದು.

2020ರ ನೂತನ ಶಿಕ್ಷಣ ನೀತಿಯನ್ನು ಜಾರಿಗೊಳಿಸುತ್ತಲೇ ಉನ್ನತ ವ್ಯಾಸಂಗದ ಪದವಿಗಳಲ್ಲಿ, ಕಾಲೇಜುಗಳಲ್ಲಿ ಇತಿಹಾಸ ಪಠ್ಯವನ್ನು ವಿರೂಪಗೊಳಿಸುವ ಮೂಲಕ ಭಾರತದ ನೈಜ ಚರಿತ್ರೆಯನ್ನು ಮರೆಮಾಚಿ, ಕೋಮುವಾದಿ

ಪುಟ 10 ಕ್ಕೆ

ರಫೇಲ್ ಹಗರಣಕ್ಕೆ ಮರುಜೀವ





ಪ್ರಕಾಶ ಕಾರಟ್

ರಫೇಲ್ ಯುದ್ಧ ವಿಮಾನ ಖರೀದಿ ಸಂಬಂಧ ಭಾರತ ಸರ್ಕಾರ ಮಾಡಿಕೊಂಡ 7.87 ಬಿಲಿಯ ಡಾಲರ್ ಮೊತ್ತದ ಒಪ್ಪಂದದ ಬಗ್ಗೆ ನ್ಯಾಯಾಂಗ ತನಿಖೆ ನಡೆಸಲು ಫ್ರಾನ್ಸ್ ನಿರ್ಧರಿಸಿದ್ದು, 2021 ಜೂನ್ 14ರಂದು ಪ್ರಕ್ರಿಯೆ ಆರಂಭವಾಗಿದೆ. ಶಂಕಿತ 'ಭ್ರಷ್ಟಾಚಾರ', 'ಪ್ರಭಾವ-ಬಳಕೆ', 'ಕಪ್ಪು ಹಣದ ಸ್ವಚ್ಛೀಕರಣ', 'ಸ್ವಜನ-ಪಕ್ಷಪಾತ ಮತ್ತು ಅನಗತ್ಯ ತೆರಿಗೆ ವಿನಾಯಿತಿಗಳು' ಮುಂತಾದ ಅಂಶಗಳ ಬಗ್ಗೆ ತನಿಖೆ ನಡೆಯಲಿದೆ. ಇದರಿಂದಾಗಿ, ನರೇಂದ್ರ ಮೋದಿ ಸರ್ಕಾರ ಮುಚ್ಚಿಹಾಕಲು ಇನ್ನಿಲ್ಲದ ಪ್ರಯತ್ನ ಮಾಡಿದ್ದ ಒಂದು ದೊಡ್ಡ ಹಗರಣಕ್ಕೆ ಮರು ಜೀವ ಬಂದಂತಾಗಿದೆ. ನ್ಯಾಯಾಂಗ ತನಿಖೆಯನ್ನು ತೆರೆಯಲು ಬೆಂಬಲ ನೀಡುವ 'ಫ್ರೆಂಚ್ ರಾಷ್ಟ್ರೀಯ ಹಣಕಾಸು ಫಿರ್ಯಾದಿ ಕಚೇರಿ'(ಪಿಎನ್ಎಫ್)ಯ ನಿರ್ಧಾರವು ಫ್ರಾನ್ಸ್‌ನ ಶೆರ್ಪಾ ಎಂಬ ಸರ್ಕಾರೇತರ ಸಂಸ್ಥೆ (ಎನ್‌ಜಿಒ) ನೀಡಿದ ದೂರನ್ನು ಆಧರಿಸಿದೆ. ಫ್ರಾನ್ಸ್‌ನ ಸ್ವತಂತ್ರ ತನಿಖಾ ಆನ್‌ಲೈನ್ ಪತ್ರಿಕೆ 'ಮೀಡಿಯಾಪಾರ್ಟ್' ಪ್ರಕಟಿಸಿದ 'ರಫೇಲ್ ಪೇಪರ್ಸ್' ಶೀರ್ಷಿಕೆಯ ಸರಣಿ ತನಿಖಾ ವರದಿಗಳಿಂದಾಗಿ ಈ ನಿರ್ಧಾರ ಬಂದಿದೆ. ಪಿಎನ್ಎಫ್‌ನ ಹಾಲಿ ಮುಖ್ಯಸ್ಥ ಜೀನ್-ಫ್ರಾಂಕೊಯಿಸ್ ಬೊಹ್ನರ್ಟ್ ಅವರ ನಿರ್ಧಾರವು ಅವರ ಪೂರ್ವಾಧಿಕಾರಿ ಶ್ರೀಮತಿ ಎಲೀನ್ ಹೂಲೆಟ್ ಅವರ ನಿರ್ಧಾರಕ್ಕೆ ತದ್ವಿರುದ್ಧವಾಗಿರುವುದರಿಂದ ಇದು ಮಹತ್ವ ಪಡೆದುಕೊಂಡಿದೆ. ಶೆರ್ಪಾ ಸಲ್ಲಿಸಿದ್ದ ಮೂಲ ಅರ್ಜಿಯನ್ನು ವಜಾ ಮಾಡಬೇಡಿ ಎಂಬ ತಮ್ಮ ಸಿಬ್ಬಂದಿಯ ಸಲಹೆಯನ್ನು ಧಿಕ್ಕರಿಸಿ ಎಲೀನ್ ಆ ನಿರ್ಧಾರ ಕೈಗೊಂಡಿದ್ದರು. ಫ್ರಾನ್ಸ್‌ನ ಹಿತಗಳ ರಕ್ಷಣೆಗೆಂದು ಹೇಳಿ ದೂರನ್ನು ವಜಾ ಮಾಡಲಾಗಿತ್ತು. ಮೀಡಿಯಾಪಾರ್ಟ್‌ನ 'ರಫೇಲ್ ಪೇಪರ್ಸ್' ತನಿಖೆಗಳು ಒದಗಿಸಿದ ವಿವರಗಳನ್ನು ಆಧರಿಸಿ ಸಮಕಾಲಿಕಗೊಳಿಸಿದ ಆರೋಪಗಳ ಬಗ್ಗೆ ಈ ನ್ಯಾಯಾಂಗ ತನಿಖೆ ನಡೆಯುತ್ತಿದೆ.

ಅನಿಲ್ ಅಂಬಾನಿ ಪಾತ್ರ

2016ರಲ್ಲಿ ಆಗಿನ ಫ್ರೆಂಚ್ ಅಧ್ಯಕ್ಷ ಫ್ರಾಂಕೊಸ್ ಹಾಲ್ಲಂದೆ ಮತ್ತು ಪ್ರಧಾನಿ ಮೋದಿ ಎರಡು ದೇಶಗಳ ಸರ್ಕಾರದ ನಡುವಿನ ರಫೇಲ್ ಒಪ್ಪಂದವನ್ನು ಇತ್ಯರ್ಥಗೊಳಿಸಿದ್ದರು. ಇದರಲ್ಲಿ ರಿಲಯನ್ಸ್ ಸಮೂಹದ ಅಧ್ಯಕ್ಷ ಅನಿಲ್ ಅಂಬಾನಿ ಪಾತ್ರದ ಮೇಲೆ ತನಿಖೆ ಗಮನ ಕೇಂದ್ರೀಕರಿಸಲಿದೆ ಎಂದು ಮೀಡಿಯಾಪಾರ್ಟ್ ಹೇಳಿದೆ. ಹಾಲ್ಲಂದೆ, ಈಗಿನ ಅಧ್ಯಕ್ಷ ಇಮಾನ್ಯುಯೆಲ್ ಮ್ಯಾಕ್ರನ್ (ಹಾಲ್ಲಂದೆ ಸಂಪುಟದಲ್ಲಿ ಆರ್ಥಿಕತೆ ಮತ್ತು ಹಣಕಾಸು ಸಚಿವರಾಗಿದ್ದರು), ಹಾಗೂ ಆಗ ರಕ್ಷಣಾ ಸಚಿವರಾಗಿದ್ದ ಈಗಿನ ವಿದೇಶಾಂಗ ಸಚಿವ ಜೀನ್-ವೆಸ್ ಲೆ ಡ್ರಿಯಾನ್ ಅವರ ಕ್ರಮಗಳ ಬಗ್ಗೆ ಎದ್ದಿರುವ ಪ್ರಶ್ನೆಗಳನ್ನು ಕೂಡ ಈ ಅಪರಾಧ ತನಿಖೆ ಪರಿಶೀಲಿಸಲಿದೆ ಎಂದೂ ಪತ್ರಿಕೆ ಹೊರಗೆಡಹಿದೆ.

> ಈ ದೊಡ್ಡ ಹಗರಣವನ್ನು ಮುಚ್ಚಿ ಹಾಕಲು ಮೋದಿ ಸರ್ಕಾರದ ಶತಪ್ರಯತ್ನಗಳ ಹೊರತಾಗಿಯೂ ಈಗ ಈ ಬಗ್ಗೆ ತನಿಖೆ ನಡೆಸುವ ಫ್ರೆಂಚ್ ನಿರ್ಧಾರ ಇದರಲ್ಲಿ ಎದ್ದಿದ್ದ ಎಲ್ಲ ವಿಷಯಗಳಿಗೆ ಮರುಜೀವ ನೀಡಿದೆಯೆನ್ನುವುದು ವಿಪರ್ಯಾಸವೇ ಸರಿ. ಈ ಫ್ರೆಂಚ್ ನಿರ್ಧಾರದ ಪ್ರಕಟಣೆಯ ನಂತರ ಭಾರತ ಸರ್ಕಾರದಿಂದ ಯಾವುದೇ ಅಧಿಕೃತ ಪ್ರತಿಕ್ರಿಯೆ ಹೊರಬಿದ್ದಿಲ್ಲ. ಈ ಮೌನವೇ ಎಲ್ಲವನ್ನೂ ಹೇಳುತ್ತದೆ. ಎರಡು ಪ್ರಭುತ್ವಗಳ ನಡುವಿನ ಒಪ್ಪಂದದ ಒಂದು ಪಕ್ಷಕ್ಕೇ ತನಿಖೆ ನಡೆಸಲು ಮೇಲ್ನೋಟಕ್ಕೇ ಆಧಾರಗಳಿವೆ ಎಂದು ಕಂಡಿರುವಾಗ ಒಂದು ಸ್ವತಂತ್ರ, ಉನ್ನತ ಮಟ್ಟದ ತನಿಖೆಯನ್ನು ಮುಂದಕ್ಕೆ ಹಾಕುವುದು ಮೋದಿ ಸರ್ಕಾರಕ್ಕೆ ಎಂದಿನ ವರೆಗೆ ಸಾಧ್ಯ?

ರಫೇಲ್ ಸಮರ ವಿಮಾನ ತಯಾರಿಸುವ ಕಂಪೆನಿ ಡಸ್ಸಾಲ್ ಏವಿಯೇಶನ್ ಮತ್ತು ಅನಿಲ್ ಅಂಬಾನಿಯ ರಿಲಯನ್ಸ್ ಸಮೂಹದ ನಡುವೆ ಸಹಿ ಹಾಕಲಾದ ಪಾಲುದಾರಿಕೆ ಒಪ್ಪಂದವೇ ಕ್ರಿಮಿನಲ್ ದೂರು ಮತ್ತು ನ್ಯಾಯಾಂಗ ತನಿಖೆಯ ಪ್ರಮುಖ ಅಂಶವಾಗಿದೆ. ಈ ಒಪ್ಪಂದದ ಆಧಾರದಲ್ಲಿ ರಿಲಯನ್ಸ್ ಸಮೂಹ 2017ರಲ್ಲಿ ಡಸ್ಸಾಲ್ ರಿಲಯನ್ಸ್ ಏರೋಸ್ಪೇಸ್ ಲಿಮಿಟೆಡ್ (ಡಿಆರ್‌ಎಎಲ್) ಎಂಬ ಜಂಟಿ ಒಡೆತನದ ಕಂಪೆನಿಯನ್ನು ಹುಟ್ಟು ಹಾಕಿತ್ತು, ಅದು ನಾಗ್ಪುರ ಸಮೀಪ ಒಂದು ಕೈಗಾರಿಕಾ ಸ್ಥಾವರವನ್ನು ನಿರ್ಮಿಸಿತ್ತು. ರಾಜಕೀಯ ಉದ್ದೇಶ ಹೊರತುಪಡಿಸಿ ಪಾಲುದಾರಿಕೆಯಲ್ಲಿ ಡಸ್ಸಾಲ್‌ಗೆ ಇನ್ಯಾವುದೇ ರೀತಿಯ ಆಸಕ್ತಿ ಇರಲಿಲ್ಲ ಎನ್ನುವುದು ಮೀಡಿಯಾಪಾರ್ಟ್‌ಗೆ ಲಭ್ಯವಾದ ಗೌಪ್ಯ ದಾಖಲೆಪತ್ರಗಳಿಂದ ತಿಳಿದು ಬಂದಿದೆ.

ರಿಲಯನ್ಸ್ ಕಂಪೆನಿಯು ಜಂಟಿ ಉದ್ಯಮಕ್ಕೆ ಯಾವುದೇ ರೀತಿ ಹೂಡಿಕೆ ಅಥವಾ ಮಹತ್ವದ ತಾಂತ್ರಿಕ ಪರಿಣತಿಯನ್ನು ತರಲಿಲ್ಲ. ತನ್ನ ಸಾಮರ್ಥ್ಯ ಬಳಸಿ ರಾಜಕೀಯ ಪ್ರಭಾವವನ್ನಷ್ಟೇ ಅದು ತಂದಿತ್ತು ಎಂದು ಪತ್ರಿಕೆ ಹೇಳಿದೆ. "ಭಾರತ ಸರ್ಕಾರದೊಂದಿಗೆ ಕಾರ್ಯಕ್ರಮಗಳು ಮತ್ತು ಸೇವೆಗಳ ಮಾರ್ಕೆಟಿಂಗ್"ನ ಗುರಿಯನ್ನು ಅನಿಲ್ ಅಂಬಾನಿ ಗುಂಪಿಗೆ ವಹಿಸುವ ಬಗ್ಗೆ ರಿಲಯನ್ಸ್ ಮತ್ತು ಡಸ್ಸಾಲ್ ನಡುವಿನ ಒಪ್ಪಂದದ ವಿವರ ತಾನು ಪಡೆದ ಒಂದು ದಸ್ತಾವೇಜಿನಲ್ಲಿದೆ ಎಂದು ಮೀಡಿಯಾಪಾರ್ಟ್ ತಿಳಿಸಿದೆ.



ಈ ವೈರಸ್ ಅಪಾಯಕಾರೀ ರೀತಿಯಲ್ಲಿ ರೂಪಾಂತರಗೊಳ್ಳುತ್ತಿದೆ... .... ಅದೀಗ ಫ್ರೆಂಚ್ ರೂಪಾಂತರಿ!

ವ್ಯಂಗ್ಯಚಿತ್ರ: ಸತೀಶ ಆಚಾರ್ಯ

ಮಧ್ಯವರ್ತಿಯ ವಿಚಾರ ಏನಾಯಿತು?

ಮೀಡಿಯಾಪಾರ್ಟ್ ಅಲ್ಲದೆ ಭಾರತದ ಪತ್ರಿಕೆಗಳು ಕೂಡ ಕಲೆ ಹಾಕಿದ ಮಾಹಿತಿಗಳು, ರಫೆಲ್ ವ್ಯವಹಾರವೂ ಸೇರಿದಂತೆ ಭಾರತದ ರಕ್ಷಣಾ ವ್ಯವಹಾರಗಳಲ್ಲಿ ಇನ್ನೊಬ್ಬ ಮಧ್ಯವರ್ತಿ ಸುಶೇನ್ ಗುಪ್ತಾ ಎಂಬಾತನ ಪಾತ್ರ ಇರುವುದನ್ನೂ ಬಹಿರಂಗಪಡಿಸಿವೆ. ಅನುಷ್ಠಾನ ನಿರ್ದೇಶನಾಲಯ (ಇ.ಡಿ.) 2019ರಲ್ಲಿ ಗುಪ್ತಾನನ್ನು "ಕಪ್ಪು ಹಣವನ್ನು ಸ್ವಚ್ಛಗೊಳಿಸುವ" ಆರೋಪದ ಮೇಲೆ ಬಂಧಿಸಿದ್ದು ಆತ ಈಗ ಜಾಮೀನು ಮೇಲೆ ಹೊರಗಿದ್ದಾನೆ.

ಗುಪ್ತಾ ಲಂಚ ಪಡೆದಿದ್ದಾನೆ ಎಂದು ಆತನ ವಿರುದ್ಧ ಇ.ಡಿ. ದಾಖಲಿಸಿರುವ ದೂರಿನಲ್ಲಿ ಆರೋಪಿಸಲಾಗಿದೆ. ಆ ಹಣವನ್ನು ಆತ ರಾಜಕಾರಣಿಗಳು, ಅಧಿಕಾರಿಗಳು ಮತ್ತು ಸರ್ಕಾರದ ನೌಕರರಿಗೆ ನೀಡಲು ಬಳಸಿದ್ದಾನೆ. ಆಗಸ್ಟಾ ವೆಸ್ಟ್‌ಲ್ಯಾಂಡ್‌ನೊಂದಿಗಿನ 550 ಮಿಲಿಯ ಡಾಲರ್ ಮೊತ್ತದ ವ್ಯವಹಾರ ಹಾಗೂ ಇತರ ವ್ಯವಹಾರಗಳಲ್ಲಿ ಲಂಚ ನೀಡಲು ಗುಪ್ತಾ ಆ ಹಣ ಬಳಸಿದ್ದಾನೆ ಎನ್ನುವುದು ಆರೋಪ. ಈ ಹಗರಣವನ್ನು 'ಚಾಪರ್‌ಗೇಟ್' ಎನ್ನಲಾಗುತ್ತದೆ. ಆದರೆ, ಇತರ ರಕ್ಷಣಾ ವ್ಯವಹಾರಗಳಲ್ಲಿ ಪಡೆದ ಲಂಚವು ಆಗಸ್ಟಾ ವೆಸ್ಟ್‌ಲ್ಯಾಂಡ್ ಹಗರಣದ ತನಿಖೆಗೆ ಸಂಬಂಧಪಡದಿರುವುದರಿಂದ ಇತರ ವ್ಯವಹಾರಗಳ ಬಗ್ಗೆ ಪ್ರತ್ಯೇಕ ತನಿಖೆ ನಡೆಸಲಾಗುವುದೆಂದು 2019 ಮೇ 20ರಂದು ಗುಪ್ತಾ ವಿರುದ್ಧ ಸಲ್ಲಿಸಿದ ಚಾರ್ಜ್‌ಶೀಟ್‌ನಲ್ಲಿ ಅನುಷ್ಠಾನ ನಿರ್ದೇಶನಾಲಯ ಹೇಳಿತ್ತು.

ರಫೇಲ್ ವ್ಯವಹಾರದಲ್ಲಿ ಈ ನಿರ್ದಿಷ್ಟ ಮಧ್ಯವರ್ತಿಯ ಭಾಗವಹಿಸುವಿಕೆ ಬಗ್ಗೆ ಭಾರತದಲ್ಲಿ ಕೇಳಿ ಬಂದಿದ್ದು ಅದೇ ಕೊನೆಯ ಬಾರಿಗೆ. ಅದರ ನಂತರ ಆತನ ಬಗ್ಗೆ ಯಾವುದೇ ಸುದ್ದಿಯಿಲ್ಲ.

ಮಾರ್ಗಚ್ಯುತಿಯ ಅಂಶಗಳು

ಇದೆಲ್ಲ ಈಗಾಗಲೇ 'ದಿ ಹಿಂದು' ಪತ್ರಿಕೆಯಲ್ಲಿ 2019ರ ಜನವರಿ-ಏಪ್ರಿಲ್ ಮಧ್ಯೆ ಪ್ರಕಟವಾದ ಆರು ಭಾಗಗಳ ವರದಿಗಳನ್ನು ಹೋಲುತ್ತದೆ. ರಕ್ಷಣಾ ಖರೀದಿ ಪ್ರಕ್ರಿಯೆ (ಡಿಫೆನ್ಸ್ ಪ್ರೊಕ್ಯೂರ್‌ಮೆಂಟ್ ಪ್ರೊಸೀಜರ್ -ಡಿಪಿಪಿ 2013) ಯಲ್ಲಿ ಅಡಕವಾಗಿರುವ ಅಂಶಗಳಿಂದ ಮಾರ್ಗಚ್ಯುತಿ ಆಗಿದೆ ಎನ್ನುವುದು 'ದಿ ಹಿಂದು' ತನಿಖೆಯಲ್ಲಿ ಎದ್ದು ಕಂಡಿತ್ತು. ಅದೇ ಶಂಕಿತ ಭ್ರಷ್ಟಾಚಾರ, ಪ್ರಭಾವ-ಬಳಕೆ, ಕಪ್ಪು ಹಣದ ಸ್ವಚ್ಛೀಕರಣ ಮತ್ತಿತರ ಅಪರಾಧಗಳ ಬಗ್ಗೆ ಫ್ರೆಂಚ್ ತನಿಖೆಯನ್ನು ಸಾಧ್ಯಗೊಳಿಸಿದೆ.

ಈ ಮಾರ್ಗಚ್ಯುತಿಗಳಲ್ಲಿ ಸಾರ್ವಜನಿಕ ವಲಯದ ಒಳಗೊಳ್ಳುವಿಕೆಯೊಂದಿಗೆ ಇದ್ದ ಒಂದು ಪ್ರಮುಖ 'ಮೇಕ್ ಇನ್ ಇಂಡಿಯಾ' ಅಂಶವನ್ನು ರದ್ದುಪಡಿಸುವ ಹಠಾತ್ ನಿರ್ಧಾರ; ಭಾರತೀಯ ಮಾತುಕತೆ ತಂಡದ, ಮೂವರು ತಜ್ಞರು, ಇವರೆಲ್ಲರೂ ಆಯಾಯ ಕ್ಷೇತ್ರದ ಪರಿಣತರು, ಭಿನ್ನಮತವನ್ನು ದಾಖಲಿಸಿದರೂ, ಅದರ ಹೊರತಾಗಿಯೂ ಪ್ರತಿ ರಫೇಲ್ ಜೆಟ್ ವಿಮಾನಕ್ಕೆ ಅತಿರಂಜಿತ ಬೆಲೆ ನಿಗದಿಪಡಿಸಿದ್ದು; ರಕ್ಷಣಾ ಸಚಿವಾಲಯ ಪ್ರತಿಭಟನೆ ದಾಖಲಿಸಿದರೂ ಪ್ರಧಾನ ಮಂತ್ರಿ ಕಾರ್ಯಾಲಯದ (ಪಿಎಂಒ) ಅಧಿಕಾರಿಗಳು ಸಮಾನಾಂತರ ಮಾತುಕತೆ ನಡೆಸಿದ್ದು; ಅಂತರ್-ಸರ್ಕಾರಿ ಒಪ್ಪಂದದಲ್ಲಿ ಮತ್ತು ಪೂರೈಕೆ ನಿಯಮಾವಳಿಗಳಲ್ಲಿ ಇರಬೇಕಾದ ಭ್ರಷ್ಟಾಚಾರ-ವಿರೋಧಿ, ವಿಶ್ವಾಸಾರ್ಹತೆ ಮತ್ತು ಪಾರದರ್ಶಕತೆ ಕುರಿತಾದ ಸ್ಥಾಪಿತ ಉಪಬಂಧಗಳನ್ನು ತೆಗೆದು ಹಾಕಿದ್ದು; ಹಣಕಾಸು ವಿವೇಕವು ಬಯಸುವ ಮತ್ತು ಸರಕಾರದ ಹಣಕಾಸು ತಜ್ಞರು ಇರಬೇಕೆಂದು ಬಯಸಿದ ಸಾರ್ವಭೌಮ ಅಥವ ಸರಕಾರದ ಖಾತ್ರಿಗಳು ಅಥವ ಕನಿಷ್ಠ ಬ್ಯಾಂಕ್ ಖಾತ್ರಿಗಳಿಂದಲೂ ವಿನಾಯ್ತಿ ನೀಡಿದ್ದು; ಫ್ರೆಂಚ್ ಪೂರೈಕೆದಾರರಿಗೆ ಅನುಕೂಲವಾಗುವಂತೆ ಬಾಧ್ಯತೆಗಳು, ನಿರ್ವಹಣೆಗಳು, ವೇಳಾನುಕ್ರಮಣಿಕೆ ಮತ್ತು ಪಾರದರ್ಶಕತೆಗೆ ಸಂಬಂಧಪಟ್ಟ ಆಫ್ಸೆಟ್ ಉಪಬಂಧಗಳಲ್ಲಿ ಪ್ರಮುಖ ಬದಲಾವಣೆಗಳನ್ನು ಮಾಡಿರುವುದು-ಇವೆಲ್ಲವೂ ಸೇರಿವೆ.

ರಫೇಲ್ ವ್ಯವಹಾರದ ಬಗ್ಗೆ ಯಾವುದೇ ರೀತಿಯ ತನಿಖೆ ಆಗುವುದನ್ನು ತಡೆಯಲು ಮೋದಿ ಸರ್ಕಾರ ಸಂಕಲ್ಪಿಸಿದೆ. ಇದಕ್ಕೆ ಎಲ್ಲ ರೀತಿಯ ಪ್ರಯತ್ನಗಳನ್ನು ಅದು ನಡೆಸಿದೆ. ರಫೇಲ್ ವ್ಯವಹಾರದ ತನಿಖೆ ಕೋರಿ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಲಾದ ಅರ್ಜಿಯೊಂದನ್ನು ಮೋದಿ ಸರ್ಕಾರ ವಿರೋಧಿಸಿತು, ಕೋರ್ಟ್ ಕೂಡ ಅದಕ್ಕೆ ಸಾಥ್ ನೀಡಿತು. ರಕ್ಷಣಾ ಸಚಿವಾಲಯದ ಒತ್ತಾಯದ ಮೇರೆಗೆ ಸಿಎಜಿ ವರದಿ ಕೂಡ 2016ರ ಒಪ್ಪಂದದಲ್ಲಿದ್ದ ವಿಮಾನಗಳ ಬೆಲೆಯನ್ನು ಪರಿಷ್ಕರಿಸಿತು. ಈ ವ್ಯವಹಾರದ ಬಗ್ಗೆ ಜಂಟಿ ಸಂಸದೀಯ ಸಮಿತಿಯಿಂದ ತನಿಖೆ ನಡೆಯಬೇಕೆಂಬ ಪ್ರಬಲ ಒತ್ತಾಯವನ್ನೂ ಮೋದಿ ಸರ್ಕಾರ ಮೊಂಡುತನದಿಂದ ತಿರಸ್ಕರಿಸಿತು. ಈ ಹಗರಣವನ್ನು ಮುಚ್ಚಿ ಹಾಕಲು ಮೋದಿ ಸರ್ಕಾರದ ಈ ಎಲ್ಲ ಶತಪ್ರಯತ್ನಗಳ ಹೊರತಾಗಿಯೂ ಫ್ರೆಂಚ್ ತನಿಖೆಯು ಈ ಎಲ್ಲ ವಿಷಯಗಳಿಗೆ ಮರುಜೀವ ನೀಡಿದೆಯೆನ್ನುವುದು ವಿಪರ್ಯಾಸವೇ ಸರಿ.

ತನಿಖೆ ನಡೆಸುವ ಫ್ರೆಂಚ್ ನಿರ್ಧಾರದ ಪ್ರಕಟಣೆಯ ನಂತರ ಭಾರತ ಸರ್ಕಾರದಿಂದ ಯಾವುದೇ ಅಧಿಕೃತ ಪ್ರತಿಕ್ರಿಯೆ ಹೊರಬಿದ್ದಿಲ್ಲ. ಈ ಮೌನವೇ ಎಲ್ಲವನ್ನೂ ಹೇಳುತ್ತದೆ. ಎರಡು ಪ್ರಭುತ್ವಗಳ ನಡುವಿನ ಒಪ್ಪಂದದ ಒಂದು ಪಕ್ಷಕ್ಕೇ ತನಿಖೆ ನಡೆಸಲು ಮೇಲ್ನೋಟಕ್ಕೇ ಆಧಾರಗಳಿವೆ ಎಂದು ಕಂಡಿರುವಾಗ ಒಂದು ಸ್ವತಂತ್ರ, ಉನ್ನತ ಮಟ್ಟದ ತನಿಖೆಯನ್ನು ಮುಂದಕ್ಕೆ ಹಾಕುವುದು ಮೋದಿ ಸರ್ಕಾರಕ್ಕೆ ಎಂದಿನ ವರೆಗೆ ಸಾಧ್ಯ?

ಅನು: ವಿಶ್ವ



ವ್ಯಂಗ್ಯಚಿತ್ರ: ಪಿ.ಮಹಮ್ಮದ್, ವಾರ್ತಾಭಾರತಿ



ಚಿತ್ರಕೃಪೆ: ಸ್ಕ್ರೋಲ್

ಭಿನ್ನಮತ ಮತ್ತು ವಿರೋಧಿ ದನಿಗಳನ್ನು ಅಡಗಿಸಲು ಯುಎಪಿಎ ಬಳಕೆ ಭೀಮ ಕೊರೆಗಾಂವ್ ಕೇಸಿನ ಹದಿನಾರು ಆರೋಪಿಗಳ ಸಂದರ್ಭದಲ್ಲಿ ಕಣ್ಣಿಗೆ ರಾಚುವಂತಿದೆ. ಪ್ರಖ್ಯಾತ ಚಿಂತಕರು, ಸಾಮಾಜಿಕ ಕಾರ್ಯಕರ್ತರನ್ನು ಜೈಲಿಗೆ ಹಾಕುವುದು ಈ ಭಯೋತ್ಪಾದನಾ–ವಿರೋಧಿ ಕಾಯ್ದೆಯ ಅತ್ಯಂತ ನಗ್ನ ದುರುಪಯೋಗ. ಅಷ್ಟೇ ಅಲ್ಲ, ಅದಕ್ಕೆ ಸುಳ್ಳು ಸಾಕ್ಷ್ಯಗಳನ್ನು ಸೃಷ್ಟಿಸಲಾಗಿದೆ, ಇವರುಗಳ ಬಂಧನದ ಮೊದಲೇ ಎರಡು ವರ್ಷಗಳಿಗೂ ಹೆಚ್ಚು ಕಾಲ ಇಂತಹ ಸುಳ್ಳು ಸಾಕ್ಷ್ಯ ಸೃಷ್ಟಿಸುವ ಕೆಲಸ ನಡೆದಿದೆ ಎಂಬುದೂ ಹೆಚ್ಚೆಚ್ಚು ಬೆಳಕಿಗೆ ಬರುತ್ತಿದೆ. ಇಂತಹ ಒಂದು ತಾಂತ್ರಿಕ ಪರಿಣತಿಯ ಮತ್ತು ದೀರ್ಘಾವಧಿ ಕೆಲಸ ಪ್ರಭುತ್ವದ ಮಾಧ್ಯಮದಿಂದಲ್ಲದೆ ಬೇರೆ ಯಾರಿಂದ ಸಾಧ್ಯ? ಇದು ಪ್ರಭುತ್ವ ಅಧಿಕಾರದ ಒಂದು ಅತ್ಯಂತ ಹೀನ ದುರುಪಯೋಗ. ನ್ಯಾಯವ್ಯವಸ್ಥೆ ವಿಕೃತಗೊಳ್ಳದಂತೆ ತಡೆಯಬೇಕಾದರೆ, ಉನ್ನತ ನ್ಯಾಯಾಂಗ ಇದನ್ನು ಪರಿಣತರ ಪರೀಕ್ಷಣೆಗೆ ಒಳಪಡಿಸಲೇಬೇಕಾಗಿದೆ.

ಫಾದರ್ ಸ್ಟಾನ್ ಸ್ವಾಮಿಗೆ ಕಿರುಕುಳ

ನ್ಯಾಯವ್ಯವಸ್ಥೆಯನ್ನು ವಿಕೃತಗೊಳಿಸುವ ಪ್ರಯತ್ನ

ಪ್ರಕಾಶ ಕಾರಟ್

84 ವರ್ಷದ ಫಾದರ್ ಸ್ಟಾನ್ ಸ್ವಾಮಿಗೆ ಕಿರುಕುಳ, ಅಂತಿಮವಾಗಿ ಅವರ ಸಾವಿನಲ್ಲಿ ಪರಿಣಮಿಸಿರುವುದು ಮೋದಿ ಆಳ್ವಿಕೆಯಲ್ಲಿ ಅಪರಾಧ ಸಂಬಂಧೀ ನ್ಯಾಯವ್ಯವಸ್ಥೆ ವಿಕೃತಗೊಂಡಿರುವುದರ ಹಲವು ಅಯಾಮಗಳನ್ನು ಹೊರತಂದಿದೆ.

ಇವೆಂದರೆ: ಕರಾಳ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ(ಯುಎಪಿಎ)ಯನ್ನು ರಾಜಕೀಯ ಮತ್ತು ಸಾಮಾಜಿಕ ಕಾರ್ಯಕರ್ತರ ವಿರುದ್ಧ ಬಳಸುತ್ತಿರುವುದು; ಆಳುವ ಪಕ್ಷದ ಅಜೆಂಡಾವನ್ನು ಈಡೇರಿಸಲು ಎನ್ಐಎ ಮತ್ತು ಇತರ ಕೇಂದ್ರೀಯ ಏಜೆನ್ಸಿಗಳನ್ನು ಬಳಸುವುದು; ನ್ಯಾಯಾಂಗದ ಕೆಲವು ವಿಭಾಗಗಳು "ಕಾರ್ಯಾಂಗೀಯ ನ್ಯಾಯಾಂಗ"ವಾಗಿ ವರ್ತಿಸುತ್ತಿರುವುದು, ಮತ್ತು ನಾಗರಿಕರ ಮೂಲಭೂತ ಹಕ್ಕುಗಳನ್ನು ನಿರಾಕರಿಸುವಲ್ಲಿ ಶಾಮೀಲಾಗಿರುವುದು; ಹಾಗೂ ಕೈದಿಗಳ ಮೂಲ ಮಾನವ ಹಕ್ಕುಗಳನ್ನು ಉಲ್ಲಂಘಿಸುವ ಒಂದು ಅಮಾನವೀಯ ಜೈಲು ವ್ಯವಸ್ಥೆ.

ಭೀಮ ಕೊರೆಗಾಂವ್ ಪಿತೂರಿ ಎನ್ನಲಾದ ಕೇಸಿನಲ್ಲಿ ಆರೋಪಿಗಳನ್ನಾಗಿಸಿದ ಸ್ಟಾನ್ ಸ್ವಾಮಿ ಮತ್ತು ಇತರ 15 ಮಂದಿಯ ಜೈಲುವಾಸದಲ್ಲಿ ಈ ಎಲ್ಲ ಅಂಶಗಳು ಕೆಲಸ ಮಾಡುತ್ತಿವೆ.


ಎನ್ಐಎ ವಿಶೇಷ ನ್ಯಾಯಾಲಯ ಸ್ಟಾನ್ ಸ್ವಾಮಿಯವರ ಜಾಮೀನು–ಮಧ್ಯಂತರ ಮತ್ತು ನಿಯಮಿತ ಜಾಮೀನು– ಅರ್ಜಿಯನ್ನು ಎರಡು ಬಾರಿ ತಿರಸ್ಕರಿಸಿದೆ. "... ಸಮುದಾಯದ ಸಾಮೂಹಿಕ ಹಿತ ಅರ್ಜಿದಾರನ ವೈಯಕ್ತಿಕ ಸ್ವಾತಂತ್ರ್ಯದ ಹಕ್ಕಿಗಿಂತ ಮಿಗಿಲಾದದ್ದು, ಇದರಿಂದಾಗಿ ಮುದಿವಯಸ್ಸು ಅಥವ ಕಾಯಿಲೆಗಳಿವೆ ಎನ್ನುವುದೆಲ್ಲ ಅವರ ಪರವಾಗಿ ನಿಲ್ಲುವುದಿಲ್ಲ" ಎಂದು ಅವರ ಜಾಮೀನು ಅರ್ಜಿಯನ್ನು ತಿರಸ್ಕರಿಸುತ್ತ ಸಂಬಂಧಪಟ್ಟ ನ್ಯಾಯಾಧೀಶರು ಹೇಳಿದ್ದಾರೆ. ಹೀಗೆ ಹೇಳಿರುವುದು, ಪಾರ್ಕಿನ್ಸನ್ ಕಾಯಿಲೆಯಿಂದ ಪೀಡಿತರಾದ, ನಡೆದಾಡುವುದು ಮತ್ತು ತಾನೇ ಆಹಾರ ಸೇವಿಸುವುದೂ ಕಷ್ಟದಾಯಕವಾಗಿದ್ದ ಒಬ್ಬ 84 ವರ್ಷದ ಮುದಿವಯಸ್ಸಿನ ವ್ಯಕ್ತಿಯ ಬಗ್ಗೆ. ಇದಕ್ಕೆ ಮೊದಲು ಇದೇ ಕೋರ್ಟ್ ದ್ರವ ಕುಡಿಯುವುದಕ್ಕೆ ಬಳಸಲು ಒಂದು "ಸಿಪ್ಪರ್"(ಹೀರುನಳಿಕೆ) ಕೊಡಿಸಲು ಆದೇಶ ನೀಡಲು ಕೂಡ ನಿರಾಕರಿಸಿತ್ತು.

ಭಿನ್ನಮತ ಮತ್ತು ವಿರೋಧಿ ದನಿಗಳನ್ನು ಅಡಗಿಸಲು ಯುಎಪಿಎ ಬಳಕೆ ಭೀಮ ಕೊರೆಗಾಂವ್ ಕೇಸಿನ ಹದಿನಾರು ಆರೋಪಿಗಳ ಸಂದರ್ಭದಲ್ಲಿ ಕಣ್ಣಿಗೆ ರಾಚುವಂತಿದೆ. ಆನಂದ್ ತೇಲ್ತುಂಬ್ಡೆಯವರಂತಹ ಮತ್ತು ಸುಧಾ ಭಾರದ್ವಾಜ್‌ರಂತಹ ಪ್ರಖ್ಯಾತ ಚಿಂತಕರು, ಸಾಮಾಜಿಕ ಕಾರ್ಯಕರ್ತರನ್ನು ಜೈಲಿಗೆ ಹಾಕುವುದು ಈ ಭಯೋತ್ಪಾದನಾ–ವಿರೋಧಿ ಕಾಯ್ದೆಯ ಅತ್ಯಂತ ನಗ್ನ ದುರುಪಯೋಗ. ಯುಎಪಿಎ ಅಡಿಯಲ್ಲಿ ಜಾಮೀನು ಕುರಿತಂತೆ ಅತ್ಯಂತ ಕಠಿಣ ಉಪಬಂಧ ಇರುವುದರಿಂದ ಜಾಮೀನು ಸಿಗುವುದು ಅಸಾಧ್ಯವೇ ಸರಿ. ಏಕೆಂದರೆ ಆರೋಪಿಯ ಮೇಲೆ ಪ್ರಕರಣ ಇಲ್ಲ ಎಂದು ಮೇಲ್ನೋಟದಲ್ಲೇ ನ್ಯಾಯಾಧೀಶರಿಗೆ ಮನವರಿಕೆಯಾಗಬೇಕು.

ಕಳೆದ ತಿಂಗಳು ದಿಲ್ಲಿ ಹೈಕೋರ್ಟ್, ಈಶಾನ್ಯ ದಿಲ್ಲಿಯ ಗಲಭೆಗಳ ಕೇಸಿನಲ್ಲಿ ಯುಎಪಿಎ ಅಡಿಯಲ್ಲಿ ಜೈಲಿನಲ್ಲಿದ್ದ ಮೂವರು ವಿದ್ಯಾರ್ಥಿ ಕಾರ್ಯಕರ್ತರಿಗೆ ಜಾಮೀನು ಕೊಡುವ ಒಂದು ಭಿನ್ನ ದಾರಿ ತುಳಿದ ತೀರ್ಪನ್ನು ಕೊಟ್ಟಿದೆ. ಇದು ನ್ಯಾಯಾಂಗ ಅನುಸರಿಸಬೇಕಾದ ದಾರಿಗೆ ಒಂದು ಉದಾಹರಣೆಯಾಗಬೇಕಿತ್ತು. ಆದರೆ ಅದರ 'ಕಾರ್ಯಾಂಗೀಯ' ಸ್ವರೂಪದ್ದೇ ಕೈಮೇಲಾಗಿದೆ, ಏಕೆಂದರೆ, ಸುಪ್ರಿಂ ಕೋರ್ಟ್ ಇದು ಮೇಲ್ಪಂಕ್ತಿಯಾಗಬಾರದು ಎಂದು ಈ ತೀರ್ಪಿನ ಬಗ್ಗೆ ಕಣ್ಣು ಕೆಂಪಗೆ ಮಾಡಿದೆ. ಈ ಕರಾಳ ಕಾಯ್ದೆಯ ದುರುಪಯೋಗವನ್ನು ಬಯಲಿಗೆಳೆದಿರುವ ಈ ತೀರ್ಪಿನ ಮರುಪರೀಕ್ಷಣೆ ನಡೆಸುವುದಾಗಿ ಹೇಳಿದೆ.

ಆದರೆ, ಈ ಇಡೀ ಪ್ರಕರಣದ ಅತ್ಯಂತ ಕೆಟ್ಟ ಅಂಶವೆಂದರೆ, ಸ್ಟಾನ್ ಸ್ವಾಮಿ ಮತ್ತು ಭೀಮ ಕೊರೆಗಾಂವ್ ಕೇಸಿನ ಇತರ ಆರೋಪಿಗಳು ಮಾವೋವಾದಿ ಚಟುವಟಿಕೆಗಳಲ್ಲಿ ತೊಡಗಿದ್ದರು ಎಂದು ತೋರಿಸಲು ಹೇಗೆ ಸುಳ್ಳು ಸಾಕ್ಷ್ಯಗಳನ್ನು ಸೃಷ್ಟಿಸಲಾಗಿದೆ ಎಂಬುದರ ಬಗ್ಗೆ ಬಯಲಿಗೆ ಬಂದಿರುವ ಆಘಾತಕಾರೀ ಸಂಗತಿಗಳು.

ಸ್ಟಾನ್ ಸ್ವಾಮಿಯವರ ಸಾವಿನ ಮರುದಿನ, ಅಮೆರಿಕಾದ ಡಿಜಿಟಲ್ ಅಪರಾಧ ಪತ್ತೆ (ಫೊರೆನ್ಸಿಕ್) ಕಂಪನಿ, 'ಆರ್ಸೆನಲ್ ಕನ್ಸಲ್ಟಿಂಗ್'ನ ಮೂರನೇ ವರದಿ ಪ್ರಕಟಗೊಂಡಿದೆ. ಈ ಕೇಸಿನ ಇಬ್ಬರು ಆರೋಪಿಗಳಾದ ರೋನಾ ವಿಲ್ಸನ್ ಮತ್ತು ಸುರೇಂದ್ರ ಗಾಡ್ಲಿಂಗ್‌ರವರ ವಕೀಲರುಗಳು ಅಮೆರಿಕನ್ ಬಾರ್ ಅಸೋಸಿಯೇಷನ್ ನೆರವಿನಿಂದ, ತಮ್ಮ ಕಕ್ಷಿದಾರರ ಕಂಪ್ಯೂಟರುಗಳ ಹಾರ್ಡ್ ಡ್ರೈವ್‌ಗಳನ್ನು ಪರೀಕ್ಷೆಗೆ ಕೊಟ್ಟರು. ಈ ಕುರಿತ ಮೊದಲ ಎರಡು ವರದಿಗಳಲ್ಲಿ ರೋನಾ ವಿಲ್ಸನ್‌ರವರ ಕಂಪ್ಯೂಟರಿನಲ್ಲಿ ಕಳ್ಳ ತಂತ್ರಾಂಶವನ್ನು ನೆಲೆಗೊಳಿಸಲಾಗಿತ್ತು ಎಂಬುದನ್ನು ಪತ್ತೆ ಹಚ್ಚಿದ್ದವು. ಈ ತಂತ್ರಾಂಶವನ್ನು ಕಳ್ಳರೀತಿಯಲ್ಲಿ ತುರುಕಿಸುವ ಕೆಲಸ ಅವರ ಬಂಧನದ ಎರಡು ವರ್ಷಗಳ ಮೊದಲು, ಅಂದರೆ 2016ರಿಂದಲೇ ಆರಂಭವಾಗಿತ್ತು. ಅವರಿಗೆ ಅರಿವಿಲ್ಲದೇ ಅವರ ಕಂಪ್ಯೂಟರಿನಲ್ಲಿ ಮಾವೋವಾದಿ ಕಾರ್ಯಕರ್ತರ ನಡುವಿನ ಮಾಹಿತಿ ಸಂವಹನ ಎಂಬುದನ್ನು ತುರುಕಿಸಲಾಗುತ್ತಿತ್ತು.



ಥ್ಯಾಂಕ್ಯೂ ಮೋದೀಜೀ! ವ್ಯಂಗ್ಯಚಿತ್ರ: ಮಂಜುಲ್, ಫಸ್ಟ್‌ಪೋಸ್ಟ್

ಇಂತಹುದೇ ಕಳ್ಳ ಪ್ರಕ್ರಿಯೆ ಇನ್ನೊಬ್ಬ ಆರೋಪಿಯಾದ ಸುರೇಂದ್ರ ಗಾಡ್ಲಿಂಗ್ ರವರ ಕಂಪ್ಯೂಟರಿನೊಡನೆಯೂ ನಡೆದಿದೆ ಎಂದು ಈಗ ಪ್ರಕಟವಾಗಿರುವ ಮೂರನೇ ವರದಿ ತೋರಿಸುತ್ತದೆ. ಗಮನಾರ್ಹ ಸಂಗತಿಯೆಂದರೆ, ಈ ವರದಿ, ಹೇಗೆ ಈ ತಥಾಕಥಿತ "ಮಾವೋವಾದಿ" ಸಂವಹನದ ಪ್ರತಿಗಳನ್ನು ಸ್ಟಾನ್ ಸ್ವಾಮಿ ಮತ್ತು ಸುಧಾ ಭಾರಧ್ವಾಜ್‌ರವರ ಕಂಪ್ಯೂಟರ್‌ಗಳಿಗೂ ಸೇರಿಸಲಾಗಿತ್ತು ಎಂಬುದನ್ನು ಬೆಳಕಿಗೆ ತಂದಿದೆ.

ಇದರಲ್ಲಿ ಸ್ಟಾನ್ ಸ್ವಾಮಿಯವರು ತಮ್ಮ ಬಂಧನದ ಮೊದಲು ನೀಡಿದ ವೀಡಿಯೋ ಸಂದರ್ಶನದಲ್ಲಿ ಹೇಳೀರುವುದಕ್ಕೆ ವಿವರಣೆ ಸಿಗುತ್ತದೆ. ಎನ್ಐಎ ತನಿಖಾಗಾರರು ಸ್ಟಾನ್ ಸ್ವಾಮಿಯವರ ಕಂಪ್ಯೂಟರಿನಲ್ಲಿ ಮಾವೋವಾದಿಗಳ ನಡುವಿನ ಇ–ಮೇಲ್‌ಗಳಲ್ಲಿ ಅವರ ಹೆಸರು ಪ್ರಸ್ತಾಪವಾಗಿರುವ ಬಗ್ಗೆ ಕೇಳಿದಾಗ ಸ್ಟಾನ್ ಸ್ವಾಮಿ ತನ್ನ ಕಂಪ್ಯೂಟರಿನಲ್ಲಿ ಇಂತಹ ಯಾವುದೇ ಪತ್ರವ್ಯವಹಾರ ತನ್ನ ಅರಿವಿಗೆ ಬಂದಿಲ್ಲ ಎಂದು ಹೇಳಿದರು.

ಸ್ವಾಮಿಯವರನ್ನು ಯುಎಪಿಎ ಅಡಿಯಲ್ಲಿ ಬಂಧಿಸಿರುವುದು ಮಾತ್ರವಲ್ಲ, ಅದಕ್ಕೆ ಕೊಟ್ಟ ಸಾಕ್ಷ್ಯ ಕೂಡ ಫೊರೆನ್ಸಿಕ್ ವಿಶ್ಲೇಷಣೆಯ ಪ್ರಕಾರ ಸುಳ್ಳು ಸೃಷ್ಟಿಗಳು. ಎರಡು ವರ್ಷಗಳಿಗೂ ಹೆಚ್ಚು ಕಾಲ ಇಂತಹ ಒಂದು ತಾಂತ್ರಿಕ ಪರಿಣತಿಯ ಮತ್ತು ದೀರ್ಘವಾದ ಕೆಲಸ ಪ್ರಭುತ್ವದ ಮಾಧ್ಯಮದಿಂದಲ್ಲದೆ ಬೇರೆ ಯಾರಿಂದ ಸಾಧ್ಯ? ಇದು ಪ್ರಭುತ್ವ ಅಧಿಕಾರದ ಒಂದು ಅತ್ಯಂತ ಹೀನ ದುರುಪಯೋಗ. ಪುಣೆಯ ಪ್ರಾದೇಶಿಕ ಫೊರೆನ್ಸಿಕ್ ವಿಜ್ಞಾನ ಪ್ರಯೋಗಾಲಯಕ್ಕೆ ಕಂಪ್ಯೂಟರನ್ನು ಕಳ್ಳತನದಿಂದ ಬೇಧಿಸಿರುವ ಸಾಕ್ಷ್ಯವೇನೂ ಕಂಡು ಬರಲಿಲ್ಲ ಎಂಬುದು ಎನ್ಐಎ ದಾವೆ.

ಆದರೆ ಆರ್ಸೆನಲ್ ಕನ್ಸಲ್ಟಿಂಗ್ ಪ್ರಸ್ತುತ ಪಡಿಸಿರುವ ಅಪರಾಧವನ್ನು ಪತ್ತೆ ಮಾಡಿದ ವೈಜ್ಞಾನಿಕ ವಿಶ್ಲೇಷಣೆಯ ಹಿನ್ನೆಲೆಯಲ್ಲಿ, ಮುಂಬೈ ಹೈಕೋರ್ಟ್ ತಕ್ಷಣವೇ ಹಾಡ್ ಡ್ರೈವ್‌ಗಳು ಮತ್ತು ಇತರ ಸಾಧನಗಳನ್ನು ಸ್ವತಂತ್ರ ಪರಿಣತರಿಂದ ಪರೀಕ್ಷಣೆಗೆ ಒಳಪಡಿಸುವುದು ಅಗತ್ಯವಾಗಿದೆ. ನ್ಯಾಯ ವಿಕೃತಗೊಳ್ಳದಂತೆ ತಡೆಯಲು ಉನ್ನತ ನ್ಯಾಯಾಂಗವು ಕನಿಷ್ಟ ಇದನ್ನಾದರೂ ಮಾಡಬೇಕು.



ಚಿತ್ರಕೃಪೆ: free-them-all.net



ಸಾಮೂಹಿಕ ಆತ್ಮಸಾಕ್ಷಿ
ವ್ಯಂಗ್ಯಚಿತ್ರ: ಸಂದೀಪ ಅಧ್ವರ್ಯು, ಟೈಂಸ್ ಆಫ್ ಇಂಡಿಯ

ಇದೇ ಜುಲೈ 1 ರಂದು ಚೀನಾದ ಕಮ್ಯುನಿಸ್ಟ್ ಪಕ್ಷ ಸ್ಥಾಪನೆಯಾಗಿ ನೂರು ವರ್ಷಗಳು ಸಂದಿವೆ. ಚೀನಾದಾದ್ಯಂತ ಇದನ್ನು ಸಂಭ್ರಮದಿಂದ ಆಚರಿಸಲಾಗುತ್ತಿದೆ. ಅತ್ಯಂತ ಅವಮಾನಕರ ದುರ್ಭರ ಸ್ಥಿತಿಯಲ್ಲಿ ಜೀವಿಸುತ್ತಿದ್ದ ಚೀನಾದ ಜನತೆಯ ನಾಯಕನಾಗಿ ಈ ನೂರು ವರ್ಷಗಳಲ್ಲಿ, ಕಡು ಬಡತನ ನಿರ್ಮೂಲನ ಮಾಡಿ ಎಲ್ಲರಿಗೂ ಸಾಕಷ್ಟು ನೆಮ್ಮದಿಯ ಜೀವನ ಮಟ್ಟ ಒದಗಿಸಿದ, ಸಮೃದ್ಧವಾದ ಮತ್ತು ಎರಡನೆಯ ಅತಿ ದೊಡ್ಡ ಆರ್ಥಿಕತೆ ಉಳ್ಳ ದೇಶವಾಗಿಸಿದ ಈ ಸಂದರ್ಭದಲ್ಲಿ, ಈ ಪಕ್ಷದ ಇತಿಹಾಸ ಅರಿತುಕೊಳ್ಳುವುದು ಅಗತ್ಯ. ಚೀನಾ ಕಮ್ಯುನಿಸ್ಟ್ ಪಕ್ಷದ ಇತಿಹಾಸವನ್ನು ಸಾಮಾನ್ಯವಾಗಿ ನಾಲ್ಕು ಹಂತಗಳಾಗಿ ವಿಂಗಡಿಸಲಾಗುತ್ತದೆ. 1921–1934ರ ಮೊದಲ ಹಂತ ಪಕ್ಷ ಚೀನಾದ ಜನತೆಯ ನಾಯಕನಾಗಲು ಆಶಾದೀಪವಾಗಲು ನಡೆಸಿದ ಹಲವು ಪ್ರಯೋಗಗಳ ಏಳು–ಬೀಳುಗಳ ದೀರ್ಘ ಪಯಣದ ಹಂತ. ಎರಡನೆಯ ಹಂತ ಚೀನಾದ ಜನತೆಯ ಮನಗಳನ್ನು ಗೆದ್ದ ಪಕ್ಷವು, ಗಂಭೀರವಾಗಿ ಜನತಾ ಪ್ರಜಾಪ್ರಭುತ್ವ ಕ್ರಾಂತಿಯತ್ತ ಸಾಗಿದ 1935–1949ರ ಅವಧಿ. ಕ್ರಾಂತಿಯ ನಂತರ ಸಮಾಜವಾದಿ ಸಮಾಜ ಕಟ್ಟುವತ್ತ ಹಲವು ಪ್ರಯೋಗಗಳಲ್ಲಿ ಕೆಲವು ಬಾರಿ ದಾರಿ ತಪ್ಪಿ ಅದನ್ನು ಸರಿಪಡಿಸಿಕೊಂಡು ಮುನ್ನಡೆದ 1950–1978ರ ಮೂರನೆಯ ಹಂತ. ಹಿಂದಿನ ಪ್ರಮಾದಗಳನ್ನು ಸರಿಪಡಿಸಿಕೊಂಡು ಆಧುನಿಕ ಸಮೃದ್ಧ ಸಮಾಜ ಕಟ್ಟುವುದರಲ್ಲಿ ಗಮನಾರ್ಹ ಯಶಸ್ಸು ಗಳಿಸಿದ 1979–2021ರ ನಾಲ್ಕನೆಯ ಹಂತ. ಈ ನಾಲ್ಕು ಹಂತಗಳಲ್ಲಿ ಪಕ್ಷದ ಇತಿಹಾಸವನ್ನು ಸ್ಥೂಲವಾಗಿ ಈ ಲೇಖನ ಸರಣಿಯಲ್ಲಿ ಕೊಡಲಾಗುವುದು. ಮೊದಲ ಹಂತದ ಇತಿಹಾಸದ ಸ್ಥೂಲ ನಿರೂಪಣೆಯನ್ನು ಕಳೆದ ವಾರ ಕೊಡಲಾಗಿದೆ. ಎರಡನೆಯ ಹಂತದ ನಿರೂಪಣೆ ಇಲ್ಲಿದೆ.

(ಮುಂದಿನ ವಾರ: ಮೂರನೆಯ ಹಂತ–ಸಮಾಜವಾದಿ ಸಮಾಜ ಕಟ್ಟುವತ್ತ)

ಚೀನಾ ಕಮ್ಯುನಿಸ್ಟ್ ಪಕ್ಷದ ಇತಿಹಾಸ ಹಂತ–2

ಜನತಾ ಪ್ರಜಾಪ್ರಭುತ್ವ ಕ್ರಾಂತಿಯತ್ತ

ಮೂಲ : ಆರ್. ಅರುಣ ಕುಮಾರ್
ಅನುವಾದ : ಗೀತಾ ಎಸ್.ಕೆ.

1932ರಲ್ಲಿ ಜಪಾನ್ ಚೀನಾವನ್ನು ಆಕ್ರಮಿಸಿತು. ಈ ಆಕ್ರಮಣವನ್ನು ವಿರೋಧಿಸಿ (ಕೊಮಿಂಟಾಂಗ್ ಜತೆಗೆ ನಡೆಯುತ್ತಿದ್ದ) ಆಂತರಿಕ ಯುದ್ಧವನ್ನು ಕೊನೆಗೊಳಿಸುವಂತೆ ಚೀನಾ ಕಮ್ಯುನಿಸ್ಟ್ ಪಕ್ಷವು ನೀಡಿದ ಕರೆಯನ್ನು ಎಲ್ಲ ಜನವಿಭಾಗಗಳು ಸರಿಯಾಗಿ ಸ್ವೀಕರಿಸಿದವು. ಕಮ್ಯುನಿಸ್ಟ್ ಪಕ್ಷದ ಕರೆಯನ್ನು ಪರಿಗಣಿಸದೆ, ಜಪಾನಿನ ಅತಿಕ್ರಮಣವನ್ನು ನಂತರದಲ್ಲಿ ಎದುರಿಸಬಹುದು ಎನ್ನುತ್ತ ಕೊಮಿಂಟಾಂಗ್, ಕಮ್ಯುನಿಸ್ಟ್ ಪಕ್ಷದ ಮೇಲೆ ತನ್ನ ದಾಳಿಯನ್ನು ಮುಂದುವರೆಸಿತು. ಇದನ್ನು ಬಳಸಿಕೊಂಡು ಎಲ್ಲ ಕಮ್ಯುನಿಸ್ಟ್ ವಿರೋಧಿ ಶಕ್ತಿಗಳನ್ನು ಒಗ್ಗೂಡಿಸಿ "ಕಮ್ಯುನಿಸ್ಟರ ವಿರುದ್ಧ ಜಪಾನ್ ಮತ್ತು ಚೀನಾದ ಜಂಟಿ ರಕ್ಷಣಾ ಹೋರಾಟ" ನಡೆಸಲು ಜಪಾನ್ ಪ್ರಯತ್ನಿಸಿತು.

ಎಡ ಪಂಥವಾದದ ಪ್ರಭಾವದಲ್ಲಿದ್ದ ಚೀನಾ ಕಮ್ಯುನಿಸ್ಟ್ ಪಕ್ಷವು, ಜಪಾನ್‌ನ ಆಕ್ರಮಣ ಮತ್ತು ಚಿಯಾಂಗ್ ಕೈ ಶೇಖ್ ಎರಡರ ವಿರುದ್ಧವೂ ಐಕ್ಯತೆಯಿಂದ ಹೋರಾಡುವಂತೆ ಜನತೆಗೆ ಕರೆ ನೀಡಿತು. ಚೀನಾ ಕಮ್ಯುನಿಸ್ಟ್ ಪಕ್ಷವು ತ್ವರಿತವಾಗಿ ತನ್ನ ಕಾರ್ಯತಂತ್ರವನ್ನು ತಿದ್ದಿಕೊಂಡು, ಮೂಲಭೂತವಾಗಿ ಜಪಾನಿನ ವಿರುದ್ಧ ಪ್ರತಿರೋಧದ ಶಕ್ತಿಯು ದುಡಿಯುವ ಜನ, ರೈತರು, ಸಣ್ಣ ಬೂರ್ಜ್ವಾ ಮತ್ತು ಬುದ್ಧಿಜೀವಿಗಳಿಂದ ಬರುತ್ತದೆ. ಆದರೆ ರಾಷ್ಟ್ರೀಯ ಬೂರ್ಜ್ವಾಗಳನ್ನೂ ಒಳಗೊಳ್ಳುವ 'ಜಪಾನ್ ವಿರೋಧಿ ರಾಷ್ಟ್ರೀಯ ಐಕ್ಯ ವೇದಿಕೆ' ಸಾಧ್ಯವಿದೆ ಎಂದಿತು. ಅದು ತನ್ನ ಚಿಯಾಂಗ್–ಕೈ–ಶೆಕ್ ವಿರೋಧಿ ನಿಲುವನ್ನು ಕೈ ಬಿಟ್ಟು ಶಾಂತಿ ಸಂಧಾನಕ್ಕೆ ಕೊಮಿಂಟಾಂಗ್ ನ್ನು ಆಹ್ವಾನಿಸಿತು. ವಾಕ್ ಸ್ವಾತಂತ್ರ್ಯ, ಸಭೆ ಮತ್ತು ಸಂಘಟನೆಯ ಸ್ವಾತಂತ್ರ್ಯ, ಎಲ್ಲ ರಾಜಕೀಯ ಖೈದಿಗಳ ಬಿಡುಗಡೆ, ಜನತೆಯ ಜೀವನ ಮಟ್ಟದ ಸುಧಾರಣೆ, ಎಲ್ಲ ಜನ ವಿಭಾಗಗಳನ್ನು ಒಳಗೊಂಡಂತೆ ರಾಷ್ಟ್ರೀಯ ಸಮಾವೇಶ ನಡೆಸುವುದು, ಜಪಾನ್ ವಿರೋಧಿ ಹೋರಾಟಗಳನ್ನು ಬಲಪಡಿಸುವುದು – ಮುಂತಾದ ಕ್ರಮಗಳನ್ನು ಕೈಗೊಂಡರೆ ತಾನು ಕೊಮಿಂಟಾಂಗ್ ಜೊತೆಗೂಡಿ ಕೆಲಸಮಾಡುವುದಾಗಿ ಚೀನಾ ಕಮ್ಯುನಿಸ್ಟ್ ಪಕ್ಷವು ವಾಗ್ದಾನ ನೀಡಿತು. ಇದನ್ನು ಪರಿಗಣಿಸದ ಕೊಮಿಂಟಾಂಗ್ ಕಮ್ಯುನಿಸ್ಟ್ ಪಕ್ಷದ ವಿರುದ್ಧ ತನ್ನ ಆಕ್ರಮಣವನ್ನು ಮುಂದುವರೆಸಿತು.



ಜಪಾನಿ–ವಿರೋಧಿ ಗೆರಿಲ್ಲಾ ಯುದ್ಧ – ಶಿಲ್ಪ

ಆಂತರಿಕ ಯುದ್ಧವನ್ನು ನಿಲ್ಲಿಸುವಲ್ಲಿನ ವೈಫಲ್ಯ ಮತ್ತು ಜಪಾನ್‌ನ ವಿರುದ್ಧದ ಹೋರಾಟಕ್ಕೆ ಕೈಜೋಡಿಸದೇ ಇದ್ದದ್ದನ್ನು ವಿರೋಧಿಸಿ, ಕೊಮಿಂಟಾಂಗ್ ನ ಈಶಾನ್ಯ ಸೈನ್ಯವು ಕ್ಸಿಯಾನ್‌ನಲ್ಲಿ ಚಿಯಾಂಗ್–ಕೈ–ಶೆಖ್‌ನನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ಚಿಯಾಂಗ್–ಕೈ–ಶೇಖ್ ಕಮ್ಯುನಿಸ್ಟ್ ಪಕ್ಷದೊಡನೆ ಕೈ ಜೋಡಿಸಿ ಜಪಾನ್‌ನ ವಿರುದ್ಧ ಹೋರಾಡಲು ಒಪ್ಪಿಕೊಂಡರೂ, ಆತನ ಪ್ರವೃತ್ತಿಯಲ್ಲಿ ಯಾವುದೇ ಬದಲಾವಣೆ ಉಂಟಾಗಲಿಲ್ಲ. ಜಪಾನಿ ಆಕ್ರಮಣದ ವಿರುದ್ಧ ಕಮ್ಯುನಿಸ್ಟ್ ಪಕ್ಷದ 'ಸಂಪೂರ್ಣ ಪ್ರತಿರೋಧ'ದ ಧೋರಣೆಗೆ ಪ್ರತಿಯಾಗಿ, ಸಮಸ್ಯೆಗೆ ರಾಜತಾಂತ್ರಿಕ ಮಾರ್ಗಗಳ ಮೂಲಕ ಶಾಂತಿಯುತವಾಗಿ ಪರಿಹಾರ ಪಡೆಯುವ ಆಶಯವನ್ನು ಕೊಮಿಂಟಾಂಗ್ ಹೊಂದಿತ್ತು.



ನಾಂಜಿಂಗ್ ಹತ್ಯಾಕಾಂಡ – ರುಂಡಗಳೊಂದಿಗೆ ಜಪಾನೀ ಆಕ್ರಮಣಕಾರ

ಜಪಾನಿ ಆಕ್ರಮಣದ ವಿರುದ್ಧ ಗೆರಿಲ್ಲ ಯುದ್ಧ

ಕಮ್ಯುನಿಸ್ಟ್ ಪಕ್ಷವು ದುಡಿಯುವ ಜನತೆಯ ನೇತೃತ್ವದಲ್ಲಿ ರಾಷ್ಟ್ರೀಯ ಐಕ್ಯರಂಗ ರಚನೆಗೆ ಶ್ರಮಿಸುತ್ತಲೇ, ವೈರಿಯ ನಿಯಂತ್ರಣದ ಪ್ರದೇಶಗಳ ಎಲ್ಲೆಡೆಗಳಲ್ಲಿ ಗೆರಿಲ್ಲ ತಂತ್ರಗಳ ವ್ಯಾಪಕ ಸಮರ ನಡೆಸಿ, ಜಪಾನೀ–ವಿರೋಧಿ ನೆಲೆಗಳನ್ನು ನಿರ್ಮಿಸಲು ನಿರ್ಧರಿಸಿತು. ಜಪಾನ್ ವಿರೋಧಿ ಚಳುವಳಿಗಳ ಮೂಲಕ ಕೊಮಿಂಟಾಂಗ್ ಅಧಿಕಾರದಲ್ಲಿರುವ ಪ್ರದೇಶಗಳಲ್ಲಿ ರಾಜಕೀಯ ಮತ್ತು ಆರ್ಥಿಕ ಹಕ್ಕುಗಳನ್ನು ಸಹ ಸ್ಥಾಪಿಸಲು ನಿರ್ಧರಿಸಿತು. ಇದು ಜನರನ್ನು ಅಣಿನೆರೆಸಿ, ಎಲ್ಲ ಜನವಿಭಾಗಗಳಲ್ಲೂ ದೇಶಪ್ರೇಮಿಗಳನ್ನು ಒಗ್ಗೂಡಿಸಿ ಗೆರಿಲ್ಲ ಹೋರಾಟಗಳಿಗೆ ಬೆಂಬಲ ಗಳಿಸಲು ಸಹಾಯ ಮಾಡಿತು.

ರಾಷ್ಟ್ರೀಯ ಸರ್ಕಾರ ಇಲ್ಲವೇ ಯಾವುದೇ ಆಡಳಿತ ಮಂಡಳಿಯನ್ನು ಸೇರದಿರಲು ಕಮ್ಯುನಿಸ್ಟ್ ಪಕ್ಷವು ನಿರ್ಧರಿಸಿತು. ಒಂದು ವೇಳೆ ಹಾಗೆ ಮಾಡಿದರೆ "ಅದು ಕಮ್ಯುನಿಸ್ಟ್ ಪಕ್ಷದ ಉದ್ದೇಶಗಳನ್ನು ಮಂಕುಗೊಳಿಸಿ, ಕೊಮಿಂಟಾಂಗ್ ನ ನಿರಂಕುಶ ಪ್ರಭುತ್ವ ಮುಂದುವರೆಸಲು ಸಹಾಯ ಮಾಡಿ, ಒಂದು ಐಕ್ಯ ಪ್ರಜಾಸತ್ತಾತ್ಮಕ ಸರ್ಕಾರವನ್ನು ಅಧಿಕಾರಕ್ಕೆ ತರುವ ಪ್ರಯತ್ನಗಳಿಗೆ ತಡೆಯೊಡ್ಡುತ್ತದೆ." ಎಂಬುದು ಅದಕ್ಕೆ ಕಾರಣವಾಗಿತ್ತು. ಜಪಾನಿಗೆ ಪ್ರತಿರೋಧ ಒಡ್ಡಿ, ದೇಶವುಳಿಸುವ ಕಮ್ಯುನಿಸ್ಟ್ ಪಕ್ಷದ 'ಹತ್ತು ಅಂಶಗಳ ಕಾರ್ಯಕ್ರಮ'ದ ಜಾರಿಗೆ ಸರ್ಕಾರವು ಆಡಳಿತಾತ್ಮಕ ಆದೇಶಗಳನ್ನು ಜಾರಿ ಮಾಡಿದ ನಂತರವಷ್ಟೇ, ಅದು ಅಂತಹ ಸರ್ಕಾರವನ್ನು ಸೇರಬಹುದು, ಎಂದು ನಿರ್ಧರಿಸಲಾಯಿತು.

ಕಮ್ಯುನಿಸ್ಟ್ ಪಕ್ಷದ ನಿರಂತರ ಪ್ರಯತ್ನ ಮತ್ತು ಜನತೆಯ ಒತ್ತಡದಿಂದಾಗಿ ಕೊಮಿಂಟಾಂಗ್, ಅದರ ಕಾನೂನಾತ್ಮಕ ಸ್ಥಾನಮಾನವನ್ನು ಗುರುತಿಸುವಂತಾಯಿತು ಮತ್ತು ಕೊಮಿಂಟಾಂಗ್–ಕಮ್ಯುನಿಸ್ಟ್ ಸಹಕಾರ ಸಾಕಾರವಾಗಿಸುವ ಘೋಷಣೆ ಮಾಡಲೇಬೇಕಾಯಿತು. ಹಾಗಿದ್ದೂ ಈ 'ಐಕ್ಯರಂಗವು ನಿಜವಾದ ಅರ್ಥದಲ್ಲಿ ಯಾವತ್ತೂ ಪರಿಣಾಮಕಾರಿಯಾಗಿ 'ಐಕ್ಯತೆ'ಯನ್ನು ಹೊಂದಿರಲಿಲ್ಲ.

ಈ ಮಧ್ಯೆ ಜಪಾನ್–ವಿರೋಧಿ ವೇದಿಕೆಯನ್ನು ವಿಸ್ತರಿಸುವ ಮತ್ತು ಕ್ರೋಢೀಕರಿಸುವ ವಿಚಾರದಲ್ಲಿ ಕಮ್ಯುನಿಸ್ಟ್ ಪಕ್ಷದಲ್ಲಿ, ಕೆಲವು ಬಲ ಮಾರ್ಗಚ್ಯುತಿಯಾದ ಶರಣಾಗತಿಯ ವಿಚಾರಗಳು ಮೂಡಿದವು. ಅಂತಹ ಶಕ್ತಿಗಳು ಸ್ವತಂತ್ರ ಉಪಕ್ರಮಗಳು, ಪ್ರಜಾಪ್ರಭುತ್ವ, ಜನತೆಯ ಜೀವನೋಪಾಯ, ಗೆರಿಲ್ಲ ಯುದ್ಧ ತಂತ್ರಗಳ ಕುರಿತು ಕಮ್ಯುನಿಸ್ಟ್ ಪಕ್ಷವು ಒತ್ತು ಕೊಡುವುದರ ವಿರುದ್ಧ ವಾದಿಸಿದವು. ಅವರು ಪ್ರತಿಯೊಂದನ್ನೂ ಐಕ್ಯರಂಗದಡಿ ಮಾಡುವ, 'ದುಡಿಯುವ ಜನತೆಯ ನಾಯಕತ್ವ'ವನ್ನು ಕೈಬಿಡುವ, ಮತ್ತು ಯಶಸ್ಸಿಗಾಗಿ ಕೊಮಿಂಟಾಂಗ್ ನ್ನು ಅವಲಂಬಿಸಬೇಕೆಂದು ವಾದಿಸತೊಡಗಿದರು. ಮಾವೊತ್ಸೆ ತುಂಗ್ ಮತ್ತು ಇನ್ನಿತರರು ಇಂತಹ ಶರಣಾಗತಿಯ ವಾದಗಳನ್ನು ವಿರೋಧಿಸುತ್ತಾ, ಐಕ್ಯರಂಗದೊಳಗೆ ಪಕ್ಷದ ಸ್ವತಂತ್ರ ಧೋರಣೆಗಳು ಮತ್ತು ಮುನ್ನೆಚ್ಚೆಯ ಕ್ರಮಗಳ ನೀತಿಯನ್ನು ಎತ್ತಿ ಹಿಡಿದರು.

'ಐಕ್ಯರಂಗ, ಸಶಸ್ತ್ರ ಹೋರಾಟ ಮತ್ತು ಪಕ್ಷ ಕಟ್ಟುವುದು' – ಮೂರು ಅಪೂರ್ವ ಅಸ್ತ್ರಗಳು

1937ರಲ್ಲಿ "ನಾಂಜಿಂಗ್ ಹತ್ಯಾಕಾಂಡ" ಎಂದು ಕರೆಯುವ ದಾರುಣ ಹತ್ಯಾಕಾಂಡ ನಡೆಯಿತು. ಜಪಾನ್ ಕೊಮಿಂಟಾಂಗ್ ಸರ್ಕಾರದ ರಾಜಧಾನಿಯಾದ ನಾಂಜಿಂಗ್‌ನ್ನು ಅತಿಕ್ರಮಿಸಿ 3 ಲಕ್ಷಕ್ಕಿಂತ ಹೆಚ್ಚು ಜನರ ನರಮೇಧ ಮಾಡಿತು. ಜಪಾನ್ ಸೈನ್ಯದ ಹಿಂಸಾಚಾರ ಮತ್ತು ಕ್ರೌರ್ಯ ಇಡೀ ದೇಶವನ್ನು ಅಲುಗಾಡಿಸಿತು. ಇದು ಕೊಮಿಂಟಾಂಗ್ ನ ಹೋರಾಟದ ಕಿಚ್ಚನ್ನು ಮತ್ತಷ್ಟು ದುರ್ಬಲಗೊಳಿಸಿ, 1938ರಲ್ಲಿ ಅವರು ತಮ್ಮ ಪ್ರದೇಶದ ಬಹುಭಾಗವನ್ನು ಕಳೆದುಕೊಂಡರು. ಜಪಾನಿ ಸೈನ್ಯದ ದೌರ್ಜನ್ಯಗಳಿಂದ ಶಾಕ್ ಗೆ ಒಳಗಾದ ಬಹು ದೊಡ್ಡ ಸಂಖ್ಯೆಯ ಅಂತರ್‍ರಾಷ್ಟ್ರೀಯ ಆರೋಗ್ಯ ತಂಡಗಳು ಸಹಾಯ ನೀಡಲು ಚೀನಾಕ್ಕೆ ಬಂದವು. ಕೆನಡಾದ ಡಾ. ನಾರ್ಮನ್ ಬೆಥೂನ್ ಮತ್ತು ಭಾರತದ ಡಾ. ದ್ವಾರಕಾನಾಥ್ ಕೊಟ್ನಿಸ್ ಇಂತಹ ತಂಡಗಳ ನೇತೃತ್ವ ವಹಿಸಿದ್ದರು.

ಕಮ್ಯುನಿಸ್ಟ್ ಪಕ್ಷವು ತನ್ನ ಗೆರಿಲ್ಲ ಹೋರಾಟಗಳನ್ನು ಮುಂದುವರೆಸಿ, ವೈರಿ ಗಡಿರೇಖೆಯ ಹಿಂದೆ ದಕ್ಷಿಣ ಚೈನ ಯುದ್ಧ ಭೂಮಿಯನ್ನು ತೆರೆಯಿತು. ಜಪಾನನ್ನು ಸಮರ್ಥವಾಗಿ ಎದುರಿಸಿ, ಅವರು ಮುಂದುವರೆಯವುದನ್ನು ತಡೆದು ನಿಲ್ಲಿಸುವ ಮೂಲಕ ಕೇವಲ ಕಮ್ಯುನಿಸ್ಟ್ ಪಕ್ಷ ಮಾತ್ರವೇ ದೇಶವನ್ನು ರಕ್ಷಿಸಬಲ್ಲುವು ಎಂಬುದನ್ನು ಜನತೆ ಮನಗಂಡಿತು. ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಅತಿ ಹೆಚ್ಚಿನ ಸಂಖ್ಯೆಯ ಯುವಜನತೆ ಗೆರಿಲ್ಲ ಯುದ್ಧಕ್ಕೆ ಸನ್ನದ್ಧರಾಗಿ, ಪಕ್ಷದ ನೆಲೆಗಳಲ್ಲಿ ಉತ್ಪಾದನೆ ಹೆಚ್ಚಿಸಿ ಕೆಂಪು (ಪೀಪಲ್ಸ್ ಲಿಬರೇಶನ್ ಆರ್ಮಿ – ಜನತಾ ವಿಮೋಚನಾ ಸೈನ್ಯ) ಸೈನ್ಯವನ್ನು ಗಟ್ಟಿಗೊಳಿಸಿದರು.

ಅಗಾಧವಾದ ಪ್ರೌಢಿಮೆ ಮತ್ತು ಸಂಯಮ ಪ್ರದರ್ಶಿಸುತ್ತಾ ಕಮ್ಯುನಿಸ್ಟ್ ಪಕ್ಷವು, ಜಪಾನ್‌ನ ವಿರುದ್ಧ ಐಕ್ಯ ಹೋರಾಟವನ್ನು ಪುನರುಚ್ಚರಿಸಿತು. ಬ್ರಿಟಿಷ್ ಮತ್ತು ಅಮೆರಿಕದ ಕುಮ್ಮಕ್ಕಿನಿಂದ ಕೊಮಿಂಟಾಂಗ್, ಈ ಎಲ್ಲ ಪ್ರಸ್ತಾಪಗಳನ್ನೂ ತಿರಸ್ಕರಿಸಿ ಕಮ್ಯುನಿಸ್ಟ್ ಪಕ್ಷ ಮತ್ತು ಕೆಂಪು ಸೈನ್ಯದ ವಿರುದ್ಧ ಹೊಂಚು ಹಾಕುವುದನ್ನು ಮುಂದುವರೆಸಿತು. ಇದರ ಲಾಭ ಪಡೆದ ಜಪಾನೀ ಆಕ್ರಮಣಕಾರರು ವಿಮೋಚಿತ ನೆಲೆಗಳ ಮೇಲೆ ತಮ್ಮ ಹಿಡಿತ ಸಾಧಿಸಲು ಅಭಿಯಾನ ಶುರುಮಾಡಿದರು. ಕಮ್ಯುನಿಸ್ಟ್ ಪಕ್ಷವು ಐಕ್ಯರಂಗವನ್ನು ಇನ್ನಷ್ಟು ಗಟ್ಟಿಗೊಳಿಸುವ ನಿರ್ಧಾರವನ್ನು ಮುಂದುವರೆಸುತ್ತಲೇ, ಕೊಮಿಂಟಾಂಗ್ ನ ದಾಳಿಗಳನ್ನು ವಿಫಲಗೊಳಿಸುವುದಾಗಿ ನಿರ್ಧರಿಸಿತು. ತಮ್ಮ ಆತ್ಮ ರಕ್ಷಣೆಗಾಗಿ ಕೊಮಿಂಟಾಂಗ್ ನ ಎಲ್ಲ ದಾಳಿಗಳನ್ನೂ ಕಮ್ಯುನಿಸ್ಟ್ ಪಕ್ಷ ಎದುರಿಸಿ ನಿಂತ ಮತ್ತು ಅದನ್ನು ವಿಫಲಗೊಳಿಸಿದ ಸ್ವ–ರಕ್ಷಣೆಯ ನಿಲುವು ಜನತೆಯ ಬೆಂಬಲವನ್ನು ಗೆದ್ದುಕೊಂಡಿತು.



ಚೀನಾ ಕ್ರಾಂತಿಗೆ ಭಾರತದ ಕನೆಕ್ಷನ್– ಭಾರತೀಯ ವೈದ್ಯಕೀಯ ತಂಡದ ಡಾ. ದ್ವಾರಕಾನಾಥ ಕೊಟ್ನಿಸ್ ಶಿಲ್ಪ

ಉತ್ತರದಲ್ಲಿನ ತನ್ನ ನೆಲೆಗಳನ್ನು ಕ್ರೋಢೀಕರಿಸುವ, ಕೇಂದ್ರದಲ್ಲಿ ತನ್ನ

ಪುಟ 10 ಕ್ಕೆ

ಜನತಾ ಪ್ರಜಾಪ್ರಭುತ್ವ ಕ್ರಾಂತಿಯತ್ತ......

ಪುಟ 9 ರಿಂದ

ಸೈನ್ಯದ ಇರುವಿಕೆಯನ್ನು ಹೆಚ್ಚಿಸುವ ಮತ್ತು ದಕ್ಷಿಣ ದಿಕ್ಕಿನಲ್ಲಿ ವಿಸ್ತರಿಸುವ ಮೂಲಕ ತನ್ನ ಪ್ರತಿರೋಧದ ಯುದ್ಧವನ್ನು ಗೆಲ್ಲುವ ನಿರ್ಧಾರವನ್ನು ಕಮ್ಯುನಿಸ್ಟ್ ಪಕ್ಷ ಮಾಡಿತು. ಈ ವ್ಯೂಹಾತ್ಮಕ ಕೆಲಸ ಮಾಡಲು ತಕ್ಕ ವ್ಯಕ್ತಿಗಳನ್ನು ಗುರುತಿಸಿ ಜವಾಬ್ದಾರಿ ನೀಡಲಾಗಿತ್ತು. ಈ ಎಲ್ಲ ಪ್ರಯತ್ನಗಳ ಫಲವಾಗಿ 1940ರ ವೇಳೆಗೆ ಕಮ್ಯುನಿಸ್ಟ್ ಪಕ್ಷದ ಸದಸ್ಯತ್ವವು 40 ಸಾವಿರದಿಂದ 8 ಲಕ್ಷಕ್ಕೇರಿತು.

ತನ್ನ ವೈರಿಗಳನ್ನು ಸೋಲಿಸಿ ಕ್ರಾಂತಿಯತ್ತ ಮುನ್ನಡೆಯಲು 'ಐಕ್ಯರಂಗ, ಸಶಸ್ತ್ರ ಹೋರಾಟ ಮತ್ತು ಪಕ್ಷ ಕಟ್ಟುವುದು' – ಇವು ಮೂರು ಅಪೂರ್ವ ಅಸ್ತ್ರಗಳೆಂದು ಕಮ್ಯುನಿಸ್ಟ್ ಪಕ್ಷ ಗುರುತಿಸಿತು. ಐಕ್ಯರಂಗದ ತಂತ್ರಗಳ ಕುರಿತು ಅದು ಪಕ್ಷದೊಳಗೆ ನಿರ್ದೇಶನಗಳನ್ನು ಪ್ರಕಟಿಸಿತು. ಇದು 'ಹೋರಾಟವಿಲ್ಲದ ಎಲ್ಲ ಸಖ್ಯತೆಯೂ ಅಲ್ಲ ಅಥವಾ ಸಖ್ಯತೆಯೇ ಇರದ ಬರಿಯ ಹೋರಾಟವೂ ಅಲ್ಲ. ಬದಲಿಗೆ ಸಖ್ಯತೆ ಮತ್ತು ಹೋರಾಟವನ್ನು ಜೋಡಿಸುವಂಥದ್ದು' ಎಂದು ವಿವರಿಸಲಾಯಿತು. ಪ್ರಸ್ತುತವಾಗಿದ್ದ ವೈರುಧ್ಯಗಳನ್ನು ಬಳಸಿ 'ಹಲವರನ್ನು ಗೆಲ್ಲುವ, ಕೆಲವರನ್ನು ವಿರೋಧಿಸುವ, ಒಂದರ ನಂತರ ಒಂದಾಗಿ ವೈರಿಗಳನ್ನು ಚಚ್ಚಿ ಹಾಕುವ' ತಂತ್ರವಾಗಿತ್ತು. ಕಮ್ಯುನಿಸ್ಟ್ ಪಕ್ಷವು ಪಂಥವಾದಿ ಮಾರ್ಗಚ್ಯುತಿಗಳು ಮತ್ತು ಮಾರ್ಕ್ಸ್‌ವಾದಿ–ಲೆನಿನ್‌ವಾದದ ತಿಳುವಳಿಕೆಯಲ್ಲಿ ತಪ್ಪು ಗ್ರಹಿಕೆಗಳನ್ನು ಸರಿಪಡಿಸಲು ತಿದ್ದುಪಡಿ ಪ್ರಚಾರಾಂದೋಲನವನ್ನು ಕೈಗೆತ್ತಿಕೊಂಡಿತು. ವ್ಯಕ್ತಿನಿಷ್ಠತೆ, ಪಂಥವಾದ ಮತ್ತು ಗೊಡ್ಡುತನಗಳನ್ನು ಹೊಡೆದೋಡಿಸುವುದು ಅದರ ಉದ್ದೇಶವಾಗಿತ್ತು. ಇದರಿಂದ ಗಟ್ಟಿಗೊಂಡ ಕೆಂಪುಸೈನ್ಯ ಮತ್ತು ಜನತೆಯು, ವೈರಿಗಳಲ್ಲಿ ಆಶಾಭಂಗ ಉಂಟುಮಾಡಿ ಹಲವಾರು ಮೂಲನೆಲೆಗಳನ್ನು ವಿಮೋಚನೆ ಮಾಡಿ ಪುನಃ ಗಳಿಸುವುದು ಸಾಧ್ಯವಾಯಿತು.

ವಿದೇಶೀ ಆಕ್ರಮಣದ ವಿರುದ್ಧ ಯುದ್ಧದಲ್ಲಿ ವಿಜಯ – 6 ಲಕ್ಷ ಕಮ್ಯುನಿಸ್ಟರ ಬಲಿದಾನ

ಇನ್ನೊಂದೆಡೆ ಕೊಮಿಂಟಾಂಗ್ ಕೆಲವೇ ಕೆಲವು ಹೋರಾಟಗಳಲ್ಲಿ ಜಪಾನನ್ನು ಎದುರಿಸುವುದು ಸಾಧ್ಯವಾಯಿತು. ಬಹುತೇಕ ಹೋರಾಟಗಳಲ್ಲಿ ಅದು ಮೊದಲ ದಾಳಿಗೆ ಕುಸಿದುಬಿದ್ದಿತು. ಕಮ್ಯುನಿಸ್ಟ್ ದ್ವೇಷಿ ನಿಲುವನ್ನು ಹೊಂದಿದ್ದ ಅದು 1945ರವರೆಗೂ, ಮತ್ತೆ ಮತ್ತೆ ಕಮ್ಯುನಿಸ್ಟ್ ಪಕ್ಷ ಕೊಡುತ್ತಿದ್ದ ಜತೆಯಾಗಿ ಪ್ರಜಾಸತ್ತಾತ್ಮಕ ಸಂಯುಕ್ತ ಸರ್ಕಾರ ರಚಿಸುವ ಪ್ರಸ್ತಾಪವನ್ನು ತಿರಸ್ಕರಿಸುತ್ತಲಿತ್ತು. ರಾಜಕೀವಾಗಿ ಭ್ರಷ್ಟವಾಗಿದ್ದ ಕೊಮಿಂಟಾಂಗ್ ಸರ್ಕಾರವು ತನ್ನ ಸೈನ್ಯಕ್ಕೆ ಸ್ಫೂರ್ತಿ ತುಂಬಿಸುವುದರಲ್ಲಿ ಸೋತಿತ್ತು. ಇದರಿಂದ ಗಾಬರಿಯಾದ ಅಮೆರಿಕವು ಚಿಯಾಂಗ್–ಕೈ–ಶೇಖ್ ಗೆ ಎಲ್ಲ ಸಾಧ್ಯವಿದ್ದ ಒತ್ತಾಸೆ ನೀಡಿದರೂ ಪ್ರಯೋಜನವಾಗಲಿಲ್ಲ.



ಮಾವೋ ಚೀನಾ ಜನತಾ ಗಣರಾಜ್ಯ ಘೋಷಿಸುತ್ತಿರುವುದು – ಅಕ್ಟೋಬರ್ 1, 1949

1945ರಲ್ಲಿ ಚೀನಾದ ಈಶಾನ್ಯ ಪ್ರದೇಶವನ್ನು ಪ್ರವೇಶಿಸಿದ ಸೋವಿಯತ್ ಯುನಿಯನ್ ಪಡೆಗಳು ಜಪಾನಿ ಪಡೆಗಳ ಮೇಲೆ ಭಾರೀ ದಾಳಿ ಮಾಡಿ ಅವರ ಸೋಲನ್ನು ತ್ವರಿತಗೊಳಿಸಿದವು. ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಕೆಂಪು ಸೈನ್ಯವು ಸಮಗ್ರವಾಗಿ ಜಪಾನೀಯರನ್ನು ಸೋಲಿಸಿ ಅವರನ್ನು ಶರಣಾಗುವಂತೆ ಮಾಡಿತು.

ಶತಮಾನದಲ್ಲೇ ವಿದೇಶೀ ಆಕ್ರಮಣಕಾರರ ವಿರುದ್ಧ ಚೀನಾ ಗಳಿಸಿದ ಯಶಸ್ಸಿನಲ್ಲಿ, ಜಪಾನ್‌ನ ವಿರುದ್ಧಗಳಿಸಿದ ಯಶಸ್ಸು ಮೊದಲನೆಯದು. ಈ ಸಂಘರ್ಷದಲ್ಲಿ 2.1 ಕೋಟಿ ಚೀನೀಯರು ಕೊಲ್ಲಲ್ಪಟ್ಟರು ಅಥವಾ ಗಾಯಗೊಂಡಿದ್ದರು. ಅದರಲ್ಲಿ 6 ಲಕ್ಷಕ್ಕೂ ಹೆಚ್ಚಿನವರು ಕಮ್ಯುನಿಸ್ಟ್ ಪಕ್ಷದ ಹೋರಾಟಗಾರರಾಗಿದ್ದರು. ಅತ್ಯಂತ ಶಕ್ತಿಯುತವಾಗಿ ಬೆಳೆದು ಒಂದು ಲಕ್ಷ ಚದರ ಕಿ.ಮಿ.ಗಳಲ್ಲಿ ವಾಸಿಸುತ್ತಿದ್ದ 10 ಕೋಟಿ ಜನರನ್ನು ವಿಮುಕ್ತಿಗೊಳಿಸಿತು. ಕೆಂಪು ಸೈನ್ಯದ ಪ್ರಮುಖ ಪಡೆಯ ಬಲ 12 ಲಕ್ಷ ಇದ್ದರೆ, ಜನತಾ ಸೈನ್ಯ 26 ಲಕ್ಷ ಇತ್ತು. ಇದು ಹೊಸ ಪ್ರಜಾಸತ್ತಾತ್ಮಕ ಕ್ರಾಂತಿಯ ವಿಜಯಕ್ಕೆ ನೆಲೆ ಒದಗಿಸಿತು.

'ಐಕ್ಯತೆ ಮತ್ತು ವಿಜಯ' ಎಂದು ಕರೆಯಲ್ಪಡುವ ಏಳನೆಯ ರಾಷ್ಟ್ರೀಯ ಅಧಿವೇಶನವು ಈ ಸಶಸ್ತ್ರ ಹೋರಾಟದ ಯಶಸ್ಸಿನ ಮೂರು ಆಯುಧಗಳನ್ನು ಗುರುತಿಸಿತು. ಸಿದ್ಧಾಂತ ಮತ್ತು ಆಚರಣೆ ಎರಡನ್ನೂ ಒಟ್ಟಿಗೆ ಒಯ್ಯುವುದು, ಜನತೆಯೊಂದಿಗೆ ನಿಕಟ ಸಂಬಂಧ ಹೊಂದುವುದು ಮತ್ತು ಸ್ವವಿಮರ್ಶೆ ಮಾಡಿಕೊಳ್ಳುವುದು – ಎಂಬ ಈ ಮೂರು ಆಯುಧಗಳನ್ನು ಪ್ರಜಾಸತ್ತಾತ್ಮಕ ಕ್ರಾಂತಿಯ ವಿಕಾಸಕ್ಕಾಗಿ ಬಳಸುವುದನ್ನು ಮುಂದುವರೆಸುವುದು ಅಗತ್ಯ ಎಂದು ಗುರುತಿಸಿತು.

ಜನತೆ ಸಾಮ್ರಾಜ್ಯಶಾಹಿ ಜಪಾನಿನ ಮೇಲೆ ವಿಜಯ ಸಾಧಿಸಿದ ನಂತರದಲ್ಲಿ ಚಿಯಾಂಗ್–ಕೈ–ಶೇಖ್ ಅಮೆರಿಕೆಯೊಂದಿಗೆ ಕೈ ಜೋಡಿಸಿ ಇನ್ನೊಂದು ಅಂತರ್ಯುದ್ಧ ಹೂಡುವರೆಂಬ ಬಗ್ಗೆ ಯಾವುದೇ ಭ್ರಮೆ ಬೇಡವೆಂದು ಪಕ್ಷವು ಹೇಳಿತು. ನಾವು ಶಾಂತಿ ಮತ್ತು ಸ್ಥಿರತೆಗಾಗಿ ಕೆಲಸ ಮಾಡಬೇಕೆಂದು ಅದು ಘೋಷಿಸಿತು. ಕಮ್ಯುನಿಸ್ಟ್ ಪಕ್ಷದ ಬೆಳವಣಿಗೆಯನ್ನು ತಡೆಯಲು ಅಮೆರಿಕವು ಎಲ್ಲ ಭೌತಿಕ ಮತ್ತು ಮೂಲಸೌಕರ್ಯಗಳನ್ನು ನೀಡುವ ಮೂಲಕ ಚಿಯಾಂಗ್–ಕೈ–ಶೇಖ್ ಗೆ ಒತ್ತಾಸೆಯಾಗಿ ನಿಂತಿತು. ಇದರಿಂದ ಪ್ರೇರಿತವಾಗಿ ಕೊಮಿಂಟಾಂಗ್ ಆರು ತಿಂಗಳ ಹಿಂದೆ ತಾನು ಸಹಿ ಮಾಡಿದ್ದ ಒಪ್ಪಂದವನ್ನು ಮುರಿದು ಜೂನ್ 1946ರಲ್ಲಿ ಕಮ್ಯುನಿಸ್ಟ್ ಪಕ್ಷ ಮತ್ತು ಕೆಂಪು ಸೈನ್ಯದ ಮೇಲೆ ಮತ್ತೆ ದಾಳಿಯನ್ನಾರಂಭಿಸಿತು. "ಅಮೆರಿಕ ಮತ್ತು ಚಿಯಾಂಗ್–ಕೈ–ಶೇಖ್ ನನ್ನು ಪ್ರತ್ಯೇಕಿಸಿ' ಮತ್ತು ಅವರ 'ಚೀನಾವನ್ನು ವಸಾಹತು ಮಾಡುವ ಪ್ರಯತ್ನ'ವನ್ನು ಸೋಲಿಸುವಂತೆ ಕರೆ ನೀಡುವ ಮೂಲಕ ಕಮ್ಯುನಿಸ್ಟ್ ಪಕ್ಷ ಅದಕ್ಕೆ ಉತ್ತರ ನೀಡಿತು. ಕೆಂಪು ಸೈನ್ಯವು ತನ್ನ ಚಲನಶೀಲ ಯುದ್ಧ ತಂತ್ರಗಳನ್ನು ಬಳಸಿ ಬಲಿಷ್ಠ ವೈರಿಯ ವಿರುದ್ಧ ಸೆಟೆದು ನಿಂತಿತು.

'ಚೀನಾ ಜನತಾ ಗಣರಾಜ್ಯ' ಘೋಷಣೆ

ವಿಮೋಚನಾ ಯುದ್ಧದ ಎರಡನೆಯ ವರ್ಷದಲ್ಲಿ ದೇಶದಾದ್ಯಂತ ಪ್ರತಿ–ಆಕ್ರಮಣಗಳನ್ನು ಸಂಘಟಿಸುವಂತೆ ಪಕ್ಷವು ಕರೆ ನೀಡಿತು. ಚೀನಾದಾದ್ಯಂತ ಪಕ್ಷದ ನೇತೃತ್ವದ ಸೈನ್ಯವು ವಿಜಯ ಸಾಧಿಸಿ ಹೊಸ ಐತಿಹಾಸಿಕ ತಿರುವು ನೀಡಿತು. ಪಕ್ಷವು ಇದನ್ನು ಶ್ರಮಜೀವಿಗಳ ನಾಯಕತ್ವದಲ್ಲಿ ವಸಾಹತುಶಾಹಿ, ಪಾಳೆಗಾರಿ ಮತ್ತು ಅಧಿಕಾರಶಾಹಿ ಬಂಡವಾಳಶಾಹಿ ವಿರುದ್ಧದ ಕ್ರಾಂತಿಯ ಕಾಲವೆಂದು ಬಣ್ಣಿಸಿತು.

ತಾನು ವಿಮೋಚನೆಗೊಳಿಸಿದ ಪ್ರದೇಶಗಳಲ್ಲಿ, ಜಮೀನುದಾರರಿಂದ ಶೋಷಣೆಯನ್ನು ತಪ್ಪಿಸಲು ದೊಡ್ಡ ದೊಡ್ಡ ಜಮೀನುದಾರರು ಹೊಂದಿದ್ದ ಕೃಷಿಭೂಮಿಯನ್ನು ಅವರಿಂದ ವಶಪಡಿಸಿಕೊಂಡು ಬಡಜನರಿಗೆ ಹಂಚಲು, 1947ರಲ್ಲಿ ಪಕ್ಷವು "ಭೂ ಕಾಯ್ದೆ"ಯನ್ನು ಅಂಗೀಕರಿಸಿತು. ಬಡ ಕೃಷಿಕರನ್ನು ಆಧರಿಸಿ, ಮಧ್ಯಮ ರೈತರನ್ನು ಸೇರಿಸಿಕೊಂಡು, ಪಾಳೆಯಗಾರಿ ಶೋಷಣೆಯನ್ನು ನಿಷೇಧಿಸುವುದು ಮತ್ತು ಕೃಷಿ ಉತ್ಪಾದನೆಯನ್ನು ಅಭಿವೃದ್ಧಿ ಪಡಿಸುವುದು ಭೂ ಸುಧಾರಣೆಯ ಜಾರಿಯ ಒಟ್ಟು ಧೋರಣೆಯಾಗಿತ್ತು. ಇದಕ್ಕೆ ಬಹುದೊಡ್ಡ ಜನತೆಯ ಬೆಂಬಲ ದೊರೆತು ಕೊಮಿಂಟಾಂಗ್ ಮೇಲೆ ಕಮ್ಯುನಿಸ್ಟ್ ಪಕ್ಷಕ್ಕೆ ವಿಜಯ ಸಾಧಿಸುವುದು ಸಾಧ್ಯವಾಯಿತು.

ನವೆಂಬರ್ 1948ರ ಹೊತ್ತಿಗೆ, ಚೀನಾ ಕಮ್ಯುನಿಸ್ಟ್ ಪಕ್ಷವು ತನ್ನ ಸೈನ್ಯವು ಸಂಖ್ಯಾತ್ಮಕವಾಗಿ ಮತ್ತು ಗುಣಾತ್ಮಕವಾಗಿ ಶ್ರೇಷ್ಠವಾಗಿರುವುದರಿಂದ ಕ್ರಾಂತಿಯ ವಿಜಯ ಮತ್ತು ಶಾಂತಿಯ ಸ್ಥಾಪನೆ ಸದ್ಯದಲ್ಲೇ ಸಾಧ್ಯವಾಗುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ ಎಂದು ಘೋಷಿಸಿತು. ಫೆಬ್ರವರಿ 1949ರಲ್ಲಿ ಪಕ್ಷವು ತನ್ನ ಮೊದಲಿನ ಘೋಷಣೆಯಾದ "ಹಳ್ಳಿಗಳು ಮೊದಲು, ನಗರಗಳು ನಂತರ" ಎಂಬ ಘೋಷಣೆಯನ್ನು "ನಗರಗಳು ಮೊದಲಿಗೆ, ಹಳ್ಳಿಗಳು ನಂತರ" ಎಂದು ಬದಲಾಯಿಸಿತು. ಏಪ್ರಿಲ್ 1949ರಲ್ಲಿ ಕೊಮಿಂಟಾಂಗ್ ನ ರಾಜಧಾನಿಯಾಗಿದ್ದ ನಾನ್‌ಜಿಂಗ್ ನ ಪತನದೊಂದಿಗೆ ಅದರ ಸಮಗ್ರ ಸೋಲು ಖಚಿತವಾಯಿತು.

ಅಕ್ಟೋಬರ್ 1, 1949ರಲ್ಲಿ ಮಾವೊತ್ಸೆ ತುಂಗ್ "ಚೀನಾ ಜನತಾ ಗಣರಾಜ್ಯ" ರಚನೆಯಾಗಿದೆ ಎಂದು ಘೋಷಿಸಿದರು. ಇದು 'ಕಾರ್ಮಿಕ ವರ್ಗದ ನಾಯಕತ್ವದಲ್ಲಿ' 'ಕಾರ್ಮಿಕರು ಮತ್ತು ರೈತರ ಕೂಟವು ಎಲ್ಲ ಪ್ರಜಾಸತ್ತಾತ್ಮಕ ವರ್ಗ ಮತ್ತು ರಾಷ್ಟ್ರೀಯತೆಗಳನ್ನು ಒಗ್ಗೂಡಿಸುವುದರ' ಮೇಲೆ ಆಧರಿಸಿರುವ 'ಹೊಸ ಪ್ರಜಾಸತ್ತಾತ್ಮಕ ಅಥವಾ ಜನತಾ ಪ್ರಜಾಸತ್ತಾತ್ಮಕ ಪ್ರಭುತ್ವ'ವೆಂದು ಅವರು ಘೋಷಿಸಿದರು.

ಹೀಗೆ ಚೀನಾ ಜನತಾ ಗಣರಾಜ್ಯದ ಸ್ಥಾಪನೆಯು, ಅರೆ–ವಸಾಹತುಶಾಹಿ, ಅರೆ–ಪಾಳೆಯಗಾರಿ ದೇಶವೊಂದು ಸಮಾಜವಾದಿ ಸಮಾಜವಾಗಿ ರೂಪಾಂತರಗೊಳ್ಳುವುದಕ್ಕೆ ನಾಂದಿಯಾಯಿತು. ●

ಇತಿಹಾಸವನ್ನು ವಿರೂಪಗೊಳಿಸುವ ಮತ್ತೊಂದು ಪ್ರಯತ್ನ......

ಪುಟ 6 ರಿಂದ

ದೃಷ್ಟಿಕೋನದ ಇತಿಹಾಸವನ್ನು ಪರಿಚಯಿಸುವುದು ಒಂದು ರಾಜಕೀಯ ತಂತ್ರವೇ ಆಗಿದೆ. ಹಾಗೆಯೇ ಭಾರತೀಯ ಪರಂಪರೆಯನ್ನು ವೈಭವೀಕರಿಸುವ ನೆಪದಲ್ಲಿ ಅವೈಜ್ಞಾನಿಕ ಚಿಂತನೆಗಳನ್ನು ಪಠ್ಯಕ್ರಮಗಳಲ್ಲಿ ಸೇರಿಸುವ ಮೂಲಕ ವಿದ್ಯಾರ್ಥಿಗಳನ್ನು ದಿಕ್ಕುತಪ್ಪಿಸುವ ಪ್ರಯತ್ನವೂ ಇದಾಗಿದೆ. ವೇದ ಗಣಿತ, ಜ್ಯೋತಿಷ್ಯ ವಿಜ್ಞಾನ ಮುಂತಾದ ಅವೈಜ್ಞಾನಿಕ ಮತ್ತು ಅವೈಚಾರಿಕ ಪಠ್ಯಕ್ರಮಗಳಿಗೆ ಈಗಾಗಲೇ ಹಲವು ವಿಶ್ವವಿದ್ಯಾಲಯಗಳಲ್ಲಿ ಮಾನ್ಯತೆ ದೊರೆತದ್ದೂ ಆಗಿದೆ. ಈಗ ಯುಜಿಸಿ ಈ ಅಪ್ರಬುದ್ಧ ನೀತಿಗಳಿಗೆ ಅಧಿಕೃತ ಮಾನ್ಯತೆ ನೀಡಲು ಮುಂದಾಗಿದೆ.

ಇತಿಹಾಸವನ್ನು ತಿರುಚುವುದು ಎಲ್ಲ ಆಳುವ ವರ್ಗಗಳೂ ಅನುಸರಿಸುವ ಒಂದು ತಂತ್ರಗಾರಿಕೆಯಾಗಿದ್ದು, ಅಧಿಕಾರ ರಾಜಕಾರಣದಲ್ಲಿ ಹೆಚ್ಚಿನ ಪ್ರಾಬಲ್ಯ ಗಳಿಸಲು ಈ ತಂತ್ರವನ್ನು ಅನುಸರಿಸಲಾಗುತ್ತದೆ. ಭಾರತದ ಸಂದರ್ಭದಲ್ಲೇ ನೋಡುವುದಾದರೆ ಹನ್ನೆರಡನೆ ತರಗತಿಯವರೆಗಿನ ಇತಿಹಾಸ ಪಠ್ಯಕ್ರಮದಲ್ಲಿ 20ನೆಯ ಶತಮಾನದಲ್ಲೂ ಭಾರತೀಯ ಸಮಾಜದಲ್ಲಿದ್ದ ಅಸ್ಪೃಶ್ಯತೆ, ಜೀತ ಪದ್ಧತಿ, ಜಾತಿ ತಾರತಮ್ಯಗಳು, ದೇವದಾಸಿ ಪದ್ಧತಿಯಂತಹ ಅನಿಷ್ಟಗಳನ್ನು ಪರಿಚಯಿಸಿರುವುದು ಕಡಿಮೆಯೇ. ಮಹಾತ್ಮ ಗಾಂಧಿ ಆಫ್ರಿಕಾದಲ್ಲಿ ಅನುಭವಿಸಿದ ಅಪಮಾನವನ್ನು ವೈಭವೀಕರಿಸುವ ನಮ್ಮ ಇತಿಹಾಸ ಪಠ್ಯಗಳು, ಡಾ.ಬಿ.ಆರ್. ಅಂಬೇಡ್ಕರ್ ಭಾರತದಲ್ಲೇ ಅನುಭವಿಸಿದ ತಾರತಮ್ಯ ಮತ್ತು ಅಪಮಾನಗಳನ್ನು ಸಂಪೂರ್ಣವಾಗಿ ದಾಖಲಿಸಿಲ್ಲ ಎನ್ನುವುದೂ ಗಮನಿಸಬೇಕಾದ ಅಂಶ.

ಭಾರತದ ಇತಿಹಾಸವನ್ನು ಹಿಂದೂ ಸುವರ್ಣಯುಗ, ಮುಸ್ಲಿಂ ಯುಗ ಮತ್ತು ವಸಾಹತು ಯುಗ ಎಂದು ವಿಂಗಡಿಸುವ ಬ್ರಿಟೀಷ್ ಆಡಳಿತ ನೀತಿಯನ್ನೇ ಸ್ವತಂತ್ರ ಭಾರತದಲ್ಲೂ ಅನುಸರಿಸಿರುವುದನ್ನೂ ಇಲ್ಲಿ ಗಮನಿಸಬೇಕಾಗುತ್ತದೆ. ಇದೂ ಸಹ ವಿರೂಪಗೊಳಿಸಿದ ಇತಿಹಾಸವೇ ಆಗಿದೆ. ಭಾರತದ ಇತಿಹಾಸದಲ್ಲಿ ಪರ್ಷಿಯನ್ ದೊರೆಗಳ ಪಾತ್ರ ಮತ್ತು ಪರ್ಷಿಯನ್ ಮತ್ತು ಭಾರತೀಯ ಸಂಸ್ಕೃತಿಯ ಸಮ್ಮಿಲನ, ಸಂಸ್ಕೃತ ಮತ್ತು ಪರ್ಷಿಯನ್ ಭಾಷೆಗಳ ನಡುವಿನ ಸಮನ್ವಯತೆ ಇವಾವುದನ್ನೂ ಭಾರತದ ಶೈಕ್ಷಣಿಕ ಇತಿಹಾಸ ಪಠ್ಯಕ್ರಮಗಳಲ್ಲಿ ನ್ಯಾಯಯುತವಾಗಿ ಬಿಂಬಿಸಿಲ್ಲ. ಕೆಲವು ಮುಸ್ಲಿಂ ದೊರೆಗಳ ಕ್ರೌರ್ಯ ಮತ್ತು ದಬ್ಬಾಳಿಕೆಯನ್ನು ದಾಖಲಿಸುವ ಪಠ್ಯಗಳಲ್ಲಿ ಭಾರತದಲ್ಲೇ ಪೇಶ್ವೆಯರ ಆಡಳಿತದಲ್ಲಿ ಅಸ್ಪೃಶ್ಯ ಸಮುದಾಯಗಳು ಎದುರಿಸಿದ ದೌರ್ಜನ್ಯ ಮತ್ತು ಚಿತ್ರಹಿಂಸೆ, ಕೇರಳದ ಸಮಾಜದಲ್ಲಿದ್ದ ಜಾತಿ ತಾರತಮ್ಯಗಳು ಇದಾವುದನ್ನೂ ದಾಖಲಿಸಲಾಗಿಲ್ಲ.

ಅಧಿಕಾರ ರಾಜಕಾರಣದ ಅನಿವಾರ್ಯತೆಗಳು

ವಿಶ್ವ ಇತಿಹಾಸವನ್ನು ದಾಖಲಿಸುವ ಸಂದರ್ಭದಲ್ಲೂ ಸಹ ಭಾರತದ ಯಾವುದೇ ಹಂತದ ಇತಿಹಾಸ ಪಠ್ಯಕ್ರಮಗಳಲ್ಲಿ ಲ್ಯಾಟಿನ್ ಅಮೆರಿಕದ ಕ್ರಾಂತಿಕಾರಿ ಬೆಳವಣಿಗೆಗಳು, ಕ್ಯೂಬಾದ ಕ್ರಾಂತಿ ಮತ್ತು ದಕ್ಷಿಣ ಆಫ್ರಿಕಾದ ವರ್ಣಬೇಧ ನೀತಿಯ ವಿರುದ್ಧ ನಡೆದ ಅನೇಕ ಕ್ರಾಂತಿಕಾರಿ ಘಟ್ಟಗಳನ್ನು ದಾಖಲಿಸಲಾಗಿಲ್ಲ ಎನ್ನುವುದು ಗಮನಿಸಬೇಕಾದ ಅಂಶ. ಅಮೆರಿಕದ ಸ್ವಾತಂತ್ರ್ಯ ಸಂಗ್ರಾಮ, ಜರ್ಮನಿ ಮತ್ತು ಇಟಲಿಯ ಏಕೀಕರಣ ಮುಂತಾದ ಇತಿಹಾಸಗಳನ್ನು ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಅರ್ಜೆಂಟೈನ, ಚಿಲಿ, ಪೆರು ಮತ್ತು ಮಧ್ಯಪ್ರಾಚ್ಯದ ದೇಶಗಳಲ್ಲಿನ ಕ್ರಾಂತಿಕಾರಿ ಚರಿತ್ರೆಯನ್ನು ಅಧ್ಯಯನ ಮಾಡುವ ಅವಕಾಶವೇ ಇಲ್ಲದಂತೆ ಪಠ್ಯಕ್ರಮವನ್ನು ರಚಿಸಿಕೊಂಡುಬರಲಾಗಿದೆ.

ಈ ನ್ಯೂನತೆಗಳನ್ನು ಸರಿಪಡಿಸುವ ಮೂಲಕ ಭವಿಷ್ಯದ ಪೀಳಿಗೆಗಳಿಗೆ ಮಾನವನ ಅಭ್ಯುದಯದ ಹಾದಿಯಲ್ಲಿನ ನೈಜ ಚಾರಿತ್ರಿಕ ಘಟ್ಟಗಳನ್ನು ಪರಿಚಯಿಸುವತ್ತ ಯೋಚಿಸುವುದು ಒಂದು ಪ್ರಜಾಸತ್ತಾತ್ಮಕ ವ್ಯವಸ್ಥೆಯ ಆದ್ಯತೆಯಾಗಬೇಕು. ಚರಿತ್ರೆಯ ವಿಭಿನ್ನ ಕಾಲಘಟ್ಟಗಳಲ್ಲಿ ನಡೆದ ಅನ್ಯಾಯಗಳನ್ನು ಭವಿಷ್ಯದ ಪೀಳಿಗೆಗೆ ತಿಳಿಸುವುದು ಅಪಮಾನಕರ ಎಂದು ಭಾವಿಸುವುದು ಅಪ್ರಬುದ್ಧತೆಯಾಗುತ್ತದೆ. ಈ ಚರಿತ್ರೆಯ ಹೆಜ್ಜೆಗಳು ಭವಿಷ್ಯದ ಭಾರತದ ಆತ್ಮಾವಲೋಕನಕ್ಕೆ ಅವಕಾಶ ಕೊಡಬೇಕಾಗುತ್ತದೆ. ಆದರೆ ಭವ್ಯ ಭಾರತದ ಪರಂಪರೆ ಎನ್ನುವ ಆತ್ಮರತಿಯಲ್ಲೇ ಇತಿಹಾಸದ ಕಪ್ಪುಚುಕ್ಕೆಗಳನ್ನು ಮರೆಮಾಚುವ ನಿಟ್ಟಿನಲ್ಲಿ ಆಳುವ ವರ್ಗಗಳು ವರ್ತಿಸುತ್ತವೆ. ಇದಕ್ಕೆ ಕಾಂಗ್ರೆಸ್ ಪಕ್ಷದ ಸರ್ಕಾರಗಳೂ ಹೊರತಲ್ಲ ಎನ್ನುವುದನ್ನು ಗಮನಿಸಬೇಕು.

ಕಳೆದ ಮೂರು ದಶಕಗಳ ಸಾಂಸ್ಕೃತಿಕ ರಾಜಕಾರಣ ಭಾರತದ ಭೂಪಟವನ್ನೇ ಬದಲಿಸುವ ಮಾರ್ಗದಲ್ಲಿ ಸಾಗುತ್ತಿದೆ. 'ಆತ್ಮನಿರ್ಭರ' ಭಾರತ ಈ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಇರಿಸಿದೆ. ಪಠ್ಯಕ್ರಮಗಳಲ್ಲಿನ ಬದಲಾವಣೆ ಈ ಮಾರ್ಗದ ಒಂದು ಸಾಧನ. ನೂತನ ಶಿಕ್ಷಣ ನೀತಿ 2020ರ ಮೂಲಕ ಪ್ರಾದೇಶಿಕ ಭಾಷೆಗಳನ್ನು ಕಡೆಗಣಿಸಿ ಸಂಸ್ಕೃತ ಮತ್ತು ಹಿಂದಿ ಹೇರಿಕೆಯ ಮೂಲಕ ಹಿಂದುತ್ವ ರಾಜಕಾರಣದ ಮತ್ತೊಂದು ಆಯಾಮವನ್ನು ಪರಿಚಯಿಸುತ್ತಿರುವ ಕೇಂದ್ರ ಸರ್ಕಾರ ಈ ಪಠ್ಯಕ್ರಮದಲ್ಲಿಯೇ ತಿದ್ದುಪಡಿ ಮಾಡುವ ಮೂಲಕ ಭಾರತದ ಶೈಕ್ಷಣಿಕ ವ್ಯವಸ್ಥೆಯ ಬೌದ್ಧಿಕ ತಳಹದಿಯನ್ನು ವಿರೂಪಗೊಳಿಸಲು ಮುಂದಾಗುತ್ತಿದೆ. ಇದು ಮತೀಯ ರಾಜಕಾರಣ ಮತ್ತು ಸಾಂಸ್ಕೃತಿಕ ಅಧಿಪತ್ಯದ ಮತ್ತೊಂದು ಆಯಾಮ ಎನ್ನುವುದನ್ನೂ ಗಮನಿಸಬೇಕಿದೆ. ●

ಯು.ಪಿ.ಎ. ಸರ್ಕಾರ ರಚನೆ ಮತ್ತು ಹೊಸ ಪರಿಸ್ಥಿತಿ



14ನೇ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಬಿಜೆಪಿ ನೇತೃತ್ವದ ಸರ್ಕಾರವನ್ನು ಅಧಿಕಾರದಿಂದ ಹೊರಹಾಕಿದ ಜನಾದೇಶದಿಂದ ರಚನೆಗೊಂಡ ಯುಪಿಎ ಸರಕಾರಕ್ಕೆ ನೇತೃತ್ವ ನೀಡಿದ್ದು ನರಸಿಂಹ ರಾವ್ ಆಳ್ವಿಕೆಯಲ್ಲಿ 1991 ರಿಂದ ವಿಶ್ವಬ್ಯಾಂಕ್, ಐಎಂಎಫ್ ಮತ್ತು ಡಬ್ಲ್ಯುಟಿಒಗಳ ಷರತ್ತುಗಳು ಮತ್ತು ಆಜ್ಞೆಗಳನ್ನು ಪಾಲಿಸುವಲ್ಲಿ ಬಡವರ ವಿರೋಧಿ ಆರ್ಥಿಕ ನೀತಿಯನ್ನು ಪ್ರಾರಂಭಿಸಿದ ಕಾಂಗ್ರೆಸ್. ಆದ್ದರಿಂದ, ಅದೇ ಕಾಂಗ್ರೆಸ್ ಹೊಸ ಸರ್ಕಾರದ ಮುಖ್ಯಸ್ಥರಾಗಿರುವ ಪರಿಸ್ಥಿತಿಯಲ್ಲಿ ಕಾರ್ಮಿಕರು, ನೌಕರರು ಮತ್ತು ಬಡವರು ತಮ್ಮ ಸ್ಥಿತಿಯ ಬಗ್ಗೆ ಆತ್ಮತೃಪ್ತಿ ಹೊಂದಿರಲು ಸಾಧ್ಯವಿರಲಿಲ್ಲ. ಆದರೆ ಜನರ ತುಳಿತಕ್ಕೊಳಗಾದ ಮತ್ತು ಬಳಲುತ್ತಿರುವ ವರ್ಗಗಳ ಕೆಲವು ಸಮಾಧಾನ ಮತ್ತು ವಿಶ್ವಾಸಕ್ಕೆ ಮುಖ್ಯ ಕಾರಣವೆಂದರೆ ಈ ಸರ್ಕಾರವು ಕೇವಲ ಎಡಪಂಥೀಯರ ಮೇಲೆ ಅವಲಂಬಿತವಾಗಿದ್ದದ್ದು.

ಮೂಲ ಲೇಖಕರು: ಸುಕೋಮಲ್ ಸೇನ್ ಸಂಗ್ರಹ-ಅನುವಾದ: **ಸಿ.ಆರ್. ಶಾನಭಾಗ**

ಪ್ರಧಾನಮಂತ್ರಿಯಾಗಿ ಮನ್‌ಮೋಹನ್ ಸಿಂಗ್ ಅವರೊಂದಿಗೆ ಭಾರತ ರಾಷ್ಟ್ರೀಯ ಕಾಂಗ್ರೆಸ್ ನೇತೃತ್ವದ ಯುನೈಟೆಡ್ ಪ್ರೋಗ್ರೆಸ್ಸಿವ್ ಅಲೈಯನ್ಸ್ (ಯುಪಿಎ) ಸರ್ಕಾರದ ಸ್ಥಾಪನೆಗೆ 2004ರ ಮೇ 1 ನೇ ವಾರ ಸಾಕ್ಷಿಯಾಯಿತು. ಹೊಸದಾಗಿ ರಚಿಸಲಾದ ಲೋಕಸಭೆಯಲ್ಲಿ 61 ಸದಸ್ಯರ ಬಲವನ್ನು ಹೊಂದಿದ್ದ ಎಡರಂಗವು ಯು.ಪಿ.ಎ.ಯ ಭಾಗವಾಗಲು ಇಷ್ಟಪಡಲಿಲ್ಲ, ಆದರೆ ಯುಪಿಎ ಸ್ವತಃ ಬಹುಮತವನ್ನು ಹೊಂದಿರದ ಕಾರಣ, ಸಾಮಾನ್ಯ ಕನಿಷ್ಠ ಕಾರ್ಯಕ್ರಮದ (ಸಿಎಂಪಿ) ಆಧಾರದ ಮೇಲೆ ಹೊರಗಿನಿಂದ ಬೆಂಬಲ ನೀಡುವುದಾಗಿ ಭರವಸೆ ನೀಡಿತು.. ಆದ್ದರಿಂದ, ಯು.ಪಿ.ಎ. ಸರ್ಕಾರದ ಉಳಿವು ಎಡರಂಗವನ್ನು ಅವಲಂಬಿಸಿತು.

ಯು.ಪಿ.ಎ. ಸರ್ಕಾರದ ನೀತಿಗಳ ವಿಶ್ಲೇಷಣೆ

14 ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಬಿಜೆಪಿ ನೇತೃತ್ವದ ಸರ್ಕಾರವನ್ನು ಅಧಿಕಾರದಿಂದ ಹೊರಹಾಕಿದ ಜನಾದೇಶ ಭಾರತದ ಇತಿಹಾಸದಲ್ಲಿ ಬಹಳ ಮುಖ್ಯವಾದ ರಾಜಕೀಯ ಘಟನೆಯಾಗಿದೆ. ಯುಪಿಎ ಸರ್ಕಾರವನ್ನು ಮುನ್ನಡೆಸಿದ ಭಾರತದ ರಾಷ್ಟ್ರೀಯ ಕಾಂಗ್ರೆಸ್ ನರಸಿಂಹ ರಾವ್ ಆಳ್ವಿಕೆಯಲ್ಲಿ 1991 ರಿಂದ ವಿಶ್ವಬ್ಯಾಂಕ್, ಐಎಂಎಫ್ ಮತ್ತು ಡಬ್ಲ್ಯುಟಿಒಗಳ ಷರತ್ತುಗಳು ಮತ್ತು ಆಜ್ಞೆಗಳನ್ನು ಪಾಲಿಸುವಲ್ಲಿ ಈ ಬಡವರ ವಿರೋಧಿ ಆರ್ಥಿಕ ನೀತಿಯನ್ನು ಪ್ರಾರಂಭಿಸಿತ್ತು ಎಂಬುದು ಒಂದು ಕಠೋರ ಸತ್ಯ. ಅದೇ ಸಮಯದಿಂದ ಈ ಆರ್ಥಿಕ ನೀತಿಗಳ ವಿರುದ್ಧ ಸರ್ಕಾರಿ ನೌಕರರು ಮತ್ತು ಶಿಕ್ಷಕರು ಸೇರಿದಂತೆ ಕಾರ್ಮಿಕ ವರ್ಗದ ಹಲವಾರು ಸಾರ್ವತ್ರಿಕ ಮುಷ್ಕರಗಳಿಗೆ ದೇಶ ಸಾಕ್ಷಿಯಾಯಿತು.

ಆದ್ದರಿಂದ, ಅದೇ ಕಾಂಗ್ರೆಸ್ ಹೊಸ ಸರ್ಕಾರದ ಮುಖ್ಯಸ್ಥರಾಗಿರುವ ಪರಿಸ್ಥಿತಿಯಲ್ಲಿ ಕಾರ್ಮಿಕರು, ನೌಕರರು ಮತ್ತು ಬಡವರು ತಮ್ಮ ಸ್ಥಿತಿಯ ಬಗ್ಗೆ ಆತ್ಮತೃಪ್ತಿ ಹೊಂದಿರಲು ಸಾಧ್ಯವಿರಲಿಲ್ಲ. ಆದರೆ ಜನರ ತುಳಿತಕ್ಕೊಳಗಾದ ಮತ್ತು ಬಳಲುತ್ತಿರುವ ವರ್ಗಗಳ ಕೆಲವು ಸಮಾಧಾನ ಮತ್ತು ವಿಶ್ವಾಸಕ್ಕೆ ಮುಖ್ಯ ಕಾರಣವೆಂದರೆ ಈ ಸರ್ಕಾರವು ಕೇವಲ ಎಡಪಂಥೀಯರ ಮೇಲೆ ಅವಲಂಬಿತವಾಗಿದ್ದದ್ದು. ಭಾರತದ ಎಡಪಂಥೀಯರು ದೇಶದ ಬಡ ವರ್ಗದ ಕಾರ್ಮಿಕರು, ನೌಕರರು, ರೈತರು ಮತ್ತು ಎಲ್ಲಾ ಸ್ತರಗಳ ಹಿತಾಸಕ್ತಿಗಳ ಸಮರ್ಥಕರು. ಜಾತ್ಯತೀತತೆ, ದೇಶದ ಏಕತೆ ಮತ್ತು ಸಮಗ್ರತೆ ರಕ್ಷಣೆಯ, ಜಾಗತೀಕರಣ ಮತ್ತು ಸಾಮ್ರಾಜ್ಯಶಾಹಿಗೆ ವಿರೋಧದ ವಿಚಾರಗಳಲ್ಲಿ ಎಡಪಂಥೀಯರು ಅಗ್ರಗಣ್ಯರು.

ಖಾಸಗೀಕರಣ, ಹೂಡಿಕೆ ಹಿಂತೆಗೆತ ಮತ್ತು ಕಾರ್ಮಿಕರ ಕುರಿತ 'ಹಾಯರ್ ಅಂಡ್ ಫಾಯರ್' ನೀತಿಗೆ ವಿದಾಯ. ತದನಂತರ ಎಡಪಂಥೀಯರೊಂದಿಗೆ ಒಂದು ಸುತ್ತಿನ ಚರ್ಚೆಯ ನಂತರ, ಒಮ್ಮತದ ಪ್ರಕಾರ, ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನು (ಸಿಎಂಪಿ) ಒಪ್ಪಲಾಯಿತು ಮತ್ತು ಆ ಸಿ.ಎಂ.ಪಿ.ಯ ಚೌಕಟ್ಟಿನೊಳಗೆ ಕಾರ್ಯನಿರ್ವಹಿಸುವುದಾಗಿ ಸರ್ಕಾರ ಭರವಸೆ ನೀಡಿತು.

ಎಡ ಕಾರ್ಮಿಕ ಸಂಘಗಳಿಗೆ, ಅದು ಅನೇಕ ವಿಷಯಗಳಲ್ಲಿ ಅಸ್ಪಷ್ಟವಾಗಿದ್ದರೂ ಸಿಎಂಪಿ ಬಹುಮಟ್ಟಿಗೆ ಒಪ್ಪಿಗೆಯಿತ್ತು, ಆದರೆ, ಕಾರ್ಮಿಕರ ಒಕ್ಕೂಟಗಳು ಸರ್ಕಾರದ ಕಾರ್ಯಕ್ಷಮತೆಯ ಬಗ್ಗೆ ಜಾಗರೂಕರಾಗಿರಬೇಕಾಗಿತ್ತು.

ಆರ್ಥಿಕ ನೀತಿ

ಆದರೆ ಯುಪಿಎ ಸರ್ಕಾರವು ಎನ್.ಡಿ.ಎ. ಸರ್ಕಾರದ ಅದೇ ಆರ್ಥಿಕ ನೀತಿಗಳನ್ನು ಅನುಸರಿಸಿತು. ಮತ್ತು ಅದನ್ನು ಜನರ ವಿರುದ್ಧ ತೀಕ್ಷ್ಣಗೊಳಿಸಲು ಪ್ರಯತ್ನಿಸುತ್ತಿದೆಯೆಂದು ಕಂಡುಬಂದಿತು. ಶಿಕ್ಷಣ ಕ್ಷೇತ್ರದಲ್ಲಿ, ಅವರು ಒಂದು ನಿರ್ದಿಷ್ಟ ಮಟ್ಟಿಗೆ, ಶೈಕ್ಷಣಿಕ ಪಠ್ಯಕ್ರಮದಲ್ಲಿ ಕೋಮು ಪಕ್ಷಪಾತವನ್ನು ಕಡಿಮೆಮಾಡಿದರು. ಆದರೆ ಆರ್ಥಿಕ ನೀತಿಯಲ್ಲಿ, ಇದು ಲಾಭ ಗಳಿಸುವ ಸಾರ್ವಜನಿಕ ವಲಯದ ಘಟಕಗಳ ಖಾಸಗೀಕರಣಕ್ಕೆ ಸಂಬಂಧಿಸಿದ ವಿಷಯವಾಗಿರಲಿ, ಕಾರ್ಮಿಕ ವರ್ಗದ ಅಸ್ತಿತ್ವದಲ್ಲಿರುವ ಕಾರ್ಮಿಕ ಹಕ್ಕುಗಳನ್ನು ಹಿಂತೆಗೆದುಕೊಳ್ಳುವುದಲ್ಲಾಗಿರಲಿ ಅಥವಾ ವಿದೇಶಾಂಗ ನೀತಿಯಲ್ಲಾಗಲಿ ಯು.ಪಿ.ಎ., ಐಎಂಎಫ್.- ವರ್ಲ್ಡ್ ಬ್ಯಾಂಕ್-ಡಬ್ಲ್ಯುಟಿಒ ಆದೇಶಗಳನ್ನು ಸಂಪೂರ್ಣವಾಗಿ ಅನುಸರಿಸಿತು. ಯುಪಿಎ ಸರ್ಕಾರವು ಹೂಡಿಕೆ-ಹಿಂತೆಗೆತ ಇಲಾಖೆಯನ್ನು ಕಳಚಿದರೂ, ಬಿ.ಎಚ್.ಇ.ಎಲ್. ಹೂಡಿಕೆ ಪಾಲನ್ನು ಮಾರಾಟಮಾಡುವ ನಿರ್ಧಾರ, ಇತರ ಪಿ.ಎಸ್.ಯು.ಗಳಲ್ಲಿ ಖಾಸಗೀಕರಣದ ಪ್ರಯತ್ನ, ಸೆಕ್ಯುರಿಟಿ ಪ್ರೆಸ್ ಮತ್ತು ಮಿಂಟ್ಸ್ ಸಹ ಕಂಪನೀಕರಣ, ಮುಂಬೈ ಮತ್ತು ದೆಹಲಿ ವಿಮಾನ ನಿಲ್ದಾಣಗಳನ್ನು ಖಾಸಗೀಕರಣಗೊಳಿಸಲು ಪ್ರಯತ್ನಿಸಿದ್ದು, ಚಿಲ್ಲರೆ ವ್ಯಾಪಾರದಲ್ಲಿ ಸಹ ವಿದೇಶೀ ನೇರ ಬಂಡವಾಳವನ್ನು ಆಹ್ವಾನಿಸಿದ್ದು – ಇವೆಲ್ಲವೂ ಯುಪಿಎ ಸರ್ಕಾರವು ತಮ್ಮ ಆರಂಭಿಕ ಪ್ರಕಟಣೆಯನ್ನು ಮರೆತು ವಿಶ್ವ ಬ್ಯಾಂಕಿನ ಆಜ್ಞೆಗಳನ್ನು ಕುರುಡಾಗಿ ಅನುಸರಿಸಲು ಮಾಡಿದ ಕೆಲವು ಹತಾಶ ಪ್ರಯತ್ನಗಳಾಗಿ ಕಂಡುಬಂದವು.

ಐಎಂಎಫ್, ಡಬ್ಲ್ಯುಟಿಒಗೆ ಸಂಬಂಧಿಸಿದಂತೆ, ಸರ್ಕಾರವು 2003 ರಲ್ಲಿ ಕ್ಯಾನ್‌ಕನ್ (ಮೆಕ್ಸಿಕೊ) ಸಭೆಯಲ್ಲಿ ಮತ್ತು ಯುನೈಟೆಡ್ ಫ್ರೇಮ್‌ವರ್ಕ್ ಅಗ್ರಿಮೆಂಟ್ 2004 ರಲ್ಲಿ ಜಿನೀವಾದಲ್ಲಿ ರೂಪಿಸಲಾದ ಐಕ್ಯ ಪ್ರತಿರೋಧದಿಂದ ಹಿಂದೆಸರಿಯಿತು. ಈ ಪ್ರತಿರೋಧದ ದುರ್ಬಲತೆಯು ಬಹಳ ಸ್ಪಷ್ಟವಾಗಿದೆ. ಅಭಿವೃದ್ಧಿ ಹೊಂದಿದ್ದ ಕೈಗಾರಿಕಾ ರಾಷ್ಟ್ರಗಳ ಒತ್ತಡಕ್ಕೆ ಸರ್ಕಾರ ಎಷ್ಟರ ಮಟ್ಟಿಗೆ ಶರಣಾಗುತ್ತದೆ ಎಂಬುದನ್ನು 2005 ಡಿಸೆಂಬರ್ 13 ಮತ್ತು 14 ರಂದು ಹಾಂಗಕಾಂಗ್‌ನಲ್ಲಿ ನಡೆದ ಮುಂದಿನ ಸಭೆಯಲ್ಲಿ ನೋಡಬೇಕಿತ್ತು. ಈಗಾಗಲೇ ಕಾರ್ಮಿಕ ಸಂಘಗಳು ಮತ್ತು ಎಡಪಂಥೀಯರು ಕ್ಯಾನ್‌ಕನ್‌ನ ಹಿಂದಿನ ನಿಲುವಿನ ಯಾವುದೇ ದುರ್ಬಲಗೊಳಿಸುವಿಕೆ ಅಥವಾ ಶರಣಾಗತಿಯ ವಿರುದ್ಧ ಸರ್ಕಾರದ ಮೇಲೆ ಒತ್ತಡ ಹೇರುತ್ತಿದ್ದರು.

ಕಾರ್ಮಿಕ-ವಿರೋಧಿ ಮನೋಭಾವ

ಕಾರ್ಮಿಕ ಹಕ್ಕಿನ ವಿಷಯದಲ್ಲಿ, ಸರ್ಕಾರಿ ನೌಕರರಿಗೆ ಮುಷ್ಕರ ಹಕ್ಕನ್ನು ನೀಡಲು ನಿರಾಕರಿಸುವುದು, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳಲ್ಲಿನ ಕಾರ್ಮಿಕರಂತಹ ಸಂಘಟಿತ ವಲಯದ 80% ರಷ್ಟು ಕಾರ್ಮಿಕ ಬಲವನ್ನು ವಾಸ್ತವಿಕವಾಗಿ ಕಸಿದುಕೊಳ್ಳಲು ಸಂಸತ್ತಿನಲ್ಲಿ ಎರಡು ಮಸೂದೆಗಳನ್ನು ಮಂಡಿಸಿದ್ದು, ಖಾಯಂ ನೇಮಕಾತಿಗಳ ಸ್ಥಾನದಲ್ಲಿ ಗುತ್ತಿಗೆ ಕಾರ್ಮಿಕರ ನೇಮಕದ ಬದಲಿ ನೀತಿ ಮತ್ತು ಅಮೇರಿಕಾದ ಮ್ಯಾಕಿನ್ಸೆ ಕ್ವಾರ್ಟರ್ಲಿ ಅವರೊಂದಿಗೆ ಪತ್ರಿಕಾ ಸಂದರ್ಶನದಲ್ಲಿ, ಕಾರ್ಮಿಕ ನೀತಿಯಲ್ಲಿ 'ಹಾಯರ್ ಅಂಡ್ ಫಾಯರ್' ಪರಿಚಯಿಸುವ ಮತ್ತು ಪೂರ್ಣ ಖಾಸಗೀಕರಣದ ಉದ್ದೇಶಕ್ಕೆ, ತಮ್ಮ ಸರ್ಕಾರದ ಸಮ್ಮಿಶ್ರ ಸ್ವಭಾವದಿಂದಾಗಿ ಅವರು ಎದುರಿಸುತ್ತಿರುವ ಅಡೆತಡೆಗಳು ಎಂದು ವಿಷಾದಿಸಿದ ಪ್ರಧಾನಿ ಮನಮೋಹನ ಸಿಂಗ್ ಮಾತಿನ ಕುರಿತ ಪತ್ರಿಕಾ ವರದಿ, ವಿಶ್ವ ಬಂಡವಾಳಶಾಹಿಯ 'ಟ್ರೇಡ್ ಯೂನಿಯನ್ ಮುಕ್ತ ಪ್ರಪಂಚ' ನೀತಿಗೆ ಅವರ ಸರ್ಕಾರ ಶರಣಾದುದರ ದೃಢೀಕರಣವಾಗಿತ್ತು. ಅದಕ್ಕಾಗಿಯೇ ಯುಪಿಎ ಸರ್ಕಾರವು ಸರ್ಕಾರಿ ನೌಕರರ ಮುಷ್ಕರದ-ಹಕ್ಕನ್ನು ಸಂಪೂರ್ಣವಾಗಿ ವಿರೋಧಿಸುತ್ತಿದ್ದುದು, ಮುಷ್ಕರ-ಹಕ್ಕಿನ ವಿಷಯವನ್ನು ಎತ್ತಿದ ಮಾನ್ಯ ಸ್ಪೀಕರ್ ಮತ್ತು ಕೆಲವು ಸಂಸತ್ ಸದಸ್ಯರಿಗೆ ಮುಷ್ಕರದ ಹಕ್ಕನ್ನು ಸರ್ಕಾರ ಸ್ವೀಕರಿಸಲು ಸಾಧ್ಯವಿಲ್ಲ ಅಥವಾ ಸರ್ಕಾರಿ ನೌಕರರಿಗೆ ಟ್ರೇಡ್ ಯೂನಿಯನ್ ಹಕ್ಕುಗಳನ್ನು ಖಾತರಿಪಡಿಸುವ ಸಂಬಂಧಿತ ಐಎಲ್‌ಒ ಸಮಾವೇಶಗಳನ್ನು ಅಂಗೀಕರಿಸಲು ಸರ್ಕಾರ ಸಿದ್ಧವಿಲ್ಲವೆಂದು ಯು.ಪಿ.ಎ. ಕಾರ್ಮಿಕ ಸಚಿವರು ನಾಚಿಕೆಯಿಲ್ಲದೆ ಬರೆದಿದ್ದ ಪತ್ರದಿಂದ ಇದು ಸಾಕಷ್ಟು ಸ್ಪಷ್ಟವಾಗಿತ್ತು.. ಇದು ಯುಪಿಎ ಸರ್ಕಾರದ ಅತ್ಯಂತ ನಾಚಿಕೆಗೇಡಿನ ಮತ್ತು ಕಾರ್ಮಿಕ ವಿರೋಧಿ ಮನೋಭಾವವಾಗಿತ್ತು

ಯುಪಿಎ ಸರ್ಕಾರದ ವರ್ತನೆ ಮತ್ತು ಕಾರ್ಯಕ್ಷಮತೆ ಎನ್‌ಡಿಎ ಸರ್ಕಾರದಂತೆ ಇತ್ತು ಎಂದು ಅರ್ಥವಲ್ಲ. ಸಿಎಂಪಿ ಎಡ ಕಾರ್ಯಕ್ರಮ ಅಥವಾ ಟ್ರೇಡ್ ಯೂನಿಯನ್ ಕಾರ್ಯಕ್ರಮವಲ್ಲ. ಇದು ಎಡ ಮತ್ತು ಕಾರ್ಮಿಕ ಸಂಘಗಳ ಕೆಲವು ದೃಷ್ಟಿಕೋನಗಳನ್ನು ಸರಿಹೊಂದಿಸಿದ ನಂತರ ಯುಪಿಎ ಸರ್ಕಾರದ ಅಂತಿಮ ಕಾರ್ಯಕ್ರಮವಾಗಿತ್ತು. ಆದರೆ ಸಿಎಂಪಿಯ ಚೌಕಟ್ಟಿನೊಳಗೆ ಸರಿಯಾದ ನೀತಿ ಅನುಷ್ಠಾನಕ್ಕಾಗಿ ಎಡ ಪಕ್ಷಗಳು ಮತ್ತು ಕಾರ್ಮಿಕ ಸಂಘಗಳು ಸರ್ಕಾರದ ಮೇಲೆ ನಿರಂತರ ಒತ್ತಡವನ್ನು ಕಾಯ್ದುಕೊಳ್ಳಬೇಕಾಗಿತ್ತು. ಸಿಎಂಪಿ ಒಂದು ಬಂಡವಾಳಶಾಹಿ ಸರ್ಕಾರದ ಕಾರ್ಯಕ್ರಮವಾಗಿದ್ದರೂ, ಯುಪಿಎ ಸರ್ಕಾರವು ಅದರ ಉಳಿವಿಗಾಗಿ ಎಡಪಂಥೀಯರ ಮೇಲೆ ಅವಲಂಬಿತವಾಗಿದ್ದುದರಿಂದ ಮತ್ತು ಎಡಪಂಥೀಯರು ಈ ಕಾರ್ಯಕ್ರಮಕ್ಕೆ ವಿಶಾಲವಾಗಿ ಸಮ್ಮತಿಸಿರುವುದರಿಂದ, ಅದರ ಸರಿಯಾದ ಅನುಷ್ಠಾನವು ಕಾರ್ಮಿಕ ವರ್ಗ ಮತ್ತು ಬಡವರಿಗೆ ಸಹಕಾರಿಯಾಗಬಹುದಿತ್ತು. ಉದಾಹರಣೆಗೆ, ಗ್ರಾಮೀಣ ಬಡವರಿಗೆ ಉದ್ಯೋಗ ಖಾತರಿ ಯೋಜನೆಗೆ ಸಿಎಂಪಿ ಭರವಸೆ ನೀಡಿತು. ಎಡಪಂಥೀಯರ ಒತ್ತಡಕ್ಕೆ ಮಣಿದ ಸರ್ಕಾರವು ಮಸೂದೆಯನ್ನು ರೂಪಿಸಿತು, ಆದರೆ ಅದು ಕೂಡ ಗಂಭೀರ ನ್ಯೂನತೆಗಳು ಮತ್ತು ದೌರ್ಬಲ್ಯಗಳಿಂದ ಕೂಡಿತ್ತು. ನಂತರ ಎಡಪಂಥೀಯರೊಂದಿಗಿನ ಸರಣಿ ಚರ್ಚೆಗಳ ನಂತರ ಮಸೂದೆ ಅಂತಿಮ ಆಕಾರಕ್ಕೆ ಬಂದಿತು ಮತ್ತು ನಿರಂತರ ಒತ್ತಡದಲ್ಲಿ, ಗ್ರಾಮೀಣ ಬಡವರಿಗೆ ಸ್ವಲ್ಪ ಪರಿಹಾರ ನೀಡುವ ಸಲುವಾಗಿ ಮಸೂದೆಯನ್ನು ಜಾರಿಗೆ ತರಲಾಯಿತು. ಆದರೆ ಸಿಎಂಪಿಯನ್ನು ಉಲ್ಲಂಘಿಸಿ, ಬಹಳ ಲಾಭದಾಯಕವಾದ ಸಾರ್ವಜನಿಕ ವಲಯದ ಉದ್ದಿಮೆ ಬಿ.ಎಚ್.ಇ.ಎಲ್. ಷೇರುಗಳನ್ನು ಮಾರಾಟ ಮಾಡಲು ಸರ್ಕಾರ ನಿರ್ಧಾರ ತೆಗೆದುಕೊಂಡಿತು, ಇದನ್ನು ನವರತ್ನಗಳಲ್ಲಿ ಒಂದು ಎಂದು ವರ್ಗೀಕರಿಸಲಾಗಿತ್ತು. ನವರತ್ನಗಳ ಹೂಡಿಕೆ-ಹಿಂತೆಗೆತಗಳನ್ನು ಎಡ ಮತ್ತು ಕಾರ್ಮಿಕ ಸಂಘಗಳು ಸಂಪೂರ್ಣವಾಗಿ ವಿರೋಧಿಸಿದ್ದರಿಂದ ಯುಪಿಎ ಮತ್ತು ಎಡಪಂಥೀಯರ ನಡುವೆ ಗಂಭೀರ ಸಂಘರ್ಷ ಪ್ರಾರಂಭವಾಯಿತು. ಒಂದು ಬಿಕ್ಕಟ್ಟು ದೀರ್ಘಕಾಲದ ವರೆಗೆ ಮುಂದುವರೆಯಿತು. ಎಡ ಮತ್ತು ಕಾರ್ಮಿಕ ಸಂಘಗಳು ಒತ್ತಡವನ್ನು ಮುಂದುವರಿಸಿದ್ದರಿಂದ, ಸರ್ಕಾರವು ಅಂತಿಮವಾಗಿ ಕೆಳಗಿಳಿದು ಬಿ.ಎಚ್.ಇ.ಎಲ್ ಶೇರು ಮಾರಾಟ ನಿರ್ಧಾರವನ್ನು ಕೈಬಿಡುವುದಾಗಿ ಭರವಸೆ ನೀಡಿತು, ಆದರೆ ಕೇಂದ್ರ ಸರ್ಕಾರದ ಆರೋಗ್ಯ ಯೋಜನೆಯನ್ನು (ಸಿ.ಜಿ.ಎಚ್.ಎಸ್.) ಖಾಸಗೀಕರಣಗೊಳಿಸಲು ಸರ್ಕಾರವು ನಿರ್ಧರಿಸಿತು.

ಪಿಂಚಣಿ ಖಾಸಗೀಕರಣ ಮಸೂದೆ ಸ್ಥಗಿತ

ನಂತರ ಪಿಂಚಣಿ ಖಾಸಗೀಕರಣ ಮಸೂದೆಯ ಮೇಲೆ, ಎಡ ಮತ್ತು ಕಾರ್ಮಿಕ ಸಂಘಗಳ, ತೀವ್ರ ವಿರೋಧದಿಂದಾಗಿ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಲು ಸಾಧ್ಯವಾಗಲಿಲ್ಲ. ಪಿಂಚಣಿ ಖಾಸಗೀಕರಣದ ಮಸೂದೆ ವಾಸ್ತವವಾಗಿ ಎನ್.ಡಿ.ಎ. ಆಡಳಿತದಲ್ಲಿ ಹುಟ್ಟಿಕೊಂಡಿತ್ತು, ಪಿಂಚಣಿ ಖಾಸಗೀಕರಣ ಯೋಜನೆಯನ್ನು ವಿರೋಧಿಸಲು 29 ಸೆಪ್ಟೆಂಬರ್ 2005 ದೇಶಾದ್ಯಂತ ಮುಷ್ಕರವನ್ನು ಆಯೋಜಿಸಲಾಯಿತು. ಮುಷ್ಕರಕ್ಕೆ ಡಬ್ಲ್ಯು. ಎಫ್.ಟಿ.ಯು. ಪ್ರಧಾನ ಕಾರ್ಯದರ್ಶಿಯಿಂದ ಶುಭಾಶಯಗಳು ಬಂದವು.

ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿಯ ಸಮಾವೇಶ – 9 ಜುಲೈ, 2005

ಜುಲೈ 9, 2005 ರಂದು ಮತ್ತೊಂದು ರಾಷ್ಟ್ರೀಯ ಸಮಾವೇಶವನ್ನು, ಕೇಂದ್ರ ಕಾರ್ಮಿಕ ಸಂಘಗಳು, ಅಖಿಲ ಭಾರತ ಒಕ್ಕೂಟಗಳನ್ನು ಒಳಗೊಂಡ ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿ ಆಯೋಜಿಸಿತು. ದೆಹಲಿಯ ಮಾವಲಂಕರ್ ಸಭಾಂಗಣದಲ್ಲಿ ಬ್ಯಾಂಕುಗಳು, ವಿಮೆ, ರೈಲ್ವೆ, ಟೆಲಿಕಾಂ, ಅಂಚೆ, ರಕ್ಷಣಾ, ಪೆಟ್ರೋಲಿಯಂ, ಕೇಂದ್ರ ಮತ್ತು ರಾಜ್ಯ ಸರ್ಕಾರ ಮತ್ತು ಇತರ ಕ್ಷೇತ್ರಗಳಲ್ಲಿನ ನೌಕರರು ಮತ್ತು ಕಾರ್ಮಿಕರ ಸಂಘಗಳು ಸೇರಿದವು.. ಈ ಸಮಾವೇಶವು ಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಮತ್ತು 2005 ಸೆಪ್ಟೆಂಬರ್ 29 ರಂದು ಸಾರ್ವತ್ರಿಕ ಮುಷ್ಕರವನ್ನು ಸರ್ವಾನುಮತದಿಂದ ಘೋಷಿಸಿತು.

ಸೆಪ್ಟೆಂಬರ್ 29 ರ ಸಾರ್ವತ್ರಿಕ ಮುಷ್ಕರ

ಯುಪಿಎ ಸರ್ಕಾರದ ಜನ ವಿರೋಧಿ ಆರ್ಥಿಕ ನೀತಿಗಳು ಮತ್ತು ಕಾರ್ಮಿಕ-ವಿರೋಧಿ ಕಾರ್ಮಿಕ ಸುಧಾರಣೆಗಳ ಬಗ್ಗೆ ತೀವ್ರ ಅಸಮ್ಮತಿಯನ್ನು ವ್ಯಕ್ತಪಡಿಸಲು ದೇಶಾದ್ಯಂತ ಲಕ್ಷಾಂತರ ಕಾರ್ಮಿಕರು, ನೌಕರರು ಮತ್ತು ಶಿಕ್ಷಕರು 2005 ರ ಸೆಪ್ಟೆಂಬರ್ 29 ರಂದು ಮುಷ್ಕರಕ್ಕೆ ಸೇರಿದರು. ಇದು ಬಂಡವಾಳಶಾಹಿ ಜಾಗತೀಕರಣದ ನೀತಿಗಳನ್ನು ಅಳವಡಿಸಿಕೊಂಡ ನಂತರ, ದೇಶ ಕಂಡ ಅತ್ಯಂತ ದೊಡ್ಡ ಪ್ರತಿಭಟನಾ ಕ್ರಮವಾಗಿತ್ತು. ಕರ್ನಾಟಕ, ಆಂಧ್ರಪ್ರದೇಶ, ಮಧ್ಯಪ್ರದೇಶ, ಹರಿಯಾಣ ಮತ್ತು ಕೇಂದ್ರಾಡಳಿತ ಪ್ರದೇಶವಾದ ಚಂಡೀಗಡ ಸೇರಿದಂತೆ ಅನೇಕ ರಾಜ್ಯ ಸರ್ಕಾರಗಳು ಮುಷ್ಕರಕ್ಕೆ ಸೇರ್ಪಡೆಗೊಳ್ಳದಂತೆ ನೌಕರರಿಗೆ ಎಚ್ಚರಿಕೆ ನೀಡಿದ್ದವು, ಆದರೆ ನೌಕರರು ಮತ್ತು ಕಾರ್ಮಿಕರು ಮುಷ್ಕರವನ್ನು ಯಶಸ್ವಿಗೊಳಿಸಿದರು. ಮುಷ್ಕರವು ಮಹಾರಾಷ್ಟ್ರ, ಕೇರಳ, ತ್ರಿಪುರ, ಪಶ್ಚಿಮ ಬಂಗಾಳ, ಉತ್ತರಪ್ರದೇಶ, ಮಧ್ಯಪ್ರದೇಶ, ಹರಿಯಾಣ, ಛತ್ತೀಸ್‌ಗಡದಲ್ಲಿ ಸಂಪೂರ್ಣ ಯಶಸ್ಸನ್ನು ಕಂಡಿತು; ಕಾಶ್ಮೀರ, ಬಿಹಾರ, ಜಾರ್ಖಂಡ್, ಕರ್ನಾಟಕ, ಅಸ್ಸಾಂ, ಆಂಧ್ರಪ್ರದೇಶ, ಪಂಜಾಬ್, ಒರಿಸ್ಸಾದಲ್ಲಿ ಭಾಗಶಃ, ತಮಿಳುನಾಡು ಮತ್ತು ಮಣಿಪುರ, ಉತ್ತರಾಂಚಲದಲ್ಲಿ ಅಲ್ಪ, ರಾಜಸ್ಥಾನ ಮತ್ತು ನಾಗಾಲ್ಯಾಂಡ್‌ನಲ್ಲಿ ಧರಣಿ, ಅರುಣಾಚಲ ಪ್ರದೇಶ, ಮಿಜೊರಾಮ್ ಪ್ರದೇಶದಲ್ಲಿ ಕೆಲವು ಸೌಹಾರ್ದ ಕಾರ್ಯಕ್ರಮಗಳು ಮತ್ತು ಪ್ರದರ್ಶನಗಳು ನಡೆದವು. ಮುಷ್ಕರ ದಿನದಂದು ದೇಶಾದ್ಯಂತ ರ‍್ಯಾಲಿಗಳು ಮತ್ತು ಪ್ರತಿಭಟನಾ ಪ್ರದರ್ಶನಗಳು ನಡೆದವು. ಕೈಗಾರಿಕಾ ಕೇಂದ್ರಗಳಲ್ಲಿ ವಿಶೇಷವಾಗಿ ಹರಿಯಾಣ, ಪಂಜಾಬ್, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಜಾರ್ಖಂಡ್, ಮಹಾರಾಷ್ಟ್ರ ಮತ್ತು ರಾಜಸ್ಥಾನಗಳಲ್ಲಿ ಮುಷ್ಕರದ ಪರಿಣಾಮ ಕಂಡುಬಂದಿತು. ಕೋಲ್ಕತಾ, ಹಲ್ದಿಯಾ, ಪಾರದೀಪ್, ಟುಟಿಕೋರಿನ್, ವಿಶಾಖಪಟ್ಟಣಂ ಮತ್ತು ಮುಂಬೈ ಬಂದರುಗಳಲ್ಲಿ ಮುಷ್ಕರ ಯಶಸ್ವಿಯಾಯಿತು. ಮುಷ್ಕರವು ದೇಶಾದ್ಯಂತ ವಿಮೆ ಮತ್ತು ಬ್ಯಾಂಕಿಂಗ್ ಕ್ಷೇತ್ರಗಳು, ತೈಲ ಮತ್ತು ದೂರಸಂಪರ್ಕ ಕ್ಷೇತ್ರಗಳಲ್ಲಿ ಸಂಪೂರ್ಣವಾಗಿ ಪರಿಣಾಮ ಬೀರಿತು. ಆರು ಲಕ್ಷ ಕಲ್ಲಿದ್ದಲು ಗಣಿಗಾರಿಕೆ ಕಾರ್ಮಿಕರಲ್ಲಿ 70% ಜನರು ಕೆಲಸದಿಂದ ಹೊರನಡೆದರು. ರಕ್ಷಣಾ ಕೈಗಾರಿಕೆಗಳಲ್ಲಿನ ಉತ್ಪಾದನೆಯು ಬಹುತೇಕ ದುರ್ಬಲವಾಯಿತು. ದೆಹಲಿ ಮತ್ತು ಮುಂಬೈ ವಿಮಾನ ನಿಲ್ದಾಣಗಳನ್ನು ಖಾಸಗೀಕರಣಗೊಳಿಸುವುದನ್ನು ವಿರೋಧಿಸಿ ಭಾರತದ ವಿಮಾನ ನಿಲ್ದಾಣ ಪ್ರಾಧಿಕಾರದ ಅಡಿಯಲ್ಲಿ 20,000 ವಿಮಾನ ನಿಲ್ದಾಣದ ಕೆಲಸಗಾರರು ಮುಷ್ಕರ ಕೈಗೊಂಡಿದ್ದರಿಂದ ಎಲ್ಲಾ ದೇಶೀಯ ವಿಮಾನಯಾನ

ಪುಟ 14 ನೋಡಿ

ಸರಕಾರದ ವೈಫಲ್ಯವನ್ನು ಬಿಚ್ಚಿಟ್ಟ ಸಂಪುಟ 'ಸರ್ಜರಿ'?

ಗುರುರಾಜ ದೇಸಾಯಿ

ಕೇಂದ್ರ ಸಚಿವ ಸಂಪುಟಕ್ಕೆ ಭಾರಿ ಸರ್ಜರಿ ಮಾಡಲಾಗಿದೆ. 43 ಜನ ಸಂಸದರಿಗೆ ಮಂತ್ರಿಗಳಾಗುವ ಚಾನ್ಸ್ ಸಿಕ್ಕಿದರೆ, 12 ಜನ ಸಚಿವರ ತಲೆದಂಡವಾಗಿದೆ. ಆ 12 ಖಾತೆಗಳು ಮಹತ್ವದ್ದಾಗಿದ್ದ ಖಾತೆಗಳು, ಸಚಿವರ ತಲೆದಂಡ ಮೋದಿ ಸರಕಾರದ ವಿಫಲತೆಯನ್ನು ತೋರಿಸುತ್ತಿದೆಯಾ? ಪ್ರಕಾಶ್ ಜಾವೆಡ್ಕರ್, ರವಿಶಂಕರ್ ಪ್ರಸಾದ್, ಹರ್ಷವರ್ಧನ್ ತಲೆದಂಡ ಏನನ್ನೂ ಸೂಚಿಸುತ್ತಿದೆ? ಎನ್ನುವ ಪ್ರಶ್ನೆಗಳು ಎದ್ದಿವೆ.

ಸಚಿವರ ಕಾರ್ಯನಿರ್ವಹಣೆ, ಸಾಮಾಜಿಕ ನ್ಯಾಯ, ಪ್ರಾದೇಶಿಕ ಸಮತೋಲನ, ಜಾತಿವಾರು ಆದ್ಯತೆ, ಯುವಶಕ್ತಿಗೆ ಮನ್ನಣೆಯಂಥ ಹತ್ತು ಹಲವು ಆಶೋತ್ತರಗಳನ್ನು ಬಲಗೊಳಿಸುತ್ತ ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಸಂಕಲ್ಪದ ರಾಜಮಾರ್ಗದಲ್ಲಿ ಸರ್ಕಾರವನ್ನು ಮುನ್ನಡೆಸುವ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಬುಧವಾರ ದೊಡ್ಡ ಪ್ರಮಾಣದಲ್ಲಿ ಸಂಪುಟ ವಿಸ್ತರಣೆ ಮಾಡಿದ್ದಾರೆ ಎಂದು ದೇಶದ ಬಹುತೇಕ ಮಾಧ್ಯಮಗಳು ವರದಿಯನ್ನು ಮಾಡಿವೆ. ಆ ಮೂಲಕ ಮೋದಿ ಸರಕಾರದ ವೈಫಲ್ಯಗಳನ್ನು ಮತ್ತೆ ಮರೆಮಾಚುವ ಕೆಲಸಕ್ಕೆ ಕೇಂದ್ರ ಸರಕಾರದ ಕೃಪಾಪೋಷಿತ ಮಾಧ್ಯಮಗಳು ಮುಂದಾಗಿವೆ.

12 ಜನ ಸಚಿವರ ತಲೆಡಂಡಕ್ಕೆ ಅವರ ಕಾರ್ಯಕ್ಷಮತೆ ಸರಿಯಾಗಿ ಇರಲಿಲ್ಲ, ಖಾತೆಯನ್ನು ಸರಿಯಾಗಿ ನಿರ್ವಹಣೆ ಮಾಡಲಿಲ್ಲ, ಆ ನ್ಯೂನ್ಯತೆಗಳನ್ನು ಸರಿ ಮಾಡುವುದಕ್ಕಾಗಿ ಮೇಜರ್ ಸರ್ಜರಿ ಮಾಡಲಾಗಿದೆ ಎಂದು ಕೇಂದ್ರ ಸರಕಾರ ತನ್ನ ನಿಲುವನ್ನು ಸಮರ್ಥಿಸಿಕೊಳ್ಳುತ್ತಿದೆ.

ಮುಖ್ಯವಾಗಿ ಆರೋಗ್ಯ, ಶಿಕ್ಷಣ, ದೂರಸಂಪರ್ಕ, ಮಾಹಿತಿ ತಂತ್ರಜ್ಞಾನ ಹಾಗೂ ವಾರ್ತಾ ಮತ್ತು ಪ್ರಸಾರದಂತಹ ಮಹತ್ವದ ಖಾತೆಗಳನ್ನು ನಿಭಾಯಿಸುತ್ತಿದ್ದವರ ತಲೆದಂಡವಾಗಿದೆ. ಹೊರದಬ್ಬಿದ್ದು ಸರಿ, ಕಾರ್ಯಕ್ಷಮತೆಯೇ ಮುಖ್ಯವಾಗಿದ್ದರೆ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಇದು ಯಾಕೆ ಅನ್ವಯವಾಗಿಲ್ಲ ಎಂದು ರಾಜಕೀಯ ವಲಯದಲ್ಲಿ ಕೇಳಿ ಬರುತ್ತಿದೆ.

ದೂರಸಂಪರ್ಕ, ಮಾಹಿತಿ ತಂತ್ರಜ್ಞಾನ, ಕಾನೂನು ಮತ್ತು ನ್ಯಾಯ ಖಾತೆ ಸಚಿವರಾಗಿದ್ದ ರವಿಶಂಕರ್ ಪ್ರಸಾದ್, ಸಾಮಾಜಿಕ ಜಾಲತಾಣಗಳಾದ ಟ್ವಿಟರ್, ಫೇಸ್‌ಬುಕ್, ವಾಟ್ಸ್ ಆಯಪ್ ಕೇಂದ್ರ ಸರಕಾರ ಜಾರಿಗೊಳಿಸಿದ ಮಾಹಿತಿ ತಂತ್ರಜ್ಞಾನ ನಿಯಮಗಳನ್ನು ಅನುಷ್ಠಾನಗೊಳಿಸಬೇಕು ಎಂದು ಖಡಕ್ ಆಗಿ ಹೇಳಿದ್ದರು. ಈ ಸಂಘರ್ಷವೇ ಅವರ ತಲೆದಂಡಕ್ಕೆ ಕಾರಣವಾಯ್ತಾ? ಅಥವಾ ಬಿಹಾರದಲ್ಲಿ ಮುಂದೆ ಅವರನ್ನು ಸಿಎಂ ಮಾಡುವ ಲೆಕ್ಕಾಚಾರ ಏನಾದರೂ ಇದೆಯಾ ಕಾದು ನೋಡಬೇಕು.

ವಾರ್ತಾ ಮತ್ತು ಪ್ರಚಾರ, ಅರಣ್ಯ ಮತ್ತು ಪರಿಸರ, ಹವಾಮಾನ ಬದಲಾವಣೆ, ಸಾರ್ವಜನಿಕ ಉದ್ದಿಮೆ ಮತ್ತು ಭಾರಿ ಕೈಗಾರಿಕೆಗಳ ಸಚಿವರಾಗಿದ್ದ ಪ್ರಕಾಶ್ ಜಾಬ್ಡೇಕರ್ ನಿರ್ಗಮನ ಅಚ್ಚರಿ ತಂದಿದೆ. ಸಂಪುಟ ಸಭೆಯ ಬಳಿಕ, ಅಲ್ಲಿ ಕೈಗೊಂಡ ನಿರ್ಧಾರಗಳನ್ನು ಅವರೇ ಹೆಚ್ಚಿನ ಸಂದರ್ಭದಲ್ಲಿ ಪ್ರಕಟಿಸಿದ್ದರು.

ಕೋವಿಡ್ ನಿರ್ವಹಣಯಲ್ಲಿ ಹಿನ್ನಡೆಯಾಗಿದೆ ಎಂದು ಡಾ. ಹರ್ಷವರ್ಧನ್ ರಾಜೀನಾಮೆ ಪಡೆಯುವ ಮೂಲಕ ಸರಕಾರವೇ ಈಗ ಬಹಿರಂಗವಾಗಿ ಒಪ್ಪಿಕೊಂಡಿದೆ.

ಇದರ ಜೊತೆಯಲ್ಲಿ ಕಾಶ್ಮೀರಕ್ಕೆ ಇದ್ದ ಸ್ಥಾನವನ್ನು ಕಿತ್ತು ಹಾಕಿ ಅದರಲ್ಲೂ ವೈಫಲ್ಯ ಅನುಭವಿಸಿದೆ. ಅದಕ್ಕೆ ತೇಪೆ ಹಚ್ಚುವುದಕ್ಕಾಗಿ ಆ ರಾಜ್ಯಗಳ ಪ್ರಮುಖ ಪಕ್ಷಗಳ ಸಭೆಯನ್ನು ಕೂಡ ನಡೆಸಲಾಗಿತ್ತು. ಶಿಕ್ಷಣದ ಟ್ರ್ಯಾಕ್ ಆಗಲೆ ತಪ್ಪಿ ಹೋಗಿದೆ. ವರ್ಷಕ್ಕೆರಡು ಕೋಟಿ ಉದ್ಯೋಗ ಸೃಷ್ಟಿ ಮಾಡುವುದಅಗಿ ಹೇಳಿ 20 ಸಾವಿರ ಹುದ್ದೆಗಳನ್ನೂ ಸೃಷ್ಟಿಸದೆ ನಿರುದ್ಯೋಗದ ಸಮಸ್ಯೆ ಹೆಚ್ಚಾಗುವಂತೆ ಮಾಡಲಾಗಿದೆ. ಹೀಗೆ ಅನೇಕ ಕ್ಷೇತ್ರಗಳಲ್ಲಿ ಬಿಜೆಪಿ ವೈಫಲ್ಯ ಕಂಡಿದೆ ಎಂಬುದು ಸಂಪುಟ ಸರ್ಜರಿಯಿಂದ ಹೊರಬಿದ್ದಿದೆ.

ಕಾರ್ಯಕ್ಷಮತೆಯು ಬಗ್ಗೆ ಹೇಳುವುದಾದರೆ, ಸಂಪುಟ ಭರ್ತಿ ಮಾಡಿ ಎಲ್ಲರಿಗೂ ಕೆಲಸ ಹಂಚಬೇಕಿದ್ದ ಪ್ರಧಾನ ಎರಡುವರ್ಷ ಸುಮ್ಮನಿದ್ದುದೇಕೆ ? ' ದೇಶದ ಅಭಿವೃದ್ಧಿಯ ಬಗ್ಗೆ ಕಾಳಜಿ ಇದ್ದದ್ದೆ ಆದಲ್ಲಿ, ಆರಂಭದಲ್ಲಿಯೇ ಯಾಕೆ ಸಂಪುಟವನ್ನು ಭರ್ತಿ ಮಾಡಲಿಲ್ಲ? ಬರೋಬ್ಬರಿ ಅರ್ಧದಷ್ಟು ಸಚಿವ ಸ್ಥಾನಗಳು ಖಾಲಿ ಬಿದ್ದಿದ್ದವು. ಇದ್ದ ಸಚಿವರು ನಾಲ್ಕಾರು ಖಾತೆಗಳನ್ನು ನಿಭಾಯಿಸುತ್ತಿದ್ದರು, ಎರಡು ವರ್ಷಗಳಿಂದ ಕಾಣದ ದೋಷವನ್ನು ಮೋದಿಯವರು ಈಗ ಪತ್ತೆ ಹಚ್ಚಿ ಹೊರದಬ್ಬಿದ್ದಾರೆ. ಇದರಲ್ಲಿ ವೈಫಲ್ಯ ಕಾಣಲು ಇವರುಗಳಷ್ಟೆ ಕಾರಣವೇ ಎನ್ನುವ ಪ್ರಶ್ನೆ ಎದ್ದಿದೆ.

ಸೋತು ಸುಣ್ಣಾಗಿರುವ ಸರಕಾರ ಈಗ ಮೇಜರ್ ಸರ್ಜರಿ ಹೆಸರಲ್ಲಿ ದೇಶವನ್ನು ಬಲಪಡಿಸುವ ಯೋಜನೆಯನ್ನು ಮುಂದಿಟ್ಟಿದೆ. 7 ವರ್ಷದ ಕಾರ್ಯವಿಧಾನಗಳನ್ನು ಗಮನಿಸಿದರೆ ಇದನ್ನು ನಂಬಬಹುದೆ ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ವೈಫಲ್ಯಗಳನ್ನು ಮರೆ ಮಾಚಿಕೊಳ್ಳುವುದಕ್ಕಾಗಿ ಪ್ರಾದೇಶಿಕ ಸಮಾನತೆ, ಸಾಮಾಜಿಕ ನ್ಯಾಯ ಎಂಬ ಅಂಶಗಳನ್ನು ತೇಲಿಬಿಡಲಾಗಿದೆಯಷ್ಟೇ.

ಮುಂಬರುವ ಚುನಾವಣೆಗಳಲ್ಲಿ ಬಿಜೆಪಿ ಗೆಲುವನ್ನು ಸಾಧಿಸಬೇಕು ಹಾಗಾಗಿ ಆ ಕಾರಣಕ್ಕಾಗಿಯೇ ಚುನಾವಣೆಗಳನ್ನು ಕೇಂದ್ರಿಕರಿಸಿ ಸಂಪುಟಕ್ಕೆ ಆದ್ಯತೆಯನ್ನು ನೀಡಲಾಗಿದೆ. ಆ ಕಾರಣಕ್ಕಾಗಿಯೆ ಉತ್ತರ ಪ್ರದೇಶಕ್ಕೆ ಹೆಚ್ಚಿನ ಸ್ಥಾನವನ್ನು ನೀಡಲಾಗಿದೆ. ಈಗ ಸೇರ್ಪಡೆಗೊಂಡ ಸಚಿವರನ್ನೂ ಸೇರಿ ಒಟ್ಟು 14 ಸ್ಥಾನಗಳನ್ನು ಉತ್ತರ ಪ್ರದೇಶಕ್ಕೆ ನೀಡಲಾಗಿದೆ. ಇನ್ನೇನು ಕೆಲವೇ ತಿಂಗಳಲ್ಲಿ ಉತ್ತರ ಪ್ರದೇಶಕ್ಕೆ ಚುನಾವಣೆ ನಡೆಯಲಿದೆ. ದೆಹಲಿಯನ್ನು ಗೆಲ್ಲಬೇಕು ಅಂದ್ರೆ ಯುಪಿ ಯನ್ನು ಮೊದಲು ಗೆಲ್ಲಬೇಕು ಎನ್ನುವುದು ರಾಜಕೀಯ ಲೆಕ್ಕಾಚಾರ . ಯಾಕೆ ಅಂದ್ರೆ ಆಡಳಿತ ಪಕ್ಷಕ್ಕೆ ಅದು ಚಿನ್ನದ ಗಣಿ ಇದ್ದಂತೆ.ಅತೀ ಹೆಚ್ಚು ಲೋಕಸಭಾ ಹಾಗೂ ವಿಧಾನಸಭಾ ಸೀಟುಗಳಿರುವ ರಾಜ್ಯವಾಗಿದ್ದರಿಂದ ಅಲ್ಲಿ ಗೆಲ್ಲಲೇಬೇಕು ಎಂಬ ತಂತ್ರ ಅಡಗಿರುವುದು ಗುಟ್ಟಿನ ವಿಚಾರವಂತೂ ಅಲ್ಲ.

ಅದೇ ರೀತಿ ಗುಜರಾತ್ ಗೆ 14 ಸ್ಥಾನ ನೀಡಲಾಗಿದೆ. ಮುಂದಿನ ವರ್ಷ ಗುಜರಾತಿನಲ್ಲೂ ಚುನಾವಣೆ ನಡೆಯಲಿದೆ, ತ್ರಿಪುರಾದಲ್ಲೂ ನಡೆಯಲಿದೆ ಆ ಕಾರಣಕ್ಕಾಗಿ ಅಲ್ಲಿ ಸಚಿವ ಸ್ಥಾನವನ್ನು ನೀಡಿದ್ದು ಬಿಟ್ಟರೆ ಆ ಪ್ರದೇಶಗಳ ಅಭಿವೃದ್ಧಿಯ ಕಾಳಜಿ ಇಲ್ಲ ಎನ್ನುವುದು ಗೊತ್ತಾಗುತ್ತದೆ. ಇನ್ನು, ಮಿತ್ರಪಕ್ಷಗಳ ವಿಚಾರಕ್ಕೆ ಬಂದರೆ, ಅನೇಕ ಕಡೆಗಳಲ್ಲಿ ಬಿಜೆಪಿ ಸಖ್ಯವನ್ನು ತೊರೆಯುತ್ತಿವೆ ಅದನ್ನು ಸರಿಪಡಿಸಲು ರಾಜೀ ಸೂತ್ರವನ್ನು ಅಳವಡಿಸಲಾಗಿದೆ. ಪಶ್ಚಿಮ ಬಂಗಾಲದಲ್ಲಿ ಸೋಲುಂಡ ನಂತರ ಅಸನ್ ಸೋಲ್ ಸಂಸದ ಬಾಬು ಸುಪ್ರಿಯೋ ಅವರನ್ನು ಸಚಿವ ಸ್ಥಾನದಿಂದ ತೆಗೆದು ಹಾಕಲಾಗಿದೆ.

ಇನ್ನೂ ಸಾಮಾಜಿಕ ನ್ಯಾಯ, ಸಮಾನತೆ ಎಂಬುದು ಬಿಜೆಪಿಗೂ ರುಚಿಸದ ಪದಗಳು. ಪಕ್ಷವನ್ನು ಬಲಪಡಿಸುವ ನಿಟ್ಟಿನಲ್ಲಿ ಈ ತಂತ್ರ ಬಳಸಲಾಗಿದೆಯೇ ಹೊರತು ಆ ಸಮುದಾಯಗಳ ಕಾಳಜಿಯಿಂದ ಇಲ್ಲ. ಉತ್ತರ ಪ್ರದೇಶದಲ್ಲಿ ದಲಿತ ಸಮುದಾಯದ ಸಂಖ್ಯೆ ಹೆಚ್ಚಾಗಿದೆ. ಕರ್ನಾಟಕದಲ್ಲಿ ದಲಿತ ಮುಖ್ಯಮಂತ್ರಿ ಚರ್ಚೆ ನಡೆಯುತ್ತಿದೆ. ಕಾಂಗ್ರೆಸ್ ದಲಿತರ ಮತಗಳನ್ನು ಪಡೆದರೂ ಅವರಿಗೆ ಅವಕಾಶ ಕೊಡುತ್ತಿಲ್ಲ, ನಾವು ಆದ್ಯತೆ ಕೊಟ್ಟಿದ್ದೇವೆ. ಬಿಜೆಪಿ ದಲಿತರ ಪರ ಇದೆ ಎಂಬ ಚರ್ಚೆಯನ್ನು ಈಗ ತೇಲಿಬಿಟ್ಟಿದೆ.



ಹೊಸ ಸಂಪುಟ–ವ್ಯಂಗ್ಯಚಿತ್ರ: ಸುಭಾನಿ, ಡೆಕ್ಕನ್ ಕ್ರಾನಿಕಲ್

ಸಂಪುಟ ಸರ್ಜರಿ ನಡೆದು 'ಸಹಕಾರ' ಎನ್ನುವ ಹೊಸ ಇಲಾಖೆ ಆರಂಭಿಲಾಗಿದೆ. ಇದರ ಹೊಣೆಯನ್ನು ಗೃಹಸಚಿವ ಅಮಿತ್ ಶಾ ಅವರಿಗೆ ನೀಡಲಾಗಿದೆ. ಈ ಖಾತೆಯನ್ನು ಸೃಷ್ಟಿ ಮಾಡಿದ್ದಕ್ಕೆ ಸಾರ್ವಜನಿಕ ವಲಯದಲ್ಲಿ ವಿರೋಧ ವ್ಯಕ್ತವಾಗುತ್ತಿದೆ. ಏಕೆಂದರೆ, ಸಂವಿಧಾನದ ಪ್ರಕಾರ ಸಹಕಾರ ಕ್ಷೇತ್ರ ರಾಜ್ಯ ಪಟ್ಟಿಯಲ್ಲಿರುವ ವಿಷಯ. ಇದರಲ್ಲಿ ಮೂಗು ತೂರಿಸಲು ಕೇಂದ್ರ ಸರಕಾರಕ್ಕೆ ಯಾವುದೇ ಅಧಿಕಾರವಿಲ್ಲ. ಸಂವಿಧಾನದ 7ನೇ ಪರಿಚ್ಛೇದ ಇದರ ಬಗ್ಗೆ ವಿಸ್ತ್ರತವಾಗಿ ಹೇಳಿದೆ. ಇದು ಗೊತ್ತಿದ್ದೂ, ಸಹಕಾರ ಇಲಾಖೆಯನ್ನು ಆರಂಭಿಸಿದ್ದಾರೆಂದರೆ ಕೇಂದ್ರ ಸರಕಾರದ ಬಳಿ ಎರಡು ಉದ್ದೇಶಗಳಿವೆ.

ಮೊದಲನೆಯದು ರಾಜ್ಯ ಸರಕಾರಗಳ ಅಧಿಕಾರವನ್ನು ಮೊಟಕುಗೊಳಿಸಿ ಎಲ್ಲವನ್ನೂ ಕೇಂದ್ರದ ಕಪಿಮುಷ್ಟಿಯಲ್ಲಿ ತರುವುದು ಹಾಗೂ ಕೇಂದ್ರಿಕೃತ ವ್ಯವಸ್ಥೆಯನ್ನು ಹೇರುವುದು. ಎರಡನೆಯದು ಇನ್ನೂ ಭಯಂಕರ. ಈಗಾಗಲೇ ರಾಷ್ಟ್ರೀಕೃತ ಬ್ಯಾಂಕುಗಳನ್ನು ಹಾಗೂ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ತಿಂದು ತೇಗಿದಂತೆ, ಸಹಕಾರಿ ಬ್ಯಾಂಕುಗಳನ್ನೂ ಮುಗಿಸುವುದು ಹಾಗೂ ಅಲ್ಲಿನ ಹಣಕ್ಕೆ ಕನ್ನ ಹಾಕುವುದು. ಈಗಾಗಲೇ ಜಿಎಸ್‌ಟಿ ಮೂಲಕ ರಾಜ್ಯದ ತೆರಿಗೆ ಹಕ್ಕನ್ನೇ ಕಸಿದುಕೊಂಡಾಗಿದೆ. ಕೃಷಿ ಕಾಯಿದೆಗಳ ಮೂಲಕ ರಾಜ್ಯಗಳ ವಿಷಯವಾದ ಕೃಷಿಯಲ್ಲೂ ಕೈಹಾಕಿದೆ, ಶಿಕ್ಷಣ ಕ್ಷೇತ್ರಕ್ಕೂ ಕೈ ಹಾಕಿದೆ, ಇನ್ನೂ ರಾಜ್ಯಗಳ ಬಳಿ ಉಳಿದಿರುವ ಕೆಲ ಸಂಪನ್ಮೂಲ, ಹಕ್ಕುಗಳನ್ನೂ ಕಸಿದು, ರಾಜ್ಯಗಳನ್ನು ಸಂಪೂರ್ಣವಾಗಿ ಕೇಂದ್ರ ಸರಕಾರದ ಮೇಲೆ ಅವಲಂಬನೆಯಾಗುವಂತೆ ಮಾಡಿ, ಹಂತ–ಹಂತವಾಗಿ ಒಕ್ಕೂಟ ವ್ಯವಸ್ಥೆಯನ್ನೇ ನಿರ್ಮೂಲನಗೊಳಿಸುವುದು ಬಿಜೆಪಿ ಉದ್ದೇಶವಾಗಿದೆ ಎಂದು ರಾಜಕೀಯ ತಜ್ಞರು ಆರೋಪಿಸುತ್ತಿದ್ದಾರೆ.

ಕರ್ನಾಟಕದ ವಿಚಾರಕ್ಕೆ ಬರುವುದಾದರೆ, ಕೇಂದ್ರ ಸಂಪುಟ ಪುನಾರಚನೆ ವೇಳೆ ರಾಜ್ಯದಲ್ಲಿ ಇದೇ ಮೊದಲ ಬಾರಿ ಮಧ್ಯ ಕರ್ನಾಟಕ, ಮುಂಬೈ ಕರ್ನಾಟಕ ಕಲ್ಯಾಣ ಕರ್ನಾಟಕ, ಕರಾವಳಿ ಕರ್ನಾಟಕಕ್ಕೂ ಪ್ರಾಶಸ್ತ್ಯ ಸಿಕ್ಕಿದೆ. ಪ್ರಹ್ಲಾದ್ ಜೋಶಿ ಹಾಗೂ ರಾಜ್ಯದಿಂದ ರಾಜ್ಯಸಭೆಗೆ ಆಯ್ಕೆಯಾಗಿರುವ ನಿರ್ಮಲಾ ಸೀತಾರಾಮನ್ ಸೇರಿ ಇದೀಗ ರಾಜ್ಯದ ಆರು ಜನರಿಗೆ ಮೋದಿ ಟೀಮ್ನಲ್ಲಿ ಸ್ಥಾನ ಸಿಕ್ಕಿದೆ. ಈಗ ಎ. ನಾರಾಯಣಸ್ವಾಮಿ, ಶೋಭಾ ಕರಂದ್ಲಾಜೆ, ರಾಜೀವ್ ಚಂದ್ರಶೇಖರ್, ಭಗವಂತ ಖೂಬಾ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಸದಾನಂದಗೌಡ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಅಂದ್ರೆ ಹೈಕಮಾಂಡ್ ಅವರಿಗೆ ರಾಜೀನಾಮೆ ಸಲ್ಲಿಸುವಂತೆ ಸೂಚಿಸಿತ್ತು ಹಾಗಾಗಿ ಅವರು ರಾಜೀನಾಮೆ ಸಲ್ಲಿಸಿದ್ದಾರೆ.


ಸಚಿವರಾಗಿ ಅವರ ಕಾರ್ಯನಿರ್ವಹಣೆ ಸರಿಯಾಗಿ ಇರಲಿಲ್ಲ ಎಂಬುದಕ್ಕಿಂತ ಅಶ್ಲೀಲ ಸಿಡಿ ಹಾಗೂ ಕರ್ನಾಟಕದ ನಾಯಕತ್ವ ಬದಲಾವಣೆಯ ತೆರೆಯ ಹಿಂದೆ ಇವರು ಇದ್ದದ್ದು ಕಾರಣ ಎಂದು ಬಿಜೆಪಿಯಲ್ಲಿ ಕೇಳಿ ಬರುತ್ತಿದೆ. ಆ ಕಾರಣಕ್ಕಾಗಿಯೇ ಒಕ್ಕಲಿಗ ಸಮುದಾಯಕ್ಕೆ ಅನ್ಯಾಯವಾಗದಂತೆ ಉಡಪಿ ಚಿಕ್ಕಮಗಳೂರು ಸಂಸದೆ ಶೋಭಾ ಕರಂದ್ಲಾಜೆಗೆ ಸಚಿವ ಸ್ಥಾನವನ್ನು ನೀಡಲಾಗಿದೆ. ಶೋಭಾ ಕರಂದ್ಲಾಜೆ ಯಡಿಯೂರಪ್ಪ ಬಣದಲ್ಲಿ ಗುರುತಿಸಿಕೊಂಡವರು, ಅವರ ಗರಡಿಯಲ್ಲಿ ಬೆಳೆದಂತವರು ಯಡಿಯೂರಪ್ಪ ಬಣದ ಶೋಭಾರವರಿಗೆ ಸಚಿವ ಸ್ಥಾನ ಸಿಕ್ಕಿದ್ದರಿಂದ ಯಡಿಯೂರಪ್ಪ ಸಿಎಂ ಸ್ಥಾನದಿಂದ ಕೆಳಗಿಳಿಬಹುದು ಎಂಬ ಚರ್ಚೆಗಳು ಕೇಳಿ ಬರುತ್ತಿವೆ. ಮುರಗೇಶ್ ನಿರಾಣಿ ಕೂಡ ದೆಹಲಿಗೆ ಹಾರಿದ್ದು ಕುತೂಹಲ ಮೂಡಿಸಿದೆ.

ರಾಜ್ಯದಲ್ಲಿ ನಾಯಕತ್ವ ಬದಲಾವಣೆ ವಿಚಾರ ಚರ್ಚೆಯಾಗುತ್ತಿದಂತೆ, ದಲಿತ ಮುಖ್ಯಮಂತ್ರಿ ವಿಚಾರ ಚರ್ಚೆಗೆ ಬಂದಿದೆ. ಆ ಕಾರಣಕ್ಕಾಗಿ ತಾನು ದಲಿತರ ಪರ ಎನ್ನುವದನ್ನು ತೋರಿಸಿಕೊಳ್ಳುವುದಕ್ಕಾಗಿ ಚಿತ್ರದುರ್ಗದ ಸಂಸದ ಎ.ನಾರಾಯಣಸ್ವಾಮಿಯವರಿಗೆ ಸಚಿವ ಸ್ಥಾನ ನೀಡಲಾಗಿದೆ.


ರಾಜ್ಯಸಭಾ ಸದಸ್ಯ ರಾಜೀವ ಚಂದ್ರಶೇಖರ್ ಸಂಘಪರಿವಾರದ ನಂಟಿರುವ ವ್ಯಕ್ತಿ. ಬೇಕೆಂದಾಗ ಚುನಾವಣೆಗೆ ದುಡ್ಡು ಕೊಡಬಲ್ಲ ಉದ್ಯಮಿ ಹಾಗಾಗಿ ಅವರಿಗೆ ಸಚಿವ ಸ್ಥಾನ ನೀಡಲಾಗಿದೆ ಎಂಬ ಮಾತುಗಳು ಕೇಳಿ ಬರುತ್ತಿವೆ.

ಕಲ್ಯಾಣ ಕರ್ನಾಟಕ ಭಾಗದ 7 ಜಿಲ್ಲೆಗಳಲ್ಲಿ ಬಿಜೆಪಿಯ 6 ಸಂಸದರಿದ್ದರೂ ವಿಧಾನಸಭೆ ಹಾಗೂ ಸ್ಥಳೀಯ ಮಟ್ಟದಲ್ಲಿ ಬಿಜೆಪಿ ಅಷ್ಟೊಂದು ಬಲಿಷ್ಠವಾಗಿಲ್ಲ. ಅದೇ ಕಾರಣಕ್ಕೆ ಆ ಭಾಗದ ಸಂಸದರು ವಿಶೇಷವಾಗಿ ರಾಜ್ಯದ ಪ್ರಮುಖ ಸಮುದಾಯವಾಗಿರುವ ಲಿಂಗಾಯತ ಸಮುದಾಯಕ್ಕೆ ಸೇರಿರುವ ಭಗವಂತ ಖೂಬಾ ಅವರಿಗೆ ಸಚಿವ ಸ್ಥಾನ ನೀಡುವ ಲೆಕ್ಕಾಚಾರ ಕಾಣಿಸುತ್ತದೆ.

ಮುಖ್ಯವಾಗಿ ಹೊಸ ಸಚಿವರಿಂದ ಹೆಚ್ಚಿನ ಕಾರ್ಯಕ್ಷಮತೆಯನ್ನು ನಿರೀಕ್ಷಿಸಬಹುದೇ? ಇವರ ಆಯ್ಕೆ ಯಾಕೆ ಆಗಿದ್ದು ಒನ್ ಮ್ಯಾನ್ ಶೋ ಹಾಗೂ ಟೂ ಮೆನ್ ಕ್ಯಾಬಿನೇಟ್‌ಗೆ ಜೈ ಅನ್ನಬೇಕಾಗಿತ್ತು. ಹಾಗಾಗಿ ಜೈ ಅನ್ನುವವರು ಸಚಿವರಾಗುವುದಕ್ಕೆ ಸೈ ಆಗಿದ್ದಾರೆ. ಎಂಬ ಮಾತುಗಳು ಬಿಜೆಪಿಯಲ್ಲೆ ಕೇಳಿ ಬರುತ್ತಿವೆ.



ಸಿಕ್ಕಿತು ಸಾರ್, ವ್ಯಂಗ್ಯಚಿತ್ರ: ಸತೀಶ ಆಚಾರ್ಯ



ಬೇರೆ ರೀತಿಯಲ್ಲಿ ಬಣ್ಣ ಹಚ್ಚಬಹುದಾಗಿತ್ತೇ?
ವ್ಯಂಗ್ಯಚಿತ್ರ: ಸಂದೀಪ್ ಆಧ್ವರ್ಯು,
ಟೈಂಸ್ ಆಫ್ ಇಂಡಿಯ

ಹೂಡಿಕೆಯ ಸಮಾಜೀಕರಣವಷ್ಟೇ ಸಾಕಾಗುತ್ತದೆಯೇ?



ಬಂಡವಾಳಶಾಹಿ ವ್ಯವಸ್ಥೆಯೊಳಗಿನ ದೋಷಗಳನ್ನು ನಿವಾರಿಸಲು ಹೂಡಿಕೆಯ ಸಮಾಜೀಕರಣವಷ್ಟೇ ಸಾಕಾಗುತ್ತದೆ; ಆದ್ದರಿಂದ, ಸಮಾಜವಾದಿ ಪದ್ಧತಿಯ ರೀತಿಯ ಉತ್ಪಾದನಾ ಸಾಧನಗಳ ಒಡೆತನವನ್ನು ಸಾಮಾಜಿಕಗೊಳಿಸುವುದು ಅನಗತ್ಯವಾಗುತ್ತದೆ ಎಂದು ಕೀನ್ಸ್ ಭಾವಿಸಿದ್ದರು. ಆದರೆ ಅವರ ಸಮಯದಲ್ಲೂ ಸಹ, ಅನೇಕ ವಿಶ್ಲೇಷಕರು, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕೀನ್ಸ್ ಅವರು ಸೂಚಿಸಿದ ಹೂಡಿಕೆಯ ಸಮಾಜೀಕರಣದ ಪರಿಹಾರವು ಅಸಮರ್ಪಕವಾಗಿದೆ, ಅದು ಬೃಹತ್ ಪ್ರಮಾಣದ ನಿರುದ್ಯೋಗವನ್ನು ನಿವಾರಿಸಲು ಸಾಕಾಗುವುದಿಲ್ಲ ಎಂದು ಅಭಿಪ್ರಾಯ ಪಟ್ಟಿದ್ದರು. ಕೀನ್ಸ್ ಅವರು ಸೂಚಿಸಿದ ಪರಿಹಾರವು ಕಾರ್ಯಸಾಧ್ಯವಲ್ಲ ಎಂಬುದನ್ನು ಅವರ ಕಾಲದಿಂದಲೂ ಹಿಡಿದು ಹಲವಾರು ವರ್ಷಗಳ ಪ್ರತ್ಯಕ್ಷ ಅನುಭವವೂ ತೋರಿಸಿಕೊಟ್ಟಿದೆ. ಬಂಡವಾಳಶಾಹಿ ಅರ್ಥವ್ಯವಸ್ಥೆಯ ಕಾರ್ಯವಿಧಾನವೇ, ಅದು ವರ್ಗ ವೈಷಮ್ಯವನ್ನು ಆಧರಿಸಿದೆ ಎಂಬ ಅರ್ಥದಲ್ಲಿ, ದೋಷಪೂರಿತವಾಗಿದೆ. ಆದ್ದರಿಂದ, ಈ ವ್ಯವಸ್ಥೆಯನ್ನು ಅದರ ದೋಷಪೂರಿತ ಕಾರ್ಯನಿರ್ವಹಣೆಯಿಂದ ರಕ್ಷಿಸಬಹುದು ಎಂದು ನಂಬುವುದು ಒಂದು ಹುಚ್ಚು ಕಲ್ಪನೆಯಾಗುತ್ತದೆ.

ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್

ಜಾನ್ ಮೇನಾರ್ಡ್ ಕೀನ್ಸ್, ಇಪ್ಪತ್ತನೇ ಶತಮಾನ ಕಂಡ ಅತ್ಯಂತ ಹೆಚ್ಚಿನ ಮಟ್ಟದ ಸೂಕ್ಷ್ಮದೃಷ್ಟಿಯುಳ್ಳ ಒಬ್ಬ ಬೂರ್ಜ್ವಾ ಅರ್ಥಶಾಸ್ತ್ರಜ್ಞರಾಗಿದ್ದರು. ಅವರು ಮಹಾ ಆರ್ಥಿಕ ಕುಸಿತ ಸಂಭವಿಸುತ್ತಿದ್ದ ಸಮಯದಲ್ಲಿ ಮತ್ತು ರಷ್ಯಾದ ಬೋಲ್ಶೆವಿಕ್ ಕ್ರಾಂತಿ ಸಂಭವಿಸಿದ ಹಿನ್ನೆಲೆಯಲ್ಲಿ ಬರೆಯುತ್ತಿದ್ದುದರಿಂದ, ಕೇವಲ ವ್ಯವಸ್ಥೆಯ ಒಬ್ಬ ಸಮರ್ಥಕರಾಗಿ ಕಾಣಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಮಹಾ ಕುಸಿತದಂಥಹ ಒಂದು ಕಾಲಘಟ್ಟದಲ್ಲಿ, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಎಲ್ಲವೂ ಸರಿಯಾಗಿದೆ ಎಂದು ಸೋಗುಹಾಕುವುದು ಅವರು ಮನಃಪೂರ್ವಕವಾಗಿ ಇಷ್ಟಪಡುತ್ತಿದ್ದ ಆ ವ್ಯವಸ್ಥೆಗೆ ಅವರು ಬಗೆವ ಬಹು ದೊಡ್ಡ ಅಪಚಾರವಾಗುತ್ತಿತ್ತು. ಹಾಗಾಗಿ, ಅವರಿಗೆ ಆ ವ್ಯವಸ್ಥೆಯ ದೋಷಗಳನ್ನು ಪ್ರಾಮಾಣಿಕವಾಗಿ ಗುರುತಿಸಿ ಅವುಗಳಿಗೆ ತೇಪೆ ಹಾಕಲು ಪ್ರಯತ್ನಿಸುವ ಕ್ರಮವೇ ಆ ವ್ಯವಸ್ಥೆಯನ್ನು ಉಳಿಸುವ ಅತ್ಯುತ್ತಮ ಮಾರ್ಗವಾಗಿತ್ತು.

ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕೀನ್ಸ್ ಗುರುತಿಸಿದ ಮುಖ್ಯ ದೋಷವೆಂದರೆ, ಸಾಮೂಹಿಕ ನಿರುದ್ಯೋಗದ ಹೊರೆ. ಬಹುತೇಕ ನಿರಂತರವಾಗಿ ಮತ್ತು ಅನಿವಾರ್ಯವಾಗಿ ನಿರುದ್ಯೋಗವನ್ನೇ ಮೈವೆತ್ತ ಬಂಡವಾಳಶಾಹಿಯ ಈ ದೋಷವು ವ್ಯವಸ್ಥೆಯನ್ನು ತಿರಸ್ಕಾರಕ್ಕೆ ಗುರಿಪಡಿಸುತ್ತದೆ ಮತ್ತು ಆ ಕಾರಣದಿಂದಾಗಿ ಈ ವ್ಯವಸ್ಥೆಯನ್ನೇ ದಾಟಿ ಹೋಗಬೇಕಾಗಬಹುದು ಎಂದು ಅವರು ಭಯಪಟ್ಟರು. ಇಂತಹ ಬೃಹತ್ ಪ್ರಮಾಣದ ನಿರುದ್ಯೋಗಕ್ಕೆ ಕಾರಣವೆಂದರೆ, ಬಂಡವಾಳ ಹೂಡಿಕೆಯ ನಿರ್ಧಾರಗಳನ್ನು ಒಂದಿಷ್ಟು ಮಂದಿ ಬಂಡವಾಳಶಾಹಿಗಳು ಖಾಸಗಿಯಾಗಿ ಮತ್ತು ಪ್ರತ್ಯೇಕವಾಗಿ ಕೈಗೊಳ್ಳುವುದರಿಂದ, ಒಟ್ಟಾರೆ ಹೂಡಿಕೆಯ ಗಾತ್ರವು ದೊಡ್ಡದಾಗಿರುವುದು ಶಕ್ಯವಿಲ್ಲ. ಪೂರ್ಣ ಉದ್ಯೋಗದ ಪರಿಸ್ಥಿತಿಯಲ್ಲಿ ಉತ್ಪಾದಿಸಬಹುದಾದ ಉತ್ಪತ್ತಿ ಮತ್ತು ಆ ಉತ್ಪತ್ತಿಯನ್ನು ನಿಜಕ್ಕೂ ಉತ್ಪಾದಿಸಿದರೆ ಸಂಭವಿಸುವ ಬಳಕೆ ಇವುಗಳ ನಡುವಿನ ವ್ಯತ್ಯಾಸವನ್ನು ವ್ಯಾಪಿಸುವಷ್ಟು ದೊಡ್ಡದಾಗಿರಲು ಎಂದಿಗೂ ಸಾಧ್ಯವಿಲ್ಲ. ಈ ಅಂಶವೇ, ಪೂರ್ಣ ಉದ್ಯೋಗದ ಉತ್ಪಾದನೆಗೆ ಒದಗಬಹುದಾದ ಒಟ್ಟಾರೆ ಬೇಡಿಕೆಯಲ್ಲಿ ಕೊರೆಯುಂಟಾಗಲು ಕಾರಣವಾಗಿದೆ. ಆದ್ದರಿಂದ, ಹೂಡಿಕೆಯ ಹಿಂದಿರುವ ಈ ಅಂಶವು ಪೂರ್ಣ ಉದ್ಯೋಗದ ಸನ್ನಿವೇಶ ಸಾಕಾರಗೊಳ್ಳದಂತೆ ತಡೆದಿದೆ. (ಏಕೆಂದರೆ, ಯಾವುದೇ ಒಂಟಿ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ಸಾಧಿಸಿದ ಉತ್ಪಾದನೆಯು, ಬಳಕೆ ಮತ್ತು ಹೂಡಿಕೆಯ ಮೊತ್ತಕ್ಕೆ ಸಮಾನವಾಗಿರಬೇಕು).

ಹಾಗಾಗಿ, ಬಂಡವಾಳ ಹೂಡಿಕೆಯ ನಿರ್ಧಾರಗಳನ್ನು ಸಾಮಾಜಿಕಗೊಳಿಸಲು ಕೀನ್ಸ್ ಸಲಹೆ ನೀಡಿದರು. ಅಂದರೆ, ಹಣಕಾಸು ನೀತಿ ಮತ್ತು ವಿತ್ತ ನೀತಿ ಈ ಎರಡೂ ನೀತಿಗಳ ಸಂಯೋಜನೆಯ ಮೂಲಕ ಪ್ರಭುತ್ವವು, ಪೂರ್ಣ ಉದ್ಯೋಗದ ಉತ್ಪತ್ತಿ ಮತ್ತು ಆ ಉತ್ಪತ್ತಿಯಿಂದ ಸಂಭವಿಸುವ ಬಳಕೆ ಇವುಗಳ ನಡುವಿನ ವ್ಯತ್ಯಾಸವನ್ನು ಒಳಗೊಳ್ಳುವಷ್ಟು ದೊಡ್ಡದಾದ ಹೂಡಿಕೆಯನ್ನು "ಸಮಾಜ"ದ ಪರವಾಗಿ ಖಚಿತಪಡಿಸಿಕೊಳ್ಳಲು ಸಾಧ್ಯವಾದರೆ, ಆಗ ವ್ಯವಸ್ಥೆಯು ಸಮರ್ಪಕವಾಗಿ ಕಾರ್ಯನಿರ್ವಹಿಸಬಲ್ಲದು ಎಂದು ಅವರು ಅಭಿಪ್ರಾಯ ಪಟ್ಟಿದ್ದರು.

ಬಂಡವಾಳಶಾಹಿ ವ್ಯವಸ್ಥೆಯೊಳಗಿನ ದೋಷಗಳನ್ನು ನಿವಾರಿಸಲು ಹೂಡಿಕೆಯ ಸಮಾಜೀಕರಣವಷ್ಟೇ ಸಾಕಾಗುತ್ತದೆ. ಆದ್ದರಿಂದ, ಸಮಾಜವಾದಿ ಪದ್ಧತಿಯ ರೀತಿಯ ಉತ್ಪಾದನಾ ಸಾಧನಗಳ ಒಡೆತನವನ್ನು ಸಾಮಾಜಿಕಗೊಳಿಸುವುದು ಅನಗತ್ಯವಾಗುತ್ತದೆ ಎಂದು ಕೀನ್ಸ್ ಭಾವಿಸಿದ್ದರು. ಈ ಬಗ್ಗೆ ಅವರು ಹೇಳಿರುವ ಮಾತುಗಳನ್ನು ಇಲ್ಲಿ ಉದ್ಧರಿಸುವುದಾದರೆ: "ಉತ್ಪಾದನಾ ಸಾಧನಗಳ ಒಡೆತನವೇ ಮುಖ್ಯ ಎಂದು ಪ್ರಭುತ್ವವು ಭಾವಿಸಿಕೊಳ್ಳಬೇಕಿಲ್ಲ. ಉತ್ಪಾದನಾ ಸಾಧನಗಳನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿಯೇ ಬೇಕಾಗುವ ಸಂಪನ್ಮೂಲಗಳ ಪ್ರಮಾಣ ಎಷ್ಟೆಂಬುದನ್ನು ಮತ್ತು ಈ ಸಾಧನಗಳನ್ನು ಹೊಂದಿರುವವರಿಗೆ ಸಲ್ಲಬೇಕಾದ ಪ್ರತಿಫಲದ ಮೂಲ ದರ ಎಷ್ಟೆಂಬದನ್ನು ನಿರ್ಧರಿಸುವುದು ಪ್ರಭುತ್ವಕ್ಕೆ ಸಾಧ್ಯವಾದರೆ, ಅಗತ್ಯವಿರುವ ಎಲ್ಲವನ್ನೂ ಸಾಧಿಸಿದಂತಾಗುತ್ತದೆ."

ಕೀನ್ಸ್ ಬರೆಯುತ್ತಿದ್ದ ಸಮಯದಲ್ಲೂ ಸಹ, ಮಾರ್ಕ್ಸ್‌ವಾದಿ ಪರಂಪರೆಗೆ ಸೇರಿದ ಅನೇಕ ಲೇಖಕರು, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕೀನ್ಸ್ ಅವರು ಸೂಚಿಸಿದ ಹೂಡಿಕೆಯ ಸಮಾಜೀಕರಣದ ಪರಿಹಾರವು ಅಸಮರ್ಪಕವಾಗಿದೆ ಮತ್ತು ಅದು ಬೃಹತ್ ಪ್ರಮಾಣದ ನಿರುದ್ಯೋಗವನ್ನು ನಿವಾರಿಸಲು ಸಾಕಾಗುವುದಿಲ್ಲ ಎಂದು ಅಭಿಪ್ರಾಯಪಟ್ಟಿದ್ದರು. ಕೀನ್ಸ್ ಅವರು ಸೂಚಿಸಿದ ಪರಿಹಾರವು ಕಾರ್ಯಸಾಧ್ಯವಲ್ಲ ಎಂಬುದನ್ನು ಅವರ ಕಾಲದಿಂದಲೂ ಹಿಡಿದು ಹಲವಾರು ವರ್ಷಗಳ ಪ್ರತ್ಯಕ್ಷ ಅನುಭವವೂ ತೋರಿಸಿಕೊಟ್ಟಿದೆ.

ಬಂಡವಾಳಶಾಹಿಯ ಅಡಿಯಲ್ಲಿ ಕೇವಲ ಅಸಮರ್ಪಕ ಬೇಡಿಕೆಯಿಂದಾಗಿ ಸಾಮೂಹಿಕ ನಿರುದ್ಯೋಗ ಸೃಷ್ಟಿಯಾಗುವುದಿಲ್ಲ. ಕನಿಷ್ಠ ಪ್ರಮಾಣದ ಸಾಮೂಹಿಕ ನಿರುದ್ಯೋಗ, ಅಥವಾ ಮಾರ್ಕ್ಸ್ ಯಾವುದನ್ನು ಒಂದು "ಕಾರ್ಮಿಕರ ಮೀಸಲು ಸೈನ್ಯ" ಎಂದು ಕರೆದರೋ ಅದು ವ್ಯವಸ್ಥೆಯ ಮುಂದುವರಿಕೆಗೆ ಅಗತ್ಯವಾಗುತ್ತದೆ. ಬಂಡವಾಳಶಾಹಿ ವ್ಯವಸ್ಥೆಯ ಅಡಿಯಲ್ಲಿ ಸಾಮೂಹಿಕ ನಿರುದ್ಯೋಗವು ಒಂದು ದೋಷವೇ ಅಲ್ಲ; ಅದರ ಕಾರ್ಯವಿಧಾನದ ಒಂದು ಭಾಗವೇ ಆಗಿದೆ. 1930ರ ದಶಕದ ಮಹಾ ಕುಸಿತದ ಸಮಯದಲ್ಲಿ ಕಂಡುಬಂದ ಅಗಾಧ ನಿರುದ್ಯೋಗ, ಅಥವಾ ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಕಂಡುಬರುವ ಸಾಮಾನ್ಯ ಮಟ್ಟದ ಸಾಮೂಹಿಕ ನಿರುದ್ಯೋಗವನ್ನು ಪ್ರಭುತ್ವವು ಒಟ್ಟು ಬೇಡಿಕೆಯನ್ನು ಉತ್ತೇಜಿಸುವ ಮೂಲಕ ಕಡಿಮೆ ಮಾಡಬಹುದು ಎಂಬುದು ನಿಜವೇ. ಸಾಂಪ್ರದಾಯಿಕ ಬಂಡವಾಳಶಾಹಿಯು, ವಾಸ್ತವವಾಗಿ, ಒಂದು "ಬೇಡಿಕೆ-ನಿರ್ಬಂಧಿತ ವ್ಯವಸ್ಥೆ" ಎಂಬುದನ್ನು ಪೋಲಿಷ್ ಮಾರ್ಕ್ಸ್‌ವಾದಿ ಅರ್ಥಶಾಸ್ತ್ರಜ್ಞ ಮೈಕೆಲ್ ಕಲೆಕಿ ಹೇಳಿದ್ದರು. ಆದರೆ, ಬೇಡಿಕೆಯನ್ನು ಹೆಚ್ಚಿಸುತ್ತಲೇ ಹೋದರೆ, ನಿರುದ್ಯೋಗವು ಸ್ವಲ್ಪ ಮಟ್ಟಿಗೆ ಇಳಿಕೆಯಾದ ನಂತರದಲ್ಲಿ ಭಾರಿ ಹಣದುಬ್ಬರ ಇರುತ್ತದೆ.

ನಿರುದ್ಯೋಗ ಇಳಿಕೆಯಾದ ನಂತರ ಹಣದುಬ್ಬರ ಉಂಟಾಗುವ ಕಾರಣ ಹೀಗಿದೆ: ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ "ಕಾರ್ಮಿಕರ ಮೀಸಲು ಸೈನ್ಯ"ವು, ಕಾರ್ಮಿಕರು ತಮ್ಮ ವೇತನವನ್ನು ಹೆಚ್ಚಿಸುವಂತೆ ಕೇಳುವ ಅವರ ಚೌಕಾಶಿಯ ಹಕ್ಕಿನ ಶಕ್ತಿಯನ್ನು ತಗ್ಗಿಸುವಲ್ಲಿ ಒಂದು ಪ್ರಭಾವಶಾಲಿ ಅಂಶವಾಗಿ ಕೆಲಸಮಾಡುತ್ತದೆ. ಹಾಗಾಗಿ, ಸಾಮೂಹಿಕ ನಿರುದ್ಯೋಗವನ್ನು ಒಂದು ನಿರ್ದಿಷ್ಟ ಮಟ್ಟಕ್ಕಿಂತ ಕಡಿಮೆ ಮಾಡುವುದರಿಂದ, ಯಾವ ಉದ್ದೇಶಕ್ಕಾಗಿ ಕಾರ್ಮಿಕರ ಮೀಸಲು ಸೈನ್ಯವನ್ನು ಬೆಳೆಸಲಾಗಿತ್ತೋ ಆ ಉದ್ದೇಶದ ಈಡೇರಿಕೆಯಾಗುವುದಿಲ್ಲ. ಬದಲಿಗೆ, ಕಾರ್ಮಿಕರ ಚೌಕಾಶಿಯ ಬಲ ಹೆಚ್ಚುತ್ತದೆ. ಉತ್ಪಾದನೆಯನ್ನು ಹೆಚ್ಚಿಸುವ ನೆಲೆಯಲ್ಲಿ ಕಾರ್ಮಿಕರು ಹೆಚ್ಚಿನ ಹಣ ವೇತನವನ್ನು (ಕಾರ್ಮಿಕ ಉತ್ಪಾದಕತೆಯ ಬೆಳವಣಿಗೆಯ ದರಕ್ಕಿಂತ ಹೆಚ್ಚಿನದನ್ನು) ಕೇಳುತ್ತಾರೆ. ಆದರೆ, ಉತ್ಪಾದನೆಯ ಹೆಚ್ಚಳದಲ್ಲಿ ಕಾರ್ಮಿಕರ ಕೊಡುಗೆಯನ್ನು ಒಪ್ಪಿಕೊಳ್ಳಲು ಇಷ್ಟಪಡದ ಕಾರಣದಿಂದಾಗಿ ಬಂಡವಾಳಗಾರರು, ಉತ್ಪನ್ನಗಳ ಬೆಲೆಗಳನ್ನು ಹೆಚ್ಚಿಸುತ್ತಾರೆ. ಹಾಗಾಗಿ, ಉತ್ಪಾದನೆಯ ವೆಚ್ಚದಲ್ಲಿ ವೇತನದ ಪಾಲು ಹೆಚ್ಚುವುದಿಲ್ಲ. ಇದು ಹಣದುಬ್ಬರಕ್ಕೆ ಕಾರಣವಾಗುತ್ತದೆ. ಕಾರ್ಮಿಕರು ಒಂದು ವೇಳೆ ಹೆಚ್ಚಿನ ಪಾಲು ಪಡೆಯುವ ತಮ್ಮ ಪ್ರಯತ್ನವನ್ನು ಮುಂದುವರಿಸಿದ್ದೇ ಆದರೆ, ಆಗ, ಹಣದುಬ್ಬರವು ನಿರಂತರವಾಗುತ್ತದೆ. ಹಣದುಬ್ಬರವನ್ನು ನಿರೀಕ್ಷಿಸಿದ ಕಾರ್ಮಿಕರು, ಅದನ್ನು ತಮ್ಮ ವೇತನ ಬೇಡಿಕೆಗಳಲ್ಲಿ ಸೇರಿಸಿಕೊಂಡಿದ್ದರೆ, ಕಾಲಾನಂತರದಲ್ಲಿ, ಹಣದುಬ್ಬರವು ವೇಗ ಪಡೆಯುತ್ತದೆ. ಆದ್ದರಿಂದ ಬಂಡವಾಳಶಾಹಿಯ ಅಡಿಯಲ್ಲಿ ಸಾಮೂಹಿಕ ನಿರುದ್ಯೋಗವನ್ನು ಎಂದಿಗೂ ತೊಡೆದುಹಾಕಲು ಸಾಧ್ಯವಿಲ್ಲ. ಒಂದು ತೀವ್ರ ಹಣದುಬ್ಬರ ಬಿಕ್ಕಟ್ಟಿನ ಮೂಲಕ ವ್ಯವಸ್ಥೆಯನ್ನು ನಿಷ್ಕ್ರಿಯಗೊಳಿಸದ ಹೊರತು, ಹಣದುಬ್ಬರವು ಎಂದಿಗೂ ಒಂದು ನಿರ್ದಿಷ್ಟ ಮಟ್ಟಕ್ಕಿಂತ ಕೆಳಕ್ಕೆ ಬೀಳಲು ಸಾಧ್ಯವಿಲ್ಲ.

ಇವೆಲ್ಲವೂ ಕೆಲಸಕ್ಕೆ ಬಾರದ ಮಾತುಗಳಲ್ಲ ಅಥವಾ ಕಟ್ಟುಕತೆಗಳಲ್ಲ. ಇವೆಲ್ಲವೂ ಯಥಾವತ್ತಾಗಿ ಯುದ್ಧಾನಂತರದ ಆರ್ಥಿಕ ಉತ್ಕರ್ಷವನ್ನು ಕೊನೆಗೊಳಿಸಿದವು. ಯುದ್ಧಾನಂತರದ ವರ್ಷಗಳಲ್ಲಿ, ಕೀನ್ಸ್ ಪ್ರತಿಪಾದಿಸಿದ ನೀತಿಗಳನ್ನು ಬಹುತೇಕ ಬಂಡವಾಳಶಾಹಿ ದೇಶಗಳು ಅನುಸರಿಸಿದ ಪರಿಣಾಮವಾಗಿ, ಈ ದೇಶಗಳಲ್ಲಿ ಬೇಡಿಕೆ ಹೆಚ್ಚಿತು ಮತ್ತು ನಿರುದ್ಯೋಗದ ಮಟ್ಟವೂ ಇಳಿಯಿತು. ಉನ್ನತ ಮಟ್ಟದ ಬೇಡಿಕೆಯು ಬಂಡವಾಳ ಹೂಡಿಕೆಯನ್ನು ಉತ್ತೇಜಿಸಿತು ಮತ್ತು ಉನ್ನತ ಮಟ್ಟದ ಆರ್ಥಿಕ ಬೆಳವಣಿಗೆಗೂ ಕಾರಣವಾಯಿತು. ಪರಿಣಾಮವಾಗಿ, ಈ ಅವಧಿಯನ್ನು "ಬಂಡವಾಳಶಾಹಿಯ ಸುವರ್ಣಯುಗ" ಎಂದು ಕರೆಯಲಾಗಿದೆ. ಆದರೆ, ದೀರ್ಘಕಾಲೀನ ಕೆಳ ಮಟ್ಟದ ನಿರುದ್ಯೋಗವು ಅಂತಿಮವಾಗಿ ವೇತನ ಮತ್ತು ಲಾಭಗಳ ಹಂಚಿಕೆಯ ಬಗ್ಗೆ ಹಗೆತನದ ಸಂಘರ್ಷಕ್ಕೆ ದಾರಿ ಮಾಡಿಕೊಟ್ಟಿತು. ಅದು ತೀವ್ರ ಹಣದುಬ್ಬರದ ರೂಪದಲ್ಲಿ ಪ್ರಕಟಗೊಂಡಿತು. ಈ ಕಾರಣದಿಂದಾಗಿ, ಬಂಡವಾಳಶಾಹಿಯು ಮಾರ್ಗರೆಟ್ ಥ್ಯಾಚರ್ ಮತ್ತು ರೊನಾಲ್ಡ್ ರೇಗನ್ ಅವರ ಕಾಲದ ಆಡಳಿತದಲ್ಲಿ ಹೆಚ್ಚಿನ ಮಟ್ಟದ ನಿರುದ್ಯೋಗಕ್ಕೆ ಹಿಂತಿರುಗಿತು.

ನಿರುದ್ಯೋಗವು ಮತ್ತೆ ತನ್ನ ಹಿಂದಿನ ಎತ್ತರದ ಮಟ್ಟಕ್ಕೆ ಬಂದು ನಿಲ್ಲುವ ಮೊದಲು, "ಬೆಲೆಗಳ ಮತ್ತು ವರಮಾನಗಳ ನೀತಿ"ಯನ್ನು ಹೇರುವ ಮೂಲಕ ಕೀನ್ಸ್ ಕಣ್ಣೋಟವನ್ನು ರಕ್ಷಿಸುವ ಪ್ರಯತ್ನ ಮಾಡಲಾಯಿತು. ಕಾರ್ಮಿಕರು ಮತ್ತು ಬಂಡವಾಳಗಾರರ ನಡುವೆ ಅವರವರ ಪಾಲಿನ ಹಂಚಿಕೆಯ ಬಗ್ಗೆ ಒಪ್ಪಂದ ಸಾಧಿಸುವ ಮೂಲಕ ಹಣದುಬ್ಬರವನ್ನು ನಿಯಂತ್ರಿಸುವುದು ಈ ಪ್ರಯತ್ನದ ಉದ್ದೇಶವಾಗಿತ್ತು, ಈ ಮೂಲಕ ಹಣ ವೇತನ ಮತ್ತು ಬೆಲೆ ಹೆಚ್ಚಳವನ್ನು ನಿಯಂತ್ರಣದಲ್ಲಿಡಲು ಉದ್ದೇಶಿಸಲಾಗಿತ್ತು. ಆದರೆ, ಬೆಲೆಗಳ ಮತ್ತು ವರಮಾನಗಳ ನೀತಿಯು ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಎಂದಿಗೂ ಯಶಸ್ವಿಯಾಗುವುದಿಲ್ಲ. ಏಕೆಂದರೆ, ಕಾರ್ಮಿಕರು ಮತ್ತು ಬಂಡವಾಳಶಾಹಿಗಳು ಪ್ರತಿಯೊಂದು ನಿರ್ದಿಷ್ಟ ಕೈಗಾರಿಕೆಯಲ್ಲಿ ಒಪ್ಪಂದಕ್ಕೆ ಬಂದರೂ, ಕಾರ್ಮಿಕರ ಉತ್ಪಾದಕತೆಯ ಬೆಳವಣಿಗೆಯ ದರವು ವಿವಿಧ ಕೈಗಾರಿಕೆಗಳಲ್ಲಿ ಭಿನ್ನವಾಗಿರುವುದರಿಂದ, ಈ ಒಪ್ಪಂದಗಳ ಫಲವಾಗಿ ಉಂಟಾಗುವ ನೈಜ ವೇತನಗಳ ಬೆಳವಣಿಗೆಯ ದರವೂ ಭಿನ್ನವಾಗಿರುತ್ತದೆ. ಹಾಗಾಗಿ, ಶ್ರಮದ ಉತ್ಪಾದಕತೆ ಕಡಿಮೆ ಇರುವ ಅಥವಾ ಸ್ಥಗಿತವಾಗಿರುವ ಕೈಗಾರಿಕೆಗಳಲ್ಲಿನ ಕಾರ್ಮಿಕರು ತಮ್ಮದಲ್ಲದ ತಪ್ಪಿಗೆ ತಮ್ಮ ನೈಜ ವೇತನದಲ್ಲಿ ಸ್ಥಗಿತತೆಯನ್ನು ಅನುಭವಿಸುತ್ತಾರೆ (ಅಷ್ಟಕ್ಕೂ, ಶ್ರಮದ ಉತ್ಪಾದಕತೆಯ ಬೆಳವಣಿಗೆಯನ್ನು ಅವರು ನಿರ್ಧರಿಸುವುದಿಲ್ಲ). ಹಾಗಾಗಿ, ಕಾರ್ಮಿಕರ ನಡುವೆ ಒಂದು ವಿಭಜನೆ ಸಂಭವಿಸುತ್ತದೆ. ಕೆಲವರು ನಿಜ ವೇತನದಲ್ಲಿ ತ್ವರಿತ ಹೆಚ್ಚಳವನ್ನು ಕಾಣುತ್ತಾರೆ ಮತ್ತು ಇತರರು ನೈಜ ವೇತನ-ಸ್ಥಗಿತಗಳಿಗೆ ಒಳಗಾಗುತ್ತಾರೆ. ಆದ್ದರಿಂದ, ಇಂತಹ ಒಪ್ಪಂದಗಳು ಅನಿವಾರ್ಯವಾಗಿ ಮುರಿದು ಬೀಳುತ್ತವೆ.

ಈ ಪರಿಸ್ಥಿತಿಗೆ ಪರ್ಯಾಯವೆಂದರೆ, ಕಾರ್ಮಿಕರ ಪ್ರತಿನಿಧಿಗಳು ಮತ್ತು ಬಂಡವಾಳಗಾರರ ಪ್ರತಿನಿಧಿಗಳ ನಡುವೆ ವೇತನದ ಪಾಲಿನ ಬಗ್ಗೆ ಒಂದು ರಾಷ್ಟ್ರವ್ಯಾಪಿ ಒಪ್ಪಂದಕ್ಕೆ ಬರುವುದು ಮತ್ತು ಎಲ್ಲೆಡೆ ನಿಜ ವೇತನಗಳು ಶ್ರಮದ ಉತ್ಪಾದಕತೆಯ ಸರಾಸರಿ ಬೆಳವಣಿಗೆಯ ದರದಷ್ಟೇ ಮಟ್ಟದ ದರದಲ್ಲಿ ಹೆಚ್ಚಾಗಲು ಬಿಡುವುದು. ಅಂತಹ ಸಂದರ್ಭದಲ್ಲಿ, ಕೆಲವು ಕೈಗಾರಿಕೆಗಳಲ್ಲಿ (ಕಾರ್ಮಿಕರ ಉತ್ಪಾದಕತೆಯ ಬೆಳವಣಿಗೆ ಹೆಚ್ಚಿರುವಲ್ಲಿ) ಲಾಭದ ಪಾಲು ಹೆಚ್ಚಾಗುತ್ತದೆ ಮತ್ತು ಇತರವುಗಳಲ್ಲಿ ಕುಸಿಯುತ್ತದೆ. ಈ ಕಾರಣದಿಂದಾಗಿಯೇ ಅಂತಹ ಒಪ್ಪಂದಗಳು ಅನಿವಾರ್ಯವಾಗಿ ಮುರಿದು ಬೀಳುತ್ತವೆ. ಲಾಭದ ಪಾಲು ಇಳಿಕೆಯಾಗುವ ಕೈಗಾರಿಕೆಗಳ ಬಂಡವಾಳಗಾರರು ಒಪ್ಪಂದದ ವಿರುದ್ಧ ದಂಗೆ ಏಳುತ್ತಾರೆ. ಹೀಗಾಗಿ, ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಬೆಲೆಗಳ ಮತ್ತು ವರಮಾನಗಳ ನೀತಿಯ ಗುರಿ ಸಾಧಿಸುವುದು ಅಸಾಧ್ಯವಾಗುತ್ತದೆ.

ಈ ಪರಿಸ್ಥಿತಿಗೆ ವ್ಯತಿರಿಕ್ತವಾಗಿ ಸಮಾಜವಾದಿ ಅರ್ಥವ್ಯವಸ್ಥೆಯನ್ನು ಪರಿಗಣಿಸೋಣ. ಎಲ್ಲಾ ಕೈಗಾರಿಕೆಗಳೂ ಸರ್ಕಾರದ ಒಡೆತನದಲ್ಲಿರುವುದರಿಂದ, ಕೈಗಾರಿಕೆಗಳ ನಡುವೆ ಲಾಭದ ಹಂಚಿಕೆಯ ಪ್ರಶ್ನೆಯೇ ಏಳುವುದಿಲ್ಲ. ಏಕೆಂದರೆ, ಎಲ್ಲಾ ಲಾಭಗಳೂ ಅಂತಿಮವಾಗಿ ರಾಜ್ಯದ ಖಜಾನೆಗೆ ಹೋಗುತ್ತವೆ. ಆದ್ದರಿಂದ, ಎಲ್ಲಾ ಕಾರ್ಮಿಕರಿಗೂ ಪ್ರತಿ ವರ್ಷವೂ ಕಾರ್ಮಿಕ-ಉತ್ಪಾದಕತೆಯ ಸರಾಸರಿ ಬೆಳವಣಿಗೆಯ ದರಕ್ಕೆ ಸಮನಾದ ನೈಜ ವೇತನ ದೊರೆಯುವ ಒಪ್ಪಂದಕ್ಕೆ ಬರುವಲ್ಲಿ ಯಾವುದೇ ಅಡೆ-ತಡೆಗಳಿರುವುದಿಲ್ಲ. ವೇತನದ ಪಾಲನ್ನು ಹೆಚ್ಚಿಸುವ ಒಪ್ಪಂದವಿದ್ದರೆ, ಸರಾಸರಿ ವೇತನ ಬೆಳವಣಿಗೆಯು ಸರಾಸರಿ ಉತ್ಪಾದಕತೆಯ ಬೆಳವಣಿಗೆಯನ್ನು ಮೀರಲೂ ಬಹುದು, ಮತ್ತು ವೇತನ-ಪಾಲನ್ನು ಕಡಿತಗೊಳಿಸುವ ಒಪ್ಪಂದವಿದ್ದರೆ ವೇತನಗಳು ಕಡಿಮೆಯಾಗಲೂ ಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ, ಸಮಾಜವಾದಿ ಅರ್ಥವ್ಯವಸ್ಥೆಯಲ್ಲಿ ಬೆಲೆಗಳ ಮತ್ತು ವರಮಾನಗಳ ನೀತಿಯನ್ನು ಸುಲಭವಾಗಿ ಅನುಸರಿಸಬಹುದು ಎಂಬುದನ್ನು ಮತ್ತು ಪೂರ್ಣ ಉದ್ಯೋಗದ ಮಟ್ಟವನ್ನು ಕಾಪಾಡಿಕೊಳ್ಳಬಹುದು ಎಂಬುದನ್ನೂ ಈ ಹಿಂದೆ ಅಸ್ತಿತ್ವದಲ್ಲಿದ್ದ ಸಮಾಜವಾದಿ ರಾಷ್ಟ್ರಗಳು ಸಾಧಿಸಿ ತೋರಿಸಿವೆ.

ಹೀಗೆ 1930ರ ದಶಕದಲ್ಲಿ ಕೀನ್ಸ್ ಸೂಚಿಸಿದ ಪರಿಹಾರಗಳು ಬಂಡವಾಳಶಾಹಿ ಅರ್ಥವ್ಯವಸ್ಥೆಯ ಕಾರ್ಯನಿರ್ವಹಣೆಯಲ್ಲಿನ ಒಂದೇ ಒಂದು

ಪುಟ 14 ನೋಡಿ

ಸ್ಟ್ಯಾನ್ ಸ್ವಾಮಿಯವರ ಸಾವು ಕಸ್ಟಡಿ ಹತ್ಯೆ"- ಎಐಕೆಎಸ್, ಸಿಐಟಿಯು ಖಂಡನೆ

ಫಾದರ್ ಸ್ಟ್ಯಾನ್ ಸ್ವಾಮಿಯವರ ಸಾವಿನ ಸುದ್ದಿಗೆ ಎಲ್ಲೆಡೆಗಳಿಂದ ತೀವ್ರ ನೋವು ಮತ್ತು ಆಕ್ರೋಶ ವ್ಯಕ್ತಗೊಂಡಿದೆ.

ಇದು ಒಂದು ಕಸ್ಟಡಿಯಲ್ಲಿನ ಹತ್ಯೆಯಲ್ಲದೆ ಬೇರೇನೂ ಅಲ್ಲ ಎಂದು ಅಖಿಲ ಭಾರತ ಕಿಸಾನ್ ಸಭಾ(ಎ.ಐ.ಕೆ.ಎಸ್.) ಖಂಡಿಸಿದೆ.

ಇದನ್ನು ಎಸಗಿರುವುದು ಕೇಂದ್ರ ಸರಕಾರ ಮತ್ತು ಅದರ ಏಜೆನ್ಸಿಗಳು, ಇವು ಅವರ ನಾಜೂಕು ಆರೋಗ್ಯಸ್ಥಿತಿಯ ಬಗ್ಗೆ ತಿಳಿದಿದ್ದರೂ ಅವರನ್ನು ಬಂಧಿಸಿ, ಕಠಿಣ ಜೈಲು ಪರಿಸ್ಥಿತಿಗಳಲ್ಲಿ ಇಟ್ಟವು, ಮತ್ತೆ-ಮತ್ತೆ ಅವರ ಜಾಮೀನನ್ನು ವಿರೋಧಿಸಿದವು ಮತ್ತು ಅವರಿಗೆ ಅತ್ಯಗತ್ಯವಾಗಿದ್ದ ಶುಶ್ರೂಷೆ ಸಿಗದಂತೆ ಮಾಡಿದವು ಎನ್ನುತ್ತ ಎ.ಐ.ಕೆ.ಎಸ್.ಅವರ ಸಾವಿಗೆ ಹೊಣೆಗಾರರಾದ ಎಲ್ಲರೂ ಇದಕ್ಕೆ ಉತ್ತರ ಕೊಡುವಂತೆ ಮಾಡಬೇಕು ಮತ್ತು ಅವರ ಕ್ರಿಮಿನಲ್ ಕೃತ್ಯಗಳಿಗಾಗಿ ಅವರನ್ನು ಶಿಕ್ಷಿಸಬೇಕು ಎಂದು ಆಗ್ರಹಿಸಿದೆ.

ಇದಲ್ಲದೆ ಸ್ಟ್ಯಾನ್ ಸ್ವಾಮಿಯವರ ಸಾವು ದೇಶದ ನ್ಯಾಯಾಲಯಗಳು ನಾಗರಿಕರ ಹಕ್ಕುಗಳನ್ನು ರಕ್ಷಿಸುವ ತಮ್ಮ ಸಂವಿಧಾನಿಕ ಕರ್ತವ್ಯವನ್ನು ಅರಿಯುವಂತೆ ಮಾಡಬೇಕು. ಅವು ಕಳೆದ ತಿಂಗಳು ದಿಲ್ಲಿ ಹೈಕೋರ್ಟ್ ನತಾಶಾ ನರ್ವಾಲ್, ದೇವಾಂಗನಾ ಕಲಿತಾ ಮತ್ತು ಅಸಿಫ್ ಇಕ್ಬಾಲ್ ತನ್ಹಾ ಕೇಸಿನಲ್ಲಿ ಮುಂದಿಟ್ಟ ಉದಾಹರಣೆಯನ್ನು ಅನುಸರಿಸಬೇಕು ಮತ್ತು ದೇಶದಲ್ಲಿನ ಪ್ರಜಾಪ್ರಭುತ್ವವಾದಿ ದನಿಗಳಿಗೆ ರಾಜಕೀಯ ಕಿರುಕುಳಗಳನ್ನು ಕೊನೆಗೊಳಿಸಬೇಕು ಎಂದು ಅದು ಹೇಳಿದೆ.

ದೇಶದಲ್ಲಿ ಈ ರೀತಿ ನೂರಾರು ಇತರ ರಾಜಕೀಯ ಬಂಧಿಗಳನ್ನು ವರ್ಷಾನುಗಟ್ಟಲೆ ವಿಚಾರಣೆಯಿಲ್ಲದೆ ಜೈಲುಗಳಲ್ಲಿ ಇಡಲಾಗಿದೆ. ಅವರಲ್ಲಿ ಹೆಚ್ಚಿನವರು, ಸರಕಾರದ ಪ್ರಜಾಪ್ರಭುತ್ವ-ವಿರೋಧಿ ಧೋರಣೆಗಳ ವಿರುದ್ಧ ಗಟ್ಟಿಯಾಗಿ ಮಾತಾಡಿದ್ದರಿಂದಾಗಿ, ಕಪೋಲಕಲ್ಪಿತ ಆರೋಪಗಳನ್ನು ಎದುರಿಸುತ್ತಿದ್ದಾರೆ. ವ್ಯವಸ್ಥಿತವಾಗಿ, ಅವರಿಗೆ ಜಾಮೀನು ನಿರಾಕರಿಸಲಾಗುತ್ತಿದೆ, ಹಾಗೂ ಮಾಧ್ಯಮಗಳನ್ನು ದುರುಪಯೋಗ ಪಡಿಸಿಕೊಂಡು ಅವರನ್ನು ದುಷ್ಟರೆಂದು ಚಿತ್ರಿಸಲಾಗುತ್ತಿದೆ.

ಯುಎಪಿಎ, ರಾಜದ್ರೋಹ ಕಾಯ್ದೆ ಮತ್ತಿತರ ಕರಾಳ ಕಾಯ್ದೆಗಳ ಅಡಿಯಲ್ಲಿ ಬಂಧಿಸಿರುವ ಇಂತಹ ಎಲ್ಲ ರಾಜಕೀಯ ಬಂಧಿಗಳನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಮತ್ತು ಅವರ ಮೇಲಿರುವ ಆರೋಪಗಳನ್ನು ಕೈಬಿಡಬೇಕು ಎಂದು ಎ.ಐ.ಕೆ.ಎಸ್. ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ ಮತ್ತು ಅಧ್ಯಕ್ಷ ಅಶೋಕ ಧವಳೆಯವರು ಆಗ್ರಹಿಸಿದ್ದಾರೆ.

ಕೇಂದ್ರ ಸರಕಾರ ಉತ್ತರದಾಯಿ–ಸಿಐಟಿಯು

ದೇಶದ ಒಂದು ಪ್ರಮುಖ ಕಾರ್ಮಿಕ ಸಂಘಟನೆ ಸಿಐಟಿಯು ಕೂಡ ಇದು ಒಂದು ಕಸ್ಟಡಿಯಲ್ಲಿನ ಸಾವು ಎಂದು ಖಂಡಿಸಿದೆ, ಈ ದುರಂತ ಘಟನೆಗೆ ಕೇಂದ್ರದಲ್ಲಿನ ಸರಕಾರವನ್ನು ಉತ್ತರದಾಯಿಯಾಗಿ ಮಾಡಬೇಕಾಗಿದೆ ಎಂದಿರುವ ಅದು, ಈ ಘಟನೆ ಮೂಲಭೂತ ಮಾನವ ಹಕ್ಕುಗಳ ಅಮಾನವೀಯ ಮತ್ತು ಪಾಶವೀ ದಮನವನ್ನು ಬಯಲಿಗೆಳೆದಿದೆ ಎಂದಿದೆ.

ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಒಂದು ಗಂಭೀರ ಅಪಾಯದ ಸಂಕೇತ ಎನ್ನುತ್ತ ಎಲ್ಲ ರಾಜಕೀಯ ಬಂಧಿಗಳನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೆನ್ ಆಗ್ರಹಿಸಿದ್ದಾರೆ.

ರಾಷ್ಟ್ರಪತಿಗಳಿಗೆ ವಿಪಕ್ಷಗಳ ಮುಖಂಡರ ಆಗ್ರಹ

ಪುಟ 2 ರಿಂದ



ಫಾದರ್ ಸ್ಟ್ಯಾನ್ ಸ್ವಾಮಿಯವರ ಸಾವಿನ ಬಗ್ಗೆ ಆಳವಾದ ಯಾತನೆಯಿಂದ ತೀವ್ರ ದುಃಖ ಮತ್ತು ಆಕ್ರೋಶವನ್ನು ವ್ಯಕ್ತಪಡಿಸುತ್ತ ನಿಮಗೆ ಬರೆಯುತ್ತಿದ್ದೇವೆ.

ಝಾರ್ಖಂಡ್ ನ ದೂರ-ದೂರದ ಪ್ರದೇಶಗಳಲ್ಲಿ ಆದಿವಾಸಿಗಳ ಹಕ್ಕುಗಳು ಮತ್ತು ಸಮಸ್ಯೆಗಳನ್ನು ಪ್ರತಿಪಾದಿಸುತ್ತಿದ್ದ, ಅವರ ಪರವಾದ ಚಟುವಟಿಕೆಗಳಲ್ಲಿ ತೊಡಗಿದ್ದ 84 ವರ್ಷದ ಜೆಸುಯಿಟ್ ಪಾದ್ರಿಯ ಮೇಲೆ ಕರಾಳ ಯುಎಪಿಎ ಕಾಯ್ದೆಯ ಅಡಿಯಲ್ಲಿ ಕಪೋಲಕಲ್ಪಿತ ಆರೋಪಗಳನ್ನು ಹಾಕಿ ಕಳೆದ ಅಕ್ಟೋಬರ್ ನಲ್ಲಿ ಅವರನ್ನು ಜೈಲಿಗೆ ಹಾಕಲಾಯಿತು.

ಅವರಿಗೆ ಓಡಾಟವನ್ನು ಕುಂಠಿತಗೊಳಿಸುವ ಪಾರ್ಕಿನ್ಸನ್ ಕಾಯಿಲೆಯೂ ಸೇರಿದಂತೆ ವಿವಿಧ ಕಾಯಿಲೆಗಳಿಗೆ ಶುಶ್ರೂಷೆಯನ್ನು ನಿರಾಕರಿಸಲಾಯಿತು. ಜೈಲಿನಲ್ಲಿ ಅವರಿಗೆ ದ್ರವ ಪದಾರ್ಥಗಳನ್ನು ಕುಡಿಯಲು ಒಂದು ಸಿಪ್ಪರ್ ಲಭ್ಯಗೊಂಡದ್ದು ಕೂಡ ಒಂದು ದೇಶವ್ಯಾಪಿ ಪ್ರಚಾರಾಂದೋಲನ ನಡೆಸಿದ ನಂತರವೇ.

ಕೊವಿಡ್ ಪ್ರಕರಣಗಳು ಅಪಾರವಾಗಿ ಹೆಚ್ಚಿದ ಜನನಿಬಿಡವಾಗಿದ್ದ ತಲೋಜಾ ಜೈಲಿನಿಂದ ಅವರನ್ನು ಸ್ಥಳಾಂತರಿಸಬೇಕೆಂಬ ಹಲವಾರು ಮನವಿಗಳಿಗೆ ಕಿವಿಗೊಡಲೇ ಇಲ್ಲ. ಜಾಮೀನು ಕೊಡಿ ಮತ್ತು ಮನೆಗೆ ಕಳಿಸಿ ಎಂಬ ಅವರ ಮನವಿಗಳನ್ನು ಕೂಡ ತಿರಸ್ಕರಿಸಲಾಯಿತು. ಅವರಿಗೆ ಕೊವಿಡ್ ಸೋಂಕು ತಗಲಿ ಅವರ ದೇಹಸ್ಥಿತಿ ಹದಗೆಡಲಾರಂಭಿಸಿದಾಗ ಮುಂಬೈ ಹೈಕೋರ್ಟಿನ ಮಧ್ಯಪ್ರವೇಶದಿಂದಾಗಿ ಅವರನ್ನು ಖಾಸಗಿ ಆಸ್ಪತ್ರೆಗೆ ಸೇರಿಸಲಾಯಿತು. ಆದರೆ ಆ ವೇಳೆಗೆ ಕಸ್ಟಡಿಯಲ್ಲಿ ಅವರ ಸಾವನ್ನು ತಡೆಯಲು ಬಹಳ ವಿಳಂಬವಾಗಿತ್ತು.

ತಾವು ಭಾರತದ ರಾಷ್ಟ್ರಪತಿಯಾಗಿ, ಅವರ ಮೇಲೆ ಸುಳ್ಳು ಕೇಸುಗಳನ್ನು ಹೊರಿಸಲು, ಅವರು ಜೈಲಿನಲ್ಲೇ ಮುಂದುವರೆಯುವಂತೆ ಮಾಡಲು ಮತ್ತು ಅಮಾನವೀಯವಾಗಿ ನಡೆಸಿಕೊಳ್ಳಲು ಹೊಣೆಗಾರರಾದವರ ವಿರುದ್ಧ ಕ್ರಮಕೈಗೊಳ್ಳುವಂತೆ "ನಿಮ್ಮ ಸರಕಾರ"ಕ್ಕೆ ನಿರ್ದೇಶನ ಕೊಡಲು ತಕ್ಷಣವೇ ಮಧ್ಯಪ್ರವೇಶಿಸಬೇಕು ಎಂದು ನಾವು ಆಗ್ರಹಪಡಿಸುತ್ತೇವೆ. ಅವರನ್ನು ಜವಾಬುದಾರರಾಗಿ ಮಾಡಬೇಕು. ಈಗ ಭೀಮ ಕೊರೆಗಾಂವ್ ಕೇಸಿನಲ್ಲಿ ಜೈಲಿಗೆ ಹಾಕಿರುವವರನ್ನು ಹಾಗೂ ಕರಾಳ ಯುಎಪಿಎ, ರಾಜದ್ರೋಹ ಮುಂತಾದವುಗಳ ಅಡಿಯಲ್ಲಿ ಇತರ ರಾಜಕೀಯ-ಪ್ರೇರಿತ ಕೇಸುಗಳಲ್ಲಿ ಬಂಧಿತರಾಗಿರುವ ಎಲ್ಲರನ್ನೂ ತಕ್ಷಣವೇ ಬಿಡುಗಡೆ ಮಾಡಲೇಬೇಕಾಗಿದೆ."

ಯು.ಪಿ.ಎ. ಸರ್ಕಾರದ ಅಡಿಯಲ್ಲಿ.....

ಪುಟ 11 ರಿಂದ

ಸಂಸ್ಥೆಗಳು ಪ್ರಮುಖ ಮಾರ್ಗಗಳಲ್ಲಿ ಸೇವೆಗಳನ್ನು ರದ್ದುಗೊಳಿಸಲು ಅಥವಾ ಕಡಿತಗೊಳಿಸಲು ಒತ್ತಾಯಿಸಲಾಯಿತು.

ಕೇಂದ್ರ ಕಾರ್ಮಿಕ ಸಂಘಗಳು ಮುಷ್ಕರಕ್ಕೆ ಪ್ರತಿಕ್ರಿಯೆಯನ್ನು 'ಅಭೂತಪೂರ್ವ' ಎಂದು, ಸಂಘಟಿತ ಮತ್ತು ಅಸಂಘಟಿತ ಎರಡೂ ಕ್ಷೇತ್ರಗಳ ಸುಮಾರು 6 ಕೋಟಿ ಕಾರ್ಮಿಕರು ಮುಷ್ಕರಕ್ಕೆ ಸೇರ್ಪಡೆಗೊಂಡಿದ್ದರೆಂದು ಹೇಳಿದವು. ವಿದ್ಯಾರ್ಥಿಗಳು, ಯುವಜನರು, ರೈತರು, ಮಹಿಳೆಯರು ಮತ್ತು ಇತರ ಸೋದರ ಸಂಘಟನೆಗಳು ಸಹ ಮುಷ್ಕರ ಕರೆಯನ್ನು ಬೆಂಬಲಿಸಿದವು. ಮುಷ್ಕರದಲ್ಲಿ ಒಟ್ಟು 13 ಲಕ್ಷ ಬ್ಯಾಂಕ್ ಮತ್ತು ವಿಮಾ ನೌಕರರಲ್ಲಿ ಶೇ. 95 ಕ್ಕಿಂತ ಹೆಚ್ಚು ಭಾಗವಹಿಸಿದ್ದರು.

2005 ರಲ್ಲಿ ರಾಷ್ಟ್ರೀಯ ವಿಪತ್ತುಗಳು ಕಠಿಣ ಸವಾಲುಗಳನ್ನು ಒಡ್ಡಿದವು.

ಸುನಾಮಿ

ಭಾರತದಿಂದ ಶ್ರೀಲಂಕಾ, ಇಂಡೋನೇಷ್ಯಾ, ಥೈಲ್ಯಾಂಡ್, ಮಾಲ್ಡೀವ್ಸ್, ಮ್ಯಾನ್ಮಾರ್, ಮಲೇಷ್ಯಾ, ಸ್ವಲ್ಪಮಟ್ಟಿಗೆ ಬಾಂಗ್ಲಾದೇಶ ಮತ್ತು ಪೂರ್ವ ಆಫ್ರಿಕಾದ ಸೊಮಾಲಿಯಾದವರೆಗೆ ಹಿಂದೂ ಮಹಾಸಾಗರದ ಸುತ್ತಮುತ್ತಲಿನ ಹಲವಾರು ದೇಶಗಳನ್ನು ಅಪ್ಪಳಿಸಿದ ವಿಷ್ಯಾದ ಗಂಭೀರ ದುರಂತದೊಂದಿಗೆ 2004 ವರ್ಷ ಕೊನೆಗೊಂಡಿತು. ಇದನ್ನು ಇತಿಹಾಸದ ಭೀಕರ ವಿಪತ್ತು ಮತ್ತು ನೈಸರ್ಗಿಕ ವಿಕೋಪ ಎಂದು ಪರಿಗಣಿಸಲಾಗಿದೆ. ದಕ್ಷಿಣ ಭಾರತದ ಕರಾವಳಿ ರಾಜ್ಯಗಳು ಮತ್ತು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಮತ್ತು ಕೆಲವು ಏಷ್ಯಾದ ದೇಶಗಳನ್ನು ಹಠಾತ್ತನೆ ಅಪ್ಪಳಿಸಿದ ಸುನಾಮಿ ಎಂಬ ಪ್ರಾಕೃತಿಕ ಪ್ರಕೋಪವು ಆಸ್ತಿಪಾಸ್ತಿಗಳ ವಿನಾಶ ಮತ್ತು ಮಾನವ ವಾಸಿಸುವ ನೈಸರ್ಗಿಕ ಮೂಲಗಳ ಜೊತೆಗೆ ಬೃಹತ್ ಪ್ರಮಾಣದ ಮಾನವ ಜೀವಗಳನ್ನು ನಾಶಮಾಡಿತು. ಎಲ್ಲಾ ಕಾರ್ಮಿಕ ಸಂಘಗಳು ತ್ವರಿತವಾಗಿ ಪ್ರತಿಕ್ರಿಯಿಸಿ ಸುನಾಮಿ ಪರಿಹಾರಕ್ಕಾಗಿ ಹಣವನ್ನು ಸಂಗ್ರಹಿಸಿ ವಿನಾಶಗೊಂಡ ಪ್ರದೇಶಗಳಲ್ಲಿ ಪರಿಹಾರ ಕಾರ್ಯಗಳನ್ನು ಕೈಗೊಂಡವು.

ಹಿಮಾಲಯನ್ ಭೂಕಂಪ ಮತ್ತು ನಂತರ

ಅಕ್ಟೋಬರ್ 8, 2005 ರಂದು ತೀವ್ರ ಭೂಕಂಪನವು ಕಾಶ್ಮೀರ ಮತ್ತು ಪಾಕಿಸ್ತಾನದಲ್ಲಿರುವ ಕಾಶ್ಮೀರದ ಇನ್ನೊಂದು ಭಾಗದಲ್ಲಿ ಕನಿಷ್ಠ 60,000 ಜೀವಗಳನ್ನು ಬಲಿ ತೆಗೆದುಕೊಂಡಿತು ಮತ್ತು ಊಹಿಸಲಾಗದಷ್ಟು ಆಸ್ತಿಪಾಸ್ತಿ, ಮೂಲಸೌಕರ್ಯಗಳನ್ನು ಚೂರುಚೂರು ಮಾಡಿತು, 70,000 ಕ್ಕೂ ಹೆಚ್ಚು ಸಂತ್ರಸ್ತರು ತೀವ್ರವಾಗಿ ಗಾಯಗೊಂಡರು. ಪರಿಹಾರ ಮತ್ತು ಪುನರ್ವಸತಿಯಲ್ಲಿ ಸಹಾಯ ನೀಡಲು ಅಂತರರಾಷ್ಟ್ರೀಯ ಸಮುದಾಯವು ಮುಂದೆ ಬಂದಿತು.

ಹೊಂಡಾ ಕಾರ್ಮಿಕರ ಮೇಲೆ ಹರಿಯಾಣ ಪೊಲೀಸರಿಂದ ಅನಾಗರಿಕ ದಾಳಿ

ಏತನ್ಮಧ್ಯೆ, 2005 ರ ಜುಲೈ 25 ರಂದು ವ್ಯವಸ್ಥಿತ ಮತ್ತು ಪೂರ್ವನಿರ್ಧಾರಿತ ಶೈಲಿಯಲ್ಲಿ, ಹರಿಯಾಣ ಪೊಲೀಸರು ಬಹುರಾಷ್ಟ್ರೀಯ ಕಂಪನಿಯ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸಿದರು. – ಹರಿಯಾಣದ ಗುರಗಾಂವ್‌ನಲ್ಲಿರುವ ಹೋಂಡಾ ಮೋಟಾರ್ ಸೈಕಲ್ಸ್ ಮತ್ತು ಸ್ಕೂಟರ್ ಕಾರ್ಖಾನೆಯಲ್ಲಿ ನಡೆದ ಹೋಂಡಾ ಕಾರ್ಮಿಕರ ಶಾಂತಿಯುತ ಪ್ರದರ್ಶನದ ಮೇಲೆ ದಾಳಿ ಮಾಡಿದರು. ಅಧಿಕಾರಿಗಳ ಆಶಯಕ್ಕೆ ವಿರುದ್ಧವಾಗಿ ಟ್ರೇಡ್ ಯೂನಿಯನ್ ರಚಿಸಿದ್ದಕ್ಕಾಗಿ ಕಂಪನಿ ಆಡಳಿತವು ವಜಾಗೊಳಿಸಿದ ತಮ್ಮ ಸಹೋದ್ಯೋಗಿಗಳನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳುವಂತೆ ಕಾರ್ಮಿಕರು ಒತ್ತಾಯಿಸುತ್ತಿದ್ದರು. ಪೊಲೀಸರ. ಘೋರ ದಾಳಿಯು ಒಬ್ಬಕಾರ್ಮಿಕನ ಸಾವಿಗೆ ಕಾರಣವಾಯಿತು ಮತ್ತು ಎಂಟು ನೂರಕ್ಕೂ ಹೆಚ್ಚು ಕಾರ್ಮಿಕರನ್ನು ತೀವ್ರವಾಗಿ ಗಾಯಗೊಳಿಸಿತು ಮತ್ತು ಕನಿಷ್ಠ ಐವತ್ತು ಜನರನ್ನು ಪತ್ತೆ ಹಚ್ಚಲು ಸಾಧ್ಯವಾಗಲಿಲ್ಲ. ಮಾಧ್ಯಮ ಚಿತ್ರಗಳು ದಮನದ ಭೀಕರತೆಯನ್ನು ತೋರಿಸಿದವು. ಎಡ ಟ್ರೇಡ್ ಯೂನಿಯನ್ ಮುಖಂಡರು, ಕ್ರೂರತೆಯನ್ನು ಬಲವಾಗಿ ಖಂಡಿಸುತ್ತಾ, ಸಂತ್ರಸ್ತರ ಜೊತೆಯಲ್ಲಿ ನಿಂತರು ಮತ್ತು ಆಸ್ಪತ್ರೆಗೆ ಭೇಟಿ ನೀಡಿದರು.

ವರ್ಲ್ಡ್ ಸೋಶಿಯಲ್ ಫೋರಮ್ 2004: ಪರ್ಯಾಯ ಜಗತ್ತನ್ನು ಸಾಧ್ಯವಾಗಿಸುವತ್ತ ಪ್ರಮುಖ ಮೈಲಿಗಲ್ಲು

ಮುಂಬೈನ ಗೋರೆಗಾಂವ್‌ನಲ್ಲಿರುವ ವಿಸ್ತಾರವಾದ ನೆಸ್ಕೊ ಮೈದಾನದಲ್ಲಿ 2004 ಜನವರಿ 16 ರಿಂದ 21 ರವರೆಗೆ ನಡೆದ. ವಿಶ್ವ ಸಾಮಾಜಿಕ ವೇದಿಕೆ 2004 ರಲ್ಲಿ ನೂರಕ್ಕೂ ಹೆಚ್ಚು ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದರು. 'ಇನ್ನೊಂದು ಜಗತ್ತು ಸಾಧ್ಯ' ಮತ್ತು ಅದಕ್ಕಾಗಿ ಕೆಲಸ ಮಾಡಬೇಕೆಂಬ ಗಂಭೀರ ನಂಬಿಕೆಯೊಂದಿಗೆ ಸಾಧಿಸಬೇಕಾದ ಗುರಿಯ ಕಡೆಗೆ. ಸಮಾಜದ ವೈವಿಧ್ಯಮಯ ಸ್ತರಗಳನ್ನು ಪ್ರತಿನಿಧಿಸುವ ವೈವಿಧ್ಯಮಯ ಬಣ್ಣಗಳು, ಜಾತಿ, ಮತ ಮತ್ತು ಜನಾಂಗೀಯ ಬೇರುಗಳ ಮಾನವೀಯತೆಯ ವಿಶಾಲವಾದ ಸಮುದ್ರವನ್ನು ಬೆಸೆಯಲು ಡಬ್ಲ್ಯು. ಎಸ್.ಎಫ್. ಉತ್ತಮ ವೇದಿಕೆಯನ್ನು ಒದಗಿಸಿತು.. ಜನ- ಆಧಾರಿತ ಪರ್ಯಾಯಗಳ ಮೂಲಕ ಸುಸ್ಥಿರ ಅಭಿವೃದ್ಧಿಯತ್ತ ಸಾಮಾಜಿಕ ಸಜ್ಜುಗೊಳಿಸುವಿಕೆಯ ವ್ಯಾಪಕ ಪ್ರಕ್ರಿಯೆಯಲ್ಲಿ ಡಬ್ಲ್ಯುಎಸ್ಎಫ್ 2004 ಒಂದು ಹೆಗ್ಗುರುತಿನ ಘಟನೆಯಾಗಿದೆ.

1) ಶಾಂತಿ ಮತ್ತು ಸುರಕ್ಷತೆ, 2) ಸಾಲ, ಅಭಿವೃದ್ಧಿ ಮತ್ತು ವ್ಯಾಪಾರ, 3) ದಲಿತರು, 4) ಪರಿಸರ ವಿಜ್ಞಾನ, ಸಂಸ್ಕೃತಿ ಮತ್ತು ಜ್ಞಾನ, 5) ಮೂಲಸೌಕರ್ಯ ಮತ್ತು ಯೋಜನೆ, 6) ರಾಷ್ಟ್ರ – ಪ್ರಭುತ್ವ ಪ್ರಜಾಪ್ರಭುತ್ವ ಮತ್ತು ಹೊರಗಿಡುವಿಕೆಗಳು, 7) ಮಹಿಳೆಯರು ಮತ್ತು (8) ಪರ್ಯಾಯಗಳು ಮತ್ತು ಜನರ ಹೋರಾಟಗಳು ಸೇರಿದಂತೆ ಎಂಟು ವಿಷಯಗಳನ್ನು ವೇದಿಕೆ ಒಳಗೊಂಡಿತ್ತು.. ಈ ಪ್ರತಿನಿಧಿ ಅಧಿವೇಶನಗಳ ಹೊರತಾಗಿ, ಇತರ ಕಾರ್ಯಕ್ರಮಗಳಲ್ಲಿ ಸಂಕಷ್ಟಿತರ ಧ್ವನಿಗಳು, ಸೆಮಿನಾರ್ ಗಳು, ಕಾರ್ಯಾಗಾರಗಳು, ಚಲನಚಿತ್ರೋತ್ಸವಗಳು, ಉಪನ್ಯಾಸಗಳು, ಸಾಕ್ಷ್ಯಗಳು, ಫಲಕ ಚರ್ಚೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಕೇಂದ್ರ ವಿಷಯದ ಸುತ್ತ ಸುತ್ತುವ ಚಲನಚಿತ್ರ ಪ್ರದರ್ಶನಗಳು ಸೇರಿದ್ದವು. ಸಮಾರೋಪ ರ್‍ಯಾಲಿಯಲ್ಲಿ 30 ಸಾವಿರ ಕಾರ್ಯಕರ್ತರು ಭಾಗವಹಿಸಿದ್ದರು. ಅದೇ ನಗರದಲ್ಲಿ ಭಾರತದ ಕೈಗಾರಿಕೆಗಳ ಒಕ್ಕೂಟದ ಪಾಲುದಾರಿಕೆ ಶೃಂಗಸಭೆಯ ವಿರುದ್ಧ ಆಂದೋಲನ ನಡೆಸಿದ್ದಕ್ಕಾಗಿ 400 ಪ್ರತಿಭಟನಾಕಾರರನ್ನು ಬಂಧಿಸಿದುದನ್ನು ರ್‍ಯಾಲಿ ಪ್ರತಿಭಟಿಸಿತು.

ಹೂಡಿಕೆಯ ಸಮಾಜೀಕರಣವಷ್ಟೇ...

ಪುಟ 13 ರಿಂದ

ದೋಷವನ್ನು ಮಾತ್ರ ಪರಿಹರಿಸಬಲ್ಲವಾಗಿದ್ದವು. ಆದರೆ, ಬಂಡವಾಳಶಾಹಿ ಅರ್ಥವ್ಯವಸ್ಥೆಯು ಕಾರ್ಯವಿಧಾನವೇ, ಅದು ವರ್ಗ ವೈಷಮ್ಯವನ್ನು ಆಧರಿಸಿದೆ ಎಂಬ ಅರ್ಥದಲ್ಲಿ, ದೋಷಪೂರಿತವಾಗಿದೆ. ಆದ್ದರಿಂದ, ಈ ವ್ಯವಸ್ಥೆಯನ್ನು ಅದರ ದೋಷಪೂರಿತ ಕಾರ್ಯನಿರ್ವಹಣೆಯಿಂದ ರಕ್ಷಿಸಬಹುದು ಎಂದು ನಂಬುವುದು ಒಂದು ಹುಚ್ಚು ಕಲ್ಪನೆಯಾಗುತ್ತದೆ.

ಆದಾಗ್ಯೂ, ಬಂಡವಾಳಶಾಹಿಯ ಅಡಿಯಲ್ಲಿ ಹಣದುಬ್ಬರವು ತೀವ್ರ ಸ್ವರೂಪದಲ್ಲಿ ಕಾಣಿಸಿಕೊಂಡಾಗ, ಮೂರನೇ ಜಗತ್ತಿನ ದೇಶಗಳ ಕಚ್ಚಾ ವಸ್ತುಗಳ ಮತ್ತು ವೇತನ ಸರಕುಗಳ (ಪ್ರಾಥಮಿಕ ಸರಕುಗಳ) ಕಿರು ಉತ್ಪಾದಕ ಪೂರೈಕೆದಾರರಿಗೆ ನಷ್ಟ ಉಂಟುಮಾಡಿ ಅದನ್ನು ಪರಿಹರಿಸುವ ಪ್ರಯತ್ನಗಳಿರುತ್ತವೆ. ಚೌಕಾಶಿಯ ಶಕ್ತಿ ಇಲ್ಲದ ಈ ಕಿರು ಉತ್ಪಾದಕ ಪೂರೈಕೆದಾರರು "ಕೊಟ್ಟಷ್ಟೇ ಬೆಲೆ ತೆಗೆದುಕೊಳ್ಳುವ"ರಾಗಿ ವ್ಯವಹರಿಸುತ್ತಾರೆ. ಮೆಟ್ರೊಪಾಲಿಟನ್ ಬಂಡವಾಳಶಾಹಿಗಳಿಗೆ ಲಾಗುವಾಡುಗಳನ್ನು ಪೂರೈಸುವ ಈ ಕಿರು ಉತ್ಪಾದಕರು ತಮ್ಮ ಉತ್ಪಾದನೆಯಲ್ಲಿ ತಮಗೆ ಸಲ್ಲಬೇಕಾದ ಪಾಲನ್ನೂ ಸಹ ಉಳಿಸಿಕೊಳ್ಳಲು ಸಾಧ್ಯವಿಲ್ಲ. ಹಾಗಾಗಿಯೇ ಹಣದುಬ್ಬರದ ಏರಿಕೆಯನ್ನು, ಅಂತಿಮವಾಗಿ, ಅವರಿಗೆ ನಷ್ಟ ಉಂಟುಮಾಡಿ ಮಣಿಸಲಾಗುತ್ತದೆ. ಸಾಮ್ರಾಜ್ಯಶಾಹಿಯ ಒಂದು ಪ್ರಮುಖ ಪಾತ್ರವೆಂದರೆ, ವಾಸ್ತವವಾಗಿ, ಅವರು ತಮಗೆ ಎಷ್ಟು ಬೇಕೊ ಅಷ್ಟು "ಬೆಲೆ ತೆಗೆದುಕೊಳ್ಳುವ"ವರಾಗಿ ಉಳಿಯುತ್ತಾರೆ. ಆದರೆ, ಈಗಾಗಲೇ ಸಾಕಷ್ಟು ಹಿಂಡುವಿಕೆಯನ್ನು ತಾಳಿಕೊಂಡಿರುವ ಮತ್ತು ತುಳಿತವನ್ನು ಸಹಿಸಿಕೊಂಡಿರುವ ಕಿರು ಉತ್ಪಾದಕ ಪೂರೈಕೆದಾರರ ಇತಿಹಾಸವನ್ನು ಗಮನಿಸಿದರೆ, ಇನ್ನು ಮುಂದೆ ಅವರನ್ನು ಮತ್ತಷ್ಟು ಹಿಂಡಿ ಹಿಪ್ಪೆ ಮಾಡಿ ನಗರಗಳಲ್ಲಿ ಹಣದುಬ್ಬರವನ್ನು ನಿಯಂತ್ರಿಸುವುದು ಈ ವೇಳೆಗೆ ಬಹುತೇಕ ಅಸಾಧ್ಯವಾಗಿ ಕಾಣುತ್ತದೆ. ಇದಲ್ಲದೆ, ಮೆಟ್ರೊಪಾಲಿಟನ್ ಬಂಡವಾಳಶಾಹಿಯು ಇತರ ರಾಷ್ಟ್ರಗಳಿಗೆ ನಷ್ಟ ಉಂಟುಮಾಡಿ ತನ್ನನ್ನು ಶಾಶ್ವತವಾಗಿ ಸ್ಥಿರಗೊಳಿಸಿಕೊಳ್ಳಬಹುದು ಎಂದು ನಂಬುವುದು ರೋಷಕಾರಕವೂ ಮತ್ತು ಅವಾಸ್ತವಿಕವೂ ಆಗುತ್ತದೆ.



ಚೀನಾ ಕಮ್ಯುನಿಸ್ಟ್ ಪಕ್ಷದ ಸಾಧನೆಗಳು ಸಮಾಜವಾದದ ಹಿರಿಮೆಯನ್ನು ಸಾಬೀತುಗೊಳಿಸಿವೆ

–ಸಿ.ಪಿ.ಸಿ.ಶತಮಾನೋತ್ಸವ ಸಂದರ್ಭದಲ್ಲಿ ಸಿ.ಪಿ.ಐ(ಎಂ) ಶುಭಾಶಯ

ಚೀನಾ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಚೀನಾಕ್ಕೆ 2020 ರೊಳಗೆ ಸಂಪೂರ್ಣವಾಗಿ ಬಡತನವನ್ನು ನಿರ್ಮೂಲನೆ ಮಾಡಲು, ಪ್ರತಿ ವರ್ಷವೂ ಲಕ್ಷಾಂತರ ಉದ್ಯೋಗಗಳನ್ನು ಸೃಷ್ಟಿ ಮಾಡುವ ಮೂಲಕ ನಿರುದ್ಯೋಗವನ್ನು ತಗ್ಗಿಸಲು. ತನ್ನ ಆರೋಗ್ಯಪಾಲನೆ ವ್ಯವಸ್ಥೆಯನ್ನು ಬಲಪಡಿಸಲು ಮತ್ತು ವಿಶ್ವಮಾನ್ಯ ಮೂಲ ಸೌಕರ್ಯಗಳು ಹಾಗೂ ಶಿಕ್ಷಣ ಸಂಸ್ಥೆಗಳನ್ನು ಕಟ್ಟಲು ಸಾಧ್ಯವಾಗಿದೆ. "ಅಸಮಾನತೆ ಮತ್ತು ಭಷ್ಟಾಚಾರವನ್ನು ನಿರ್ಮೂಲಗೊಳಿಸುವ, ಮತ್ತು ಜೀವನದ ಗುಣಮಟ್ಟವನ್ನು ಎತ್ತರಿಸುವ ನಮ್ಮ ಪ್ರಯತ್ನಗಳು ಶ್ಲಾಘನಾರ್ಹ" ಎಂದು ಚೀನಾ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯ ಶತಮಾನೋತ್ಸವದ ಸಂದರ್ಭದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಚೀನಾ ಕಮ್ಯುನಿಸ್ಟ್ ಪಕ್ಷ(ಸಿ.ಪಿ.ಸಿ.)ದ ಪ್ರಧಾನ ಕಾರ್ಯದರ್ಶಿ ಕ್ಸಿ ಜಿನ್ಪಿಂಗ್‌ರವರಿಗೆ ಕಳಿಸಿದ ಸಂದೇಶದಲ್ಲಿ ಹೇಳಿದ್ದಾರೆ. ಈ ಶುಭಾಶಯ ಸಂದೇಶವನ್ನು ಮೇ 27ರಂದು ನಡೆದ ವೆಬಿನಾರ್‌ನಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಅರುಣ್ ಕುಮಾರ್ ಓದಿದರು. ಅದರ ಪೂರ್ಣ ಪಾಟವನ್ನು ಈ ಮುಂದೆ ಕೊಡಲಾಗಿದೆ:

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಪರವಾಗಿ ನಾನು ಚೀನಾ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯ ಶತಮಾನೋತ್ಸವದ ಸಂದರ್ಭದಲ್ಲಿ ಸೋದರ ಕಮ್ಯುನಿಸ್ಟ್ ಶುಭಾಶಯಗಳನ್ನು ತಿಳಿಸುತ್ತಿದ್ದೇನೆ.

ಭಾರತ ಕಮ್ಯುನಿಸ್ಟ್ ಪಕ್ಷವು ಒಂದು ನಿರ್ದಯಿ ವಸಾಹತುಶಾಹಿ ಶಕ್ತಿಯಾಗಿದ್ದ ಬ್ರಿಟಿಷರು ಆಳುತ್ತಿದ್ದ ಭಾರತದ ಭೂಪ್ರದೇಶದ ಹೊರಗಡೆ ಕೆಲವು ತಿಂಗಳುಗಳ ಮುಂಚೆ ಸ್ಥಾಪನೆಗೊಂಡಿತು. ಅಂದಿನಿಂದ ಈ ಶತಮಾನದ ಪಯಣದಲ್ಲಿ ಸೋದರ ಕಮ್ಯುನಿಸ್ಟ್ ಪಕ್ಷಗಳಾಗಿ ನಮ್ಮ ಎರಡೂ ಪಕ್ಷಗಳು, ಏಳು–ಬೀಳುಗಳ ನಡುವೆ, ಸೋದರ ಕಮ್ಯೂನಿಸ್ಟ್ ಸಂಬಂಧಗಳನ್ನು ಕಾಯ್ದುಕೊಂಡು ಬಂದಿವೆ.

ಸಿಪಿಐ(ಎಂ) ಮಾರ್ಕ್ಸ್‌ವಾದ–ಲೆನಿನ್‌ವಾದ ಒಂದು ಸೃಜನಾತ್ಮಕ ವಿಜ್ಞಾನ ಎಂಬುದಕ್ಕೆ ಒತ್ತು ಕೊಡುತ್ತಲೇ ಇದೆ. ಇದನ್ನು ಎಂದೆಂದಿಗೂ ಸೂತ್ರಗಳ ಒಂದು ಕಂತೆಯ ಮಟ್ಟಕ್ಕೆ ಇಳಿಸಲು ಸಾಧ್ಯವಿಲ್ಲ. ಒಂದು ಸೃಜನಾತ್ಮಕ ವಿಜ್ಞಾನವಾಗಿ, ಇದು ತನ್ನ ಕ್ರಾಂತಿಕಾರಿ ಧ್ಯೇಯಗಳು ಮತ್ತು ವಿಮೋಚನಾತ್ಮಕ ಗುರಿಗಳಿಗೆ ಕಟ್ಟುನಿಟ್ಟಾಗಿ ಬದ್ಧವಾಗಿರುತ್ತಲೇ, ಪ್ರತಿಯೊಂದು ದೇಶದಲ್ಲಿ ಪ್ರತಿಯೊಂದು ಕಾಲದಲ್ಲಿ ಕಾಣಬರುವ ಮೂರ್ತ ಪರಿಸ್ಥಿತಿಗಳಿಗೆ ಹೊಂದಿಕೊಳ್ಳಬೇಕು. ಲೆನಿನ್ ಹೇಳಿರುವಂತೆ, "ಮೂರ್ತ ಪರಿಸ್ಥಿತಿಯ ಮೂರ್ತ ವಿಶ್ಲೇಷಣೆಯು ಗತಿತಾರ್ಕಿಕತೆಯ ಜೀವಂತ ಸಾರ".

ಚೀನಾ ಕಮ್ಯುನಿಸ್ಟ್ ಪಕ್ಷದ ಕಳೆದ ಶತಮಾನದ ಚರಿತ್ರೆಯು ಮಾರ್ಕ್ಸ್‌ವಾದ–ಲೆನಿನ್‌ವಾದದ ಈ ಸೃಜನಾತ್ಮಕ ವಿಜ್ಞಾನವನ್ನು ಚೀನಾದಲ್ಲಿನ ಮೂರ್ತ ಪರಿಸ್ಥಿತಿಗಳಿಗೆ ಅಳವಡಿಸಿಕೊಂಡಿರುವ ವಿಧಾನಕ್ಕೆ ಒಂದು ರುಜುವಾತು. ಚೀನಾ ಕಮ್ಯುನಿಸ್ಟ್ ಪಕ್ಷವು ಇಂತಹ ಒಂದು ಅಳವಡಿಕೆಯಿಂದ, ರಷ್ಯಾ ಕ್ರಾಂತಿಯ ಸ್ಫೂರ್ತಿ ಮತ್ತು ಅನುಭವದಿಂದ ಕಲಿಯುತ್ತಲೇ ಸಿದ್ಧಾಂತದ ಅನ್ವಯ ಮತ್ತು ಪ್ರಯೋಗದಲ್ಲಿಯೂ ಹೊಸತನವಿದ್ದ ಒಂದು ಮಾರ್ಗದಲ್ಲಿ ನಡೆದು ರಾಷ್ಟ್ರೀಯ ವಿಮೋಚನಾ ಚಳುವಳಿಯ ನಾಯಕತ್ವವನ್ನು ಯಶಸ್ವಿಯಾಗಿ ವಹಿಸಿಕೊಂಡಿತು. ಅಂತಿಮವಾಗಿ ಇದು ಸಮಾಜವಾದಿ ಚೀನಾದ–ಚೀನಾ ಜನತಾ ಗಣತಂತ್ರದ ಸ್ಥಾಪನೆಗೆ ಎಡೆ ಮಾಡಿತು.

ಈ ದೀರ್ಘ ಚರಿತ್ರೆಯಲ್ಲಿ ಪ್ರತಿಯೊಂದು ತಿರುವು ಮತ್ತು ತಿರುಗಿನಲ್ಲಿ ಚೀನಾ ಕಮ್ಯೂನಿಸ್ಟ್ ಪಕ್ಷವು ಹಲವು ಪರೀಕ್ಷೆಗಳು ಮತ್ತು ತೊಂದರೆಗಳನ್ನು ಎದುರಿಸಬೇಕಾಯಿತು. ಹಲವು ತಪ್ಪುಗಳನ್ನು ಮಾಡಿತು, ಅವನ್ನು ಗುರುತಿಸಿ, ಪತ್ತೆ ಹಚ್ಚಿ. ಸರಿ ಪಡಿಸಿಕೊಳ್ಳಲಾಯಿತು ಮತ್ತು ಸಮಾಜವಾದಿ ಚೀನಾವನ್ನು ಕ್ರೋಡೀಕರಣದತ್ತ ಮುಂದೊಯ್ಯಲಾಯಿತು. ಹಲವು ಕಠಿಣ ಹೋರಾಟಗಳಿದ್ದವು, ಕೆಲವು ಸಾಮಾಜಿಕ ಪ್ರಕ್ಷುಬ್ಧತೆಯನ್ನು ಉಂಟುಮಾಡಿದ ಸಂದರ್ಭಗಳೂ ಬಂದವು. ಆದರೆ ಈ ತಪ್ಪುಗಳನ್ನು ಸರಿಪಡಿಸಿಕೊಂಡು ಮತ್ತು ಈ ತಪ್ಪುಗಳು ಪುನರಾವರ್ತನೆಯಾಗದಂತೆ ನೋಡಿಕೊಂಡು, ಚೀನಾ ಕಮ್ಯುನಿಸ್ಟ್ ಪಕ್ಷವು ವಿಜಯಶಾಲಿಯಾಗಿ ಹೊರ ಹೊಮ್ಮಿತು.

ಚೀನಾ ಕಮ್ಯುನಿಸ್ಟ್ ಪಕ್ಷದ ಅನುಭವವು ತಪ್ಪುಗಳನ್ನು ಗುರುತಿಸುವುದು, ತಿದ್ದಿಕೊಳ್ಳುವುದು ಮತ್ತು ಈ ತಪ್ಪುಗಳ ಪುನರಾವರ್ತನೆಯ ಪರಿಸ್ಥಿತಿಗಳನ್ನು ಅಳಿಸುವುದು, ಭವಿಷ್ಯದಲ್ಲಿ ವಿಮೋಚನೆಯ ಜನತಾ ಚಳುವಳಿಯನ್ನು ಭವಿಷ್ಯದೆಡೆಗೆ ಮುಂದೊಯ್ಯುವುದರ ತಿರುಳು ಎಂಬುದನ್ನು ದೃಢೀಕರಿಸುತ್ತಿದೆ.

ಹೊಸತನ, ಸ್ವಯಂ ವಿಮರ್ಶಾತ್ಮಕ ಮೌಲ್ಯಮಾಪನೆ ಮತ್ತು ಸರಿಪಡಿಕೆಯ ಈ ಪ್ರಕ್ರಿಯೆಯ ಮೂಲಕ ಚೀನಾ ಕಮ್ಯುನಿಸ್ಟ್ ಪಕ್ಷವು 1978 ರಲ್ಲಿ ಒಂದು ದಿಟ್ಟ ಸುಧಾರಣೆಗಳ ಹಾದಿ ಹಿಡಿಯಿತು. ಇದರ ಬೆರಗುಗೊಳಿಸುವ ಫಲಿತಾಂಶಗಳು ಎಲ್ಲರ ಮುಂದಿವೆ, ಮತ್ತು ಇಡೀ ವಿಶ್ವವೇ ಎದ್ದು ನಿಂತು ಗಮನಸುವಂತಿವೆ. ಈ ಸುಧಾರಣೆಗಳು ಮತ್ತು ತೆರೆದುಕೊಳ್ಳುವ ಪ್ರಕ್ರಿಯೆ ಮಾರ್ಕ್ಸ್‌ವಾದ–ಲೆನಿನ್‌ವಾದದ ಕ್ರಾಂತಿಕಾರಿ ತತ್ವಗಳ ಮಾರ್ಗದರ್ಶನದಲ್ಲಿ ನಡೆಯುತ್ತವೆ ಮತ್ತು ಸಮಾಜವಾದವನ್ನು ದುರ್ಬಲಗೊಳಿಸುವ ಮತ್ತು ಶಕ್ತಿಗುಂದಿಸುವ ಪ್ರತಿಯೊಂದು ಅವಕಾಶಕ್ಕೆ ಹೊಂಚುಹಾಕುತ್ತಿರುವ ಸಮಾಜವಾದದ ವಿರೋಧಿಗಳಿಗೆ ಯಾವುದೇ ಅವಕಾಶ ನೀಡದಂತೆ ನಡೆಯುತ್ತವೆ ಎಂಬ ಭರವಸೆ ನಮಗಿದೆ. ಈ ಸುಧಾರಣೆಗಳು ಮತ್ತು ತೆರೆದುಕೊಳ್ಳುವ ದಶಕಗಳ ಸಂದರ್ಭದಲ್ಲಿ ಚೀನಾ ಕಮ್ಯುನಿಸ್ಟ್ ಪಕ್ಷವು, ಸಮಾಜವಾದವನ್ನು ಕಳೆಗುಂದಿಸುವ ಸಾಮ್ರಾಜ್ಯಶಾಹಿಯ ಧ್ಯೇಯಸಾಧನೆಗೆ ಚೀನಾ ಜನತಾ ಗಣತಂತ್ರದ ಮೇಲೆ ಗುರಿಯಿಟ್ಟ ಎಲ್ಲ ಎದುರಾಳಿಗಳನ್ನು ಯಶಸ್ವಿಯಾಗಿ ಎದುರಿಸಿತು. ಈ ವರ್ಗ ಸಮರಗಳು ಕೋವಿಡೋತ್ತರ ಜಗತ್ತನ್ನು ರೂಪಿಸುವ ಸಾಮ್ರಾಜ್ಯಶಾಹಿ ಪ್ರಯತ್ನಗಳಲ್ಲಿ ಮುಂದುವರೆಯುತ್ತವೆ. ಈ ಕುತಂತ್ರಗಳನ್ನು ಚೀನಾ ಕಮ್ಯೂನಿಸ್ಟ್ ಪಕ್ಷವು ಯಶಸ್ವಿಯಾಗಿ ಹಿಮ್ಮೆಟ್ಟಿಸಲಿ ಎಂದು ಸಿಪಿಐ(ಎಂ) ಹಾರೈಸುತ್ತದೆ.



ಇಂದಿನ ಜಗತ್ತು, ಅಮಾನವೀಯತೆ ಅಂತರ್ಗತವಾಗಿರುವ ಬಂಡವಾಳಶಾಹಿ ವ್ಯವಸ್ಥೆಯು ಎಂದಿಗೂ ಸಹ ಮಾನವಶೋಷಣೆ ಮತ್ತು ವ್ಯವಸ್ಥಾಗತ ಬಿಕ್ಕಟ್ಟುಗಳಿಂದ ಮುಕ್ತವಾಗಿರುವ ವ್ಯವಸ್ಥೆಯಾಗಿರಲು ಸಾಧ್ಯವೇ ಇಲ್ಲ ಎಂಬ ಮಾರ್ಕ್ಸ್‌ವಾದಿ–ಲೆನಿನ್‌ವಾದಿ ತಿಳುವಳಿಕೆಯನ್ನು ದೃಢಪಡಿಸಿದೆ. ಲಾಭವನ್ನು ಗರಿಷ್ಠಗೊಳಿಸುವ ಮತ್ತು ಅದಕ್ಕಾಗಿಯೇ ಶೋಷಣೆಯನ್ನು ತೀವ್ರಗೊಳಿಸುವ ತರ್ಕದ ಮೇಲೆಯೇ ಈ ವ್ಯವಸ್ಥೆಯ ಅಸ್ತಿತ್ವ ನಿಂತಿದೆ. 21ನೇ ಶತಮಾನದ ಪ್ರಾರಂಭದ ಎರಡು ದಶಕಗಳು, ಜಾಗತಿಕ ಬಂಡವಾಳಶಾಹಿಯು, ತಾನೇ ಸೃಷ್ಟಿಸಿಕೊಂಡ ಬಿಕ್ಕಟ್ಟಿನಿಂದ ಹೊರಬರಲು, ನಿರ್ದಿಷ್ಟವಾಗಿ 2008 ರಲ್ಲಿ ಜಾಗತಿಕ ಆರ್ಥಿಕ ಕುಸಿತದ ನಂತರದಲ್ಲಿ, ಅಸಮರ್ಥವಾಗಿದೆ ಎಂಬುದನ್ನು ತೋರಿಸಿವೆ.

ಜಾಗತಿಕ ಆರ್ಥಿಕತೆಯು ನಿಧಾನಗೊಂಡು ಹಿಂಜರಿತದತ್ತ ಸರಿಯುತ್ತಿದ್ದ ಸಂದರ್ಭದಲ್ಲಿ ಕೋವಿಡ್ ಸಾಂಕ್ರಾಮಿಕವು ಬಂದು, ಅದಾಗಲೇ ಕುಂಟುತ್ತಿದ್ದ ಜಾಗತಿಕ ಆರ್ಥಿಕತೆಯನ್ನು ಧ್ವಂಸ ಮಾಡಿದೆ. ಅಂತರರಾಷ್ಟ್ರೀಯ ಹಣಕಾಸು ಬಂಡವಾಳದ ನೇತೃತ್ವದ ವಸಾಹತುಶಾಹಿ ನವ–ಉದಾರವಾದೀ ಜಾಗತೀಕರಣವು ಯಾವುದೇ ಪರಿಹಾರ ಒದಗಿಸುವಲ್ಲಿ ತನ್ನ ಸಂಪೂರ್ಣ ದಿವಾಳಿತನವನ್ನು ತೋರಿಸುತ್ತಿದೆ.

ಚೀನಾ ಜನತಾ ಗಣತಂತ್ರವು ಕೋವಿಡ್ ಸಾಂಕ್ರಾಮಿಕವನ್ನು ನಿಭಾಯಿಸಿದ ಮತ್ತು ತಡೆದು ನಿಲ್ಲಿಸಿದ ಹಾಗೂ ತನ್ನ ಸಮಾಜ ಮತ್ತು ಆರ್ಥಿಕತೆಯನ್ನು ಎಲ್ಲ ಮುನ್ನೆಚ್ಚರಿಕೆಗಳೊಂದಿಗೆ ಮತ್ತೆ ತೆರೆದು, ಆರ್ಥಿಕತೆಯನ್ನು ಬೆಳವಣಿಗೆಯ ಪಥದಲ್ಲಿ ಪುನಃ ತೆಗೆದುಕೊಂಡು ಹೋಗುತ್ತಿರುವ ಮಾದರಿ ನಡೆಯು ಬಂಡವಾಳಶಾಹಿಗೆ ಹೋಲಿಸಿದರೆ ಸಮಾಜವಾದವು ಒಂದು ವ್ಯವಸ್ಥೆಯಾಗಿ ಹೇಗೆ ಮೇಲ್ಮಟ್ಟದ್ದು ಎಂಬುದನ್ನು ಜಗತ್ತಿಗೆ ಸಾಬೀತು ಮಾಡುವ, ಒಂದು ಪಾಟವಾಗಿದೆ.

ಚೀನಾ ಕಮ್ಯುನಿಸ್ಟ್ ಪಕ್ಷದ ಈ ಕ್ರಮಗಳ ಮುತುವರ್ಜಿಯಿಂದಾಗಿ ಚೀನಾಕ್ಕೆ 2020 ರೊಳಗೆ ಸಂಪೂರ್ಣವಾಗಿ ಬಡತನವನ್ನು ನಿರ್ಮೂಲನೆ ಮಾಡಲು, ಪ್ರತಿ ವರ್ಷವೂ ಲಕ್ಷಾಂತರ ಉದ್ಯೋಗಗಳನ್ನು ಸೃಷ್ಟಿ ಮಾಡುವ ಮೂಲಕ ನಿರುದ್ಯೋಗವನ್ನು ತಗ್ಗಿಸಲು, ತನ್ನ ಆರೋಗ್ಯಪಾಲನೆ ವ್ಯವಸ್ಥೆಯನ್ನು ಬಲಪಡಿಸಲು ಮತ್ತು ವಿಶ್ವಮಾನ್ಯ ಮೂಲ ಸೌಕರ್ಯಗಳು ಹಾಗೂ ಶಿಕ್ಷಣ ಸಂಸ್ಥೆಗಳನ್ನು ಕಟ್ಟಲು ಸಾಧ್ಯವಾಗಿದೆ. ಚೀನಾ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಮಾಡಿದ ಹೂಡಿಕೆಗಳ ಪ್ರಯೋಜನಗಳನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಬೆಳವಣಿಗೆಯ ಸ್ವರೂಪದಲ್ಲಿ ಅಪಾರವಾಗಿ ಪಡೆಯುತ್ತಿದೆ. ಅಸಮಾನತೆ ಮತ್ತು ಭಷ್ಟಾಚಾರವನ್ನು ನಿರ್ಮೂಲಗೊಳಿಸುವ, ಮತ್ತು ಜೀವನದ ಗುಣಮಟ್ಟವನ್ನು ಎತ್ತರಿಸುವ ನಿಮ್ಮ ಪ್ರಯತ್ನಗಳು ಶ್ಲಾಘನಾರ್ಹ.

ನಿಮ್ಮ ಯಶಸ್ಸುಗಳನ್ನು ಮತ್ತು ನಿಮ್ಮದೇ ಸ್ವಯಂ ವಿಮರ್ಶಾತ್ಮಕ ಸರಿಪಡಿಕೆಗಳಿಂದ ಕಲಿಯುವುದನ್ನು ಶ್ಲಾಘಿಸುತ್ತಲೇ ಸಿಪಿಐ(ಎಂ) ತನ್ನ ಕ್ರಾಂತಿಕಾರಿ ಶುಭಾಶಯಗಳನ್ನು ವ್ಯಕ್ತಮಾಡುತ್ತದೆ, ಮತ್ತು ಒಂದು "ಸಮೃದ್ಧಿಶೀಲ, ಬಲಿಷ್ಠ, ಪ್ರಜಾಸತ್ತಾತ್ಮಕ, ಸಾಂಸ್ಕೃತಿಕವಾಗಿ ಮುಂದುವರಿದ ಮತ್ತು ಸಾಮರಸ್ಯದ ಆಧುನಿಕ ಸಮಾಜವಾದಿ ದೇಶ"ವನ್ನು 2049 ರೊಳಗೆ ಕಟ್ಟುವ ನಿಮ್ಮ ಇನ್ನೊಂದು ಶತಮಾನದ ಗುರಿಯು ಈಡೇರಲಿ ಹಾರೈಸುತ್ತದೆ.

ಚೀನಾ ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲಿ ಚೀನಾ ಜನತಾ ಗಣತಂತ್ರವು ಒಂದು ಶಾಂತಿಯುತ ವಿದೇಶಾಂಗ ನೀತಿಯನ್ನು ಅನುಸರಿಸುತ್ತದೆ, ಉತ್ತಮ ನೆರೆಹೊರೆ ಬಾಂಧವ್ಯಗಳನ್ನು ಗಟ್ಟಿಗೊಳಿಸುತ್ತದೆ ಮತ್ತು ದಕ್ಷಿಣ ಏಷಿಯಾ ಹಾಗೂ ವಿಶ್ವದಲ್ಲಿ ಶಾಂತಿ ಮತ್ತು ಸ್ಥಿರತೆಗೆ ಕೊಡುಗೆ ನೀಡುತ್ತದೆ ಎಂಬ ವಿಶ್ವಾಸ ಸಿಪಿಐ(ಎಂ)ಗೆ ಇದೆ.

ಮುಂದಿನ ದಿನಗಳಲ್ಲಿ ನಮ್ಮ ಎರಡು ಪಕ್ಷಗಳ ನಡುವೆ ಸೋದರ ಕಮ್ಯುನಿಸ್ಟ್ ಬಾಂಧವ್ಯಗಳು ಬಲಗೊಳ್ಳುತ್ತಾ ಹೋಗುತ್ತವೆ. ಮತ್ತು ನಮ್ಮ ಜನಗಳು ಹಾಗೂ ಸರ್ಕಾರಗಳ ನಡುವಿನ ಸಂಬಂಧಗಳು ಉತ್ತಮಗೊಳ್ಳಲು ಕೊಡುಗೆ ನೀಡುತ್ತವೆ ಎಂಬ ವಿಶ್ವಾಸವನ್ನು ಸಿಪಿಐ(ಎಂ) ಹೊಂದಿದೆ.

ಮಾರ್ಕ್ಸ್‌ವಾದ–ಲೆನಿನ್‌ವಾದ ಚಿರಾಯುವಾಗಲಿ
ಚೀನಾ ಕಮ್ಯುನಿಸ್ಟ್ ಪಕ್ಷ ಚಿರಾಯುವಾಗಲಿ
ಸಾಮ್ರಾಜ್ಯಶಾಹಿಗೆ ಧಿಕ್ಕಾರ

ಅನು: ಶೃಂಶನಾ

"ಚೀನಾ ಜನತಾ ಗಣತಂತ್ರವು ಕೋವಿಡ್ ಸಾಂಕ್ರಾಮಿಕವನ್ನು ನಿಭಾಯಿಸಿದ ಮತ್ತು ತಡೆದು ನಿಲ್ಲಿಸಿದ ಹಾಗೂ ತನ್ನ ಸಮಾಜ ಮತ್ತು ಆರ್ಥಿಕತೆಯನ್ನು ಎಲ್ಲ ಮುನ್ನೆಚ್ಚರಿಕೆಗಳೊಂದಿಗೆ ಮತ್ತೆ ತೆರೆದು, ಆರ್ಥಿಕತೆಯನ್ನು ಬೆಳವಣಿಗೆಯ ಪಥದಲ್ಲಿ ಪುನಃ ತೆಗೆದುಕೊಂಡು ಹೋಗುತ್ತಿರುವ ಮಾದರಿ ನಡೆಯು ಬಂಡವಾಳಶಾಹಿಗೆ ಹೋಲಿಸಿದರೆ ಸಮಾಜವಾದವು ಒಂದು ವ್ಯವಸ್ಥೆಯಾಗಿ ಹೇಗೆ ಮೇಲ್ಮಟ್ಟದ್ದು ಎಂಬುದನ್ನು ಜಗತ್ತಿಗೆ ಸಾಬೀತು ಮಾಡುವ, ಒಂದು ಪಾಟವಾಗಿದೆ."

"ಚೀನಾ ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲಿ ಚೀನಾ ಜನತಾ ಗಣತಂತ್ರವು ಒಂದು ಶಾಂತಿಯುತ ವಿದೇಶಾಂಗ ನೀತಿಯನ್ನು ಅನುಸರಿಸುತ್ತದೆ, ಉತ್ತಮ ನೆರೆಹೊರೆ ಬಾಂಧವ್ಯಗಳನ್ನು ಗಟ್ಟಿಗೊಳಿಸುತ್ತದೆ ಮತ್ತು ದಕ್ಷಿಣ ಏಷಿಯಾ ಹಾಗೂ ವಿಶ್ವದಲ್ಲಿ ಶಾಂತಿ ಮತ್ತು ಸ್ಥಿರತೆಗೆ ಕೊಡುಗೆ ನೀಡುತ್ತದೆ ಎಂಬ ವಿಶ್ವಾಸ ಸಿಪಿಐ(ಎಂ)ಗಿದೆ."

JANASHAKTHI KANNADA VARA PATRIKE July 12-18, 2021 Price: Rs. 10/- Date of Publication: 09 July 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21





ಗ್ಯಾಸ್ ದರ ಏರಿಕೆ ಖಂಡಿಸಿ ಡಿವೈಎಫ್ಐ ನಿಂದ ರಾಜ್ಯಾದಾದ್ಯಂತ ಪ್ರತಿಭಟನೆ









ಸಿಐಟಿಯುನಿಂದ ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಲ್ಲಿ ರಾಜ್ಯಾದ್ಯಂತ ಪ್ರತಿಭಟನೆ

ವರದಿ ಪುಟ 4 ರಲ್ಲಿ











JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**